# ಯೋಜನಾ

ಮೇ 2015 ಅಭಿವೃದ್ಧಿ ಮಾಸಪತ್ರಿಕೆ ₹ 10/-


## ಪ್ರವಾಸೋದ್ಯಮ : ಅರಳುತ್ತಿರುವ ಉದ್ದಿಮೆ

**ಶೈಕ್ಷಣಿಕ ಪ್ರವಾಸೋದ್ಯಮ : ಅಂದು, ಇಂದು, ಮುಂದು**
ಅರ್ಚನಾ ಕುಮಾರಿ ಮತ್ತು ದಿವ್ಯಾಂಶು ಕುಮಾರ್

**ಕಾಯಕಲ್ಪಕ್ಕಾಗಿ ಕಾದಿರುವ ಪ್ರವಾಸೋದ್ಯಮ**
ಜಿ. ಆಂಜನೇಯ ಸ್ವಾಮಿ

**ಭೀತರ್‌ಕನಿಕ ರಾಷ್ಟ್ರೀಯ ಉದ್ಯಾನದ ಮಾದರಿ**
ಮಧುಮಿತಾ ದಾಸ್ ಮತ್ತು ಬಾನಿ ಚಟರ್ಜಿ

**ವೀಸಾ : ಪ್ರವಾಸಿಗರಿಗಿನ್ನು ಪ್ರಯಾಸವಿಲ್ಲ**
ನಾಣು ಭಾಸಿನ್, ನವನೀತ ಕೌರ್



ಮೇ 2015 ಸಂಚಿಕೆ – 10 ಸಂಪುಟ – 30

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................................................. 2

ಕಾಯಕಲ್ಪಕ್ಕಾಗಿ ಕಾದಿರುವ ಪ್ರವಾಸೋದ್ಯಮ .............................. 3
* **ಪ್ರೊ. ಜಿ. ಆಂಜನೇಯ ಸ್ವಾಮಿ**

ಭೀತರ್‌ಕನಿಕ ರಾಷ್ಟ್ರೀಯ ಉದ್ಯಾನದ ಮಾದರಿ ........................ 7
* **ಮಧುಮಿತಾ ದಾಸ್** ** **ಬಾನಿ ಚಟರ್ಜಿ**

ಶೈಕ್ಷಣಿಕ ಪ್ರವಾಸೋದ್ಯಮ: ಅಂದು, ಇಂದು, ಮುಂದು ........... 10
* **ಅರ್ಚನಾ ಕುಮಾರಿ** ** **ದಿವ್ಯಾಂಶು ಕುಮಾರ್**

ವೀಸಾ – ಪ್ರವಾಸಿಗರಿಗಿನ್ನು ಪ್ರಯಾಸವಿಲ್ಲ ............................ 14
* **ನಾಣು ಭಾಸಿನ್** ** **ನವನೀತ ಕೌರ್**

ಆರೋಗ್ಯ ಪ್ರವಾಸದ ನಾಡಿ ಮಿಡಿತ ........................................ 18
* **ಡಾ|| ಹರಿಹರನ್**

ಮೂಲಸೌಕರ್ಯ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿ ......... 23
* **ಮನೋಜ್ ದೀಕ್ಷಿತ್**

ಭಾರತೀಯ ಪ್ರವಾಸೋದ್ಯಮದ ಉತ್ಕೃಷ್ಟ ಆರಂಭ ................. 33
* **ರತ್ನದೀಪ್ ಬ್ಯಾನರ್ಜಿ**

ಆರ್ಥಿಕ ಬೆಳವಣಿಗೆಯಲ್ಲಿ ಪ್ರವಾಸೋದ್ಯಮ ........................... 38
* **ಪ್ರೇಮ್ ಸುಬ್ರಹ್ಮಣ್ಯಂ**

ಕೈ ಬೀಸಿ ಕರೆವ ಕರುನಾಡು ................................................. 42
* **ಡಾ|| ಕೆ.ಎಸ್. ನಾಗಪತಿ**

ಪ್ರಕೃತಿ ಮಡಿಲ ಪ್ರವಾಸೋದ್ಯಮ ........................................... 46
* **ಎ.ಎಂ. ಅಣ್ಣಯ್ಯ**

ನಿಮಗಿದು ತಿಳಿದಿದೆಯೇ? .................................................. 51

ವಾರ್ತಾ ವಿಶೇಷ ............................................................. 52

ಮುಖಪುಟ ವಿನ್ಯಾಸ : ಗಜಾನನ ಪಿ. ಧೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಪರ್ಯಟನೆ



**ದೇ**ಶ ಸುತ್ತು ಕೋಶ ಓದು ಎನ್ನುವ ಮಾತಿದೆ. ತನು, ಮನದ ಜ್ಞಾನಕ್ಕೆ ನಮ್ಮ ಹಿರೀಕರು ಕಂಡುಕೊಂಡ ಮಾರ್ಗವಿದು. ಅನುಭವ, ತನ್ಮೂಲಕ ಅನುಭಾವಕ್ಕೆ ಬಾರದ ಜ್ಞಾನವನ್ನು ಪುಸ್ತಕದ ಬದನೆಕಾಯಿ ಎಂದೂ ದೂರುವುದಿದೆ. ಒಂದೇ ಒಂದು ಸುತ್ತಾಟ, ಪುಸ್ತಕವೊಂದು ನೀಡುವ ಜ್ಞಾನಕ್ಕಿಂತ ಹೆಚ್ಚಿನ ಜ್ಞಾನ ಮೈಗೂಡಿಸುತ್ತದೆ ಎನ್ನುವುದು ಅನುಭವ ವೇದ್ಯ ಮಾತು. ಇದು 'ವಿಶ್ವ ಪುಸ್ತಕವಿದ್ದಂತೆ, ಸುತ್ತಾಡಲಾರದವ ಯಾವ ಜ್ಞಾನವನ್ನು ಗಳಿಸಲಾರ, ಎನ್ನುವ ಸೇಂಟ್ ಆಗಸ್ಟಿನ್ ಹೇಳಿಕೆಯನ್ನು ನೆನಪಿಸುತ್ತದೆ. ತಿರುಗಾಟಕ್ಕೆ ಧನ ಬೇಕು; ಹಾಗೆಯೇ ಅದಕ್ಕಾಗಿ ವೇಳೆ ಮೀಸಲಿಡುವ ಮನಸ್ಸೂ ಬೇಕು.

ವಿಶ್ವ ಭೂಪಟದತ್ತ ಕಣ್ಣು ಹಾಯಿಸಿದಾಗ ಭಾರತ ನೈಸರ್ಗಿಕವಾಗಿ, ಸಾಂಸ್ಕೃತಿಕವಾಗಿ ಸಂಪನ್ನವಾಗಿರುವುದು ಸುವ್ಯಕ್ತ. ಪ್ರಾಕೃತಿಕ ಸೌಂದರ್ಯ, ಸಾಂಸ್ಕೃತಿಕ ಪರಂಪರೆ, ಐತಿಹಾಸಿಕ ಸ್ಮಾರಕಗಳು, ನಿಬ್ಬೆರಗಾಗಿಸುವ ಕಲಾ ಚಾತುರ್ಯ, ವಿಶಿಷ್ಟ ಸಂಪ್ರದಾಯಗಳು, ಧಾರ್ಮಿಕ ನಂಬಿಕೆಗಳು, ರುಚಿಕರ, ಆರೋಗ್ಯಕರ ಆಹಾರ, ವಿಹಾರ ಎಲ್ಲವೂ ಭಾರತದತ್ತ ಯಾತ್ರಿಕರನ್ನು ಆಕರ್ಷಿಸುವ ಅಂಶಗಳಾಗಿವೆ. ಅಂಕಿ ಅಂಶಗಳ ಪ್ರಕಾರ ಕಳೆದ ದಶಕದಲ್ಲಿ ಜಿಡಿಪಿಯಲ್ಲಿ ಪ್ರವಾಸೋದ್ದಿಮೆಯ ಪಾಲು ಶೇ. 6.6ಕ್ಕೆ ಏರಿದೆ.

ಪ್ರವಾಸೋದ್ದಿಮೆ, ಎಲ್ಲ ವರ್ಗದ ಉದ್ಯೋಗ ಸೃಷ್ಟಿಸುವ ಬಹುಮುಖ್ಯ ರಂಗ. ವಿದೇಶಿ ವಿನಿಮಯದ ಮೂಲಕ ಆರ್ಥಿಕ ಬೆಳವಣಿಗೆ ತರಬಲ್ಲ ಕ್ಷೇತ್ರ. ಸೇವಾದೃಷ್ಟಿ, ವಿಶಿಷ್ಟವಾದ ಸಂಸ್ಕೃತಿ, ಪ್ರಕೃತಿ, ಪರಂಪರೆ ಆತ್ಮೀಯ ಆತಿಥ್ಯದ ಜನರ ಮನೋಭಾವ – ಈ ಎಲ್ಲ ಅಂಶಗಳಿಂದ ಸಂಪನ್ನವಾಗಿರುವ ಭಾರತದಲ್ಲಿ ಎಲ್ಲ ಬಗೆಯ ಪ್ರವಾಸೋದ್ದಿಮೆಗೆ ವಿಪುಲ ಅವಕಾಶಗಳಿವೆ. ಇದನ್ನು ವಾಣಿಜ್ಯಿಕವಾಗಿ ಕರಗತ ಮಾಡಿಕೊಳ್ಳುವ ಕಲೆ ರೂಢಿಸಿಕೊಳ್ಳಬೇಕಾಗಿದೆ. ಪ್ರವಾಸೋದ್ದಿಮೆಗೆ ಆರ್ಥಿಕ ಆಯಾಮ ತಂದುಕೊಡುವಲ್ಲಿ ಮೂಲಭೂತ ಸೌಕರ್ಯದ ಪಾತ್ರ ಮಹತ್ವವಾಗಿದೆ. ಉತ್ತಮ ವಾಯು–ಭೂ–ಜಲಮಾರ್ಗ, ಸಾರಿಗೆ, ವಾಹನ ಸೌಕರ್ಯ, ವಸತಿ, ಆಹಾರ, ನಿರಾತಂಕ ವಾತಾವರಣ, ಆರೋಗ್ಯಕರ – ಆಹ್ಲಾದಕರ ಪರಿಸರ ಪ್ರವಾಸಿಗಳನ್ನು ಆಕರ್ಷಿಸುವ ಅಂಶಗಳಾಗಿವೆ. ಇವೆಲ್ಲ ಸೌಲಭ್ಯ ಕಲ್ಪಿಸುವಲ್ಲಿ ಕೇಂದ್ರ – ರಾಜ್ಯ ಹಾಗೂ ಸ್ಥಳೀಯ ಹಂತದ ಆಡಳಿತ, ಜನರು, ಪ್ರಧಾನ ಪಾತ್ರ ವಹಿಸುತ್ತಾರೆ. ಪ್ರವಾಸೋದ್ಯಮವನ್ನು ಆರ್ಥಿಕ ಊರುಗೋಲಾಗಿ ಬಳಸಿಕೊಂಡ ಅನೇಕ ದೇಶಗಳು ನಮಗೆ ಮಾದರಿಯಾಗಿ ನಿಂತಿವೆ.

ಪ್ರವಾಸೋದ್ದಿಮೆಯನ್ನು ಬೆಳವಣಿಗೆಯ ಚಕ್ರವನ್ನಾಗಿ ಅಳವಡಿಸಿಕೊಳ್ಳಲು ಸರ್ಕಾರ ನೀತಿಗಳನ್ನು ರೂಪಿಸಿದೆ. 2016–17ರ ವೇಳೆಗೆ ಅಂತಾರಾಷ್ಟ್ರೀಯ ಪ್ರವಾಸಿಗರಲ್ಲಿ ಕನಿಷ್ಠ ಒಂದರಷ್ಟು ಪ್ರಮಾಣದ ಯಾತ್ರಿಕರನ್ನಾದರೂ ಆಕರ್ಷಿಸಬೇಕೆನ್ನುವುದೆ ಸರ್ಕಾರದ ಸದ್ಯದ ಗುರಿ. ಈ ನಿಟ್ಟಿನಲ್ಲಿ ಪ್ರವಾಸಿ ಸಂದರ್ಶಕರಿಗೆ ಬರುತ್ತಲೆ ನೀಡುವ ವೀಸಾ ಮುಖ್ಯ ಹೆಜ್ಜೆಯಾಗಿದೆ. ಸದ್ಯ 44 ದೇಶಗಳ ಪ್ರಜೆಗಳಿಗೆ ನೀಡಲಾಗುತ್ತಿರುವ ಈ ಸೌಲಭ್ಯವನ್ನು ಇನ್ನೂ ನೂರಕ್ಕೂ ಹೆಚ್ಚು ದೇಶಗಳ ನಾಗರಿಕರಿಗೆ ವಿಸ್ತರಿಸುವ ಗುರಿ ಇದೆ. ಇತರ ರಂಗಗಳಂತೆ ಪ್ರವಾಸೋದ್ದಿಮೆಯಲ್ಲೂ ವಿದ್ಯುನ್ಮಾನ ನಿರ್ವಹಣೆಗೆ ವ್ಯಾಪಕ ಪಾತ್ರವಿದೆ. ಪ್ರವಾಸಗಳ ಆಯೋಜಕ ಪಟ್ಟಿ, ವಸತಿ ಸೌಕರ್ಯ, ಮಾರ್ಗಗಳ ಮಾರ್ಗದರ್ಶನ ಎಲ್ಲವೂ ಮೊಬೈಲ್ ಆ್ಯಪ್‌ಗಳಲ್ಲಿ ಲಭ್ಯ. ದೇಶೀಯ ಯಾತ್ರಿಕರಿಗೆ ಸ್ವದೇಶ ದರ್ಶನ ಸೌಲಭ್ಯ ಇದೆ. 2016–17ರ ವೇಳೆಗೆ, ಎಲ್ಲ ಧಾರ್ಮಿಕ ನಂಬಿಕೆಗಳ ಯಾತ್ರಾ ಸ್ಥಳಗಳ ನವೀಕರಣ ಪುನರುತ್ಥಾನಕ್ಕೆ ಒತ್ತು ನೀಡಲಾಗಿದೆ. ಈ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗಾಗಿ ಹೊನಾರ್ ಸೆ ರೋಜ್‌ಗಾರ್ ತಕ್ ಮತ್ತು ಹೊನಾರ್ ಜೈಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಮೊದಲೇ ಹೇಳಿದಂತೆ ಪ್ರವಾಸೋದ್ದಿಮೆ ಯಶಸ್ಸು ಇನ್ನೂ ಅನೇಕ ಸೇವಾ ಕ್ಷೇತ್ರಗಳ ಸಾಮರ್ಥ್ಯಗಳೊಂದಿಗೆ ತಳಕು ಹಾಕಿಕೊಂಡಿದೆ. ಸಾರಿಗೆ, ವಸತಿ, ಊಟೋಪಚಾರ, ಮನರಂಜನೆ ಕ್ಷೇತ್ರಗಳಿಗೂ ಒತ್ತು ಅಗತ್ಯ. ಹೊಸ ಹೊಸ ಅಭಿರುಚಿಯ ಪ್ರವಾಸಿ ತಾಣಗಳನ್ನು ಗುರುತಿಸುವ, ಬೆಳೆಸುವ ಕಾರ್ಯವೂ ಆಗಬೇಕಿದೆ.

'ಅತಿಥಿ ದೇವೋಭವ' ಭಾರತೀಯರಿಗೆ ಅತಿಥಿ ಬಗ್ಗೆ ಇರುವ ಗೌರವದ ದ್ಯೋತಕವಾಗಿದೆ. ಈಗ ಆತಿಥ್ಯ – ಪ್ರವಾಸೋದ್ದಿಮೆಯನ್ನು ಹೆಚ್ಚು ಉದ್ಯೋಗ ಸೃಷ್ಟಿಯ ದೃಷ್ಟಿಯಿಂದ ನೋಡಬೇಕಾದ ಕಾಲ ಸನ್ನಿಹಿತವಾಗಿದೆ. ಅದನ್ನು ಬಡತನ ನಿವಾರಣೆಯ ಶಸ್ತ್ರವಾಗಿಯೂ ಬಳಸಿಕೊಳ್ಳಬೇಕಾಗಿದೆ. ಪ್ರವಾಸೋದ್ದಿಮೆ, ಜನರಲ್ಲಿ ಆರ್ಥಿಕ ಮಾತ್ರವಲ್ಲ ಸಾಮಾಜಿಕ ಬದಲಾವಣೆಯನ್ನು ತರಬಲ್ಲ ಸಾಮರ್ಥ್ಯ ಹೊಂದಿದೆ. ಪ್ರಖ್ಯಾತ ತತ್ವಜ್ಞಾನಿ ಫಿಲೋಸೊಲೊ ತುಜು ಹೇಳುವಂತೆ ಸಾವಿರ ಮೈಲುಗಳ ಪ್ರಯಾಣವೂ ಒಂದು ಹೆಜ್ಜೆಯಿಂದಲೇ ಆರಂಭವಾಗುತ್ತದೆ. ಈ ದಿಸೆಯಲ್ಲಿ ಭಾರತ, ಪ್ರವಾಸೋದ್ದಿಮೆ ಸಾಮರ್ಥ್ಯ ಬಳಕೆಗೆ ಈಗಾಗಲೇ ತನ್ನ 'ಪದ'ವಿರಿಸಿದೆ.

❑

# ಕಾಯಕಲ್ಪಕ್ಕಾಗಿ ಕಾದಿರುವ ಪ್ರವಾಸೋದ್ಯಮ

* ಪ್ರೊ. ಜಿ. ಆಂಜನೇಯ ಸ್ವಾಮಿ
ಕನ್ನಡಕ್ಕೆ : ಅರವಿಂದ ನಾವಡ



**ಭಾರತದಲ್ಲಿ ಸಾಕಷ್ಟು ವೈವಿಧ್ಯಮಯ ಪ್ರವಾಸಿ ತಾಣಗಳಿದ್ದು, ಅವುಗಳನ್ನೆಲ್ಲಾ ಸಮರ್ಥ ಸಂಪನ್ಮೂಲವನ್ನಾಗಿ ದುಡಿಸಿಕೊಳ್ಳುವ ಸಲುವಾಗಿ ರಾಷ್ಟ್ರೀಯ ಪ್ರವಾಸಿ ನಕ್ಷೆಯಲ್ಲಿ ಗುರುತಿಸಬೇಕಿದೆ. ಅದಕ್ಕೆ ಇದು ಅತ್ಯಂತ ಪ್ರಶಸ್ತ ಸಮಯ.**

ದೇಶದ ಆರ್ಥಿಕ ಅಭಿವೃದ್ಧಿಗಾಗಿ ಸೂಕ್ತ ಮಾರ್ಗೋಪಾಯಗಳ ಹುಡುಕಾಟದಲ್ಲಿರುವ ಆರ್ಥಿಕ ತಜ್ಞರು ಮತ್ತು ನೀತಿ ನಿರೂಪಕರ ಭರಾಟೆ ವಾಸ್ತವವಾಗಿ ಉದ್ಯಮಶೀಲ ಮನೋಭಾವದ ಜನರ ಸ್ಫೂರ್ತಿ – ಅವಕಾಶಗಳನ್ನು ಕಿರಿದುಗೊಳಿಸಿದೆ. ಎಷ್ಟೇ ಪೂರೈಕೆ ಅಥವಾ ಸಂಪನ್ಮೂಲಗಳ ಲಭ್ಯತೆ ಇದ್ದರೂ ಅವುಗಳನ್ನು ಸಮರ್ಪಕ ಮತ್ತು ನ್ಯಾಯಯುತವಾದ ವಿಧಾನದಲ್ಲಿ ಬಳಸುವ ಮಾರ್ಗ ಉದ್ಯಮಿ ಅಥವಾ ಉದ್ಯಮಶೀಲನಿಗೆ ತಿಳಿದಿಲ್ಲವಾದರೆ ಯಾವ ಪ್ರಯೋಜನವೂ ಇರದು. ಒಬ್ಬ ಉದ್ಯಮಶೀಲವ್ಯಕ್ತಿ ಸದಾ ಬದಲಾವಣೆಯ ಹರಿಕಾರನಾಗಿ ಮತ್ತು ಕ್ರಾಂತಿಕಾರಕನಾಗಿರುತ್ತಾನೆ ಎಂದು ಬಣ್ಣಿಸಲಾಗಿದೆ. ಸಾಮಾನ್ಯವಾಗಿ ಉದ್ಯಮಶೀಲರು ತಮ್ಮ ದೂರದೃಷ್ಟಿ, ಕ್ರಿಯಾತ್ಮಕತೆ ಹಾಗೂ ಪ್ರತಿಭೆಯನ್ನು ಬಳಸಿ ಸಮರ್ಥ ಅವಕಾಶಗಳನ್ನು ಗುರುತಿಸಿ ಅವುಗಳನ್ನು ಸಮಾಜದ ಹಿತಕ್ಕಾಗಿ ದುಡಿಸಿಕೊಳ್ಳುವರು. ಉದ್ಯಮಶೀಲರು ಸಂಪನ್ಮೂಲಗಳಿಗೆ ಆರ್ಥಿಕ ಮೌಲ್ಯವನ್ನು ತಂದುಕೊಡಬಲ್ಲವರು. ಈ ಮಾತನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಲು ಪೀಟರ್ ಡ್ರಕರ್ (2009) ಈ ಮಾತನ್ನು ಉಲ್ಲೇಖಿಸುತ್ತಾನೆ. ಅವನು ಹೇಳುವಂತೆ, "ಯಾರಾದರೂ ಒಬ್ಬರು ಅದರ ಪ್ರಯೋಜನವನ್ನು ಪತ್ತೆ ಹಚ್ಚುವವರೆಗೆ ಪ್ರತಿ ಖನಿಜವೂ ಒಂದು ಕಲ್ಲು ಹಾಗೂ ಪ್ರತಿ ಸಸ್ಯವೂ ಬರೀ ಹುಲ್ಲು'. ಅವರು ತಮ್ಮ ಪ್ರತಿಭೆ–ಶ್ರಮದ ಮೂಲಕ ದೇಶದ ಸಂಪತ್ತು ಹೆಚ್ಚಲು ಕಾರಣರಾಗುತ್ತಾರೆ. ಜಾರ್ಜ್ ಗಿಲ್ಡರ್ ಹೇಳುವಂತೆ, 'ಯಾರೋ ಒಂದಷ್ಟು ಪುರುಷ/ಮಹಿಳೆಯರು ಅಪಾಯಗಳನ್ನೂ ಮೈಮೇಲೆ ಎಳೆದುಕೊಂಡು ತಮ್ಮ ಸೃಜನಶೀಲತೆ ಮತ್ತು ಧೈರ್ಯದಿಂದ ಹೊಸತನ್ನು ಸೃಷ್ಟಿಸುತ್ತಿರುತ್ತಾರೆ. ನಾವು ನಮ್ಮ ಜೀವನಕ್ಕೆ ಮತ್ತು ಪ್ರಗತಿಗೆ ಅವರ ಅವಲಂಬಿಗಳು'.

## ಪ್ರವಾಸೋದ್ಯಮದಲ್ಲಿ ಉದ್ಯಮಶೀಲತೆ ಮತ್ತು ಆರ್ಥಿಕ ಅಭಿವೃದ್ಧಿ

ಮೀಯರ್ ಮತ್ತು ಬಾಲ್ಡ್ ವಿನ್ ವಿವರಿಸುವಂತೆ, 'ಆರ್ಥಿಕ ಪರಿಸ್ಥಿತಿಗಳು ಒಂದು ಯೋಗ್ಯ ಹದದಲ್ಲಿರುವಾಗಲೂ ಅಭಿವೃದ್ಧಿ ಎನ್ನುವುದು ಪ್ರಕೃತಿ ಸಹಜ ಬೆಳವಣಿಗೆಯಂತೆ ಎಂದಿಗೂ ಘಟಿಸದು. ಆ ಬೆಳವಣಿಗೆ ಸಾಧ್ಯವಾಗಿಸಲು ಒಬ್ಬ ಮಧ್ಯವರ್ತಿ ಅಥವಾ ಬದಲಾವಣೆಯನ್ನು ಕೈಗೊಳ್ಳುವವ ಅವತರಿಸಲೇಬೇಕು. ಅಲ್ಲದೇ, ಅದೊಂದು ಉದ್ಯಮಶೀಲತಾ ಚಟುವಟಿಕೆಯಾಗಿರಬೇಕು'. ಈ ಸಂದರ್ಭದಲ್ಲಿ ನಾವು ಗಮನಿಸಬಹುದಾದರೆ, ಪ್ರವಾಸೋದ್ಯಮ ಒಂದು ಉದ್ಯಮವಾಗಿದ್ದು, ಜಾಗತಿಕ ಮಟ್ಟದಲ್ಲಿ ಹೊಸ ಹುಮ್ಮಸ್ಸು ಮೂಡಿಸುವ ಪ್ರಮಾಣದಲ್ಲಿ ಉದ್ಯಮರೂಪಿಯಾಗಿ ವ್ಯಾಪಿಸಿಕೊಳ್ಳತೊಡಗಿದೆ. ಸೇವಾ ರೂಪದ ಉದ್ಯಮ ಕ್ಷೇತ್ರಗಳ ಪೈಕಿ, ಅತ್ಯಂತ ಕಡಿಮೆ ಪ್ರಮಾಣದ ಬಂಡವಾಳ ಮತ್ತು ಉದ್ಯಮದ ಆರಂಭಕ್ಕೆ ಹೆಚ್ಚು ಸುಲಭ ಸಾಧ್ಯತೆಗಳ ಗುಣಗಳನ್ನು ಹೊಂದಿರುವ ಉಪಯುಕ್ತವಾದ ಕ್ಷೇತ್ರ ಪ್ರವಾಸೋದ್ಯಮ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪ್ರವಾಸಿಗಳಿಗೆ ವಿವಿಧ ಬಗೆಯ ಸೇವೆಯನ್ನು ಕಲ್ಪಿಸಬೇಕಾಗಿರುವ ಕಾರಣ,

* ಪ್ರೊಫೆಸರ್, ಪ್ರವಾಸೋದ್ಯಮ ಅಧ್ಯಯನ ವಿಭಾಗ, ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಪಾಂಡಿಚೆರಿ ವಿಶ್ವವಿದ್ಯಾಲಯ.
E-mail : anjaneya.dts@pondiuni.edu.in

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಉದ್ಯಮಶೀಲತೆಗೆ ಉಳಿದ ಕ್ಷೇತ್ರಗಳಿಗಿಂತ ವಿಪುಲ ಅವಕಾಶಗಳಿವೆ. ಹಾಗಾಗಿ ಪ್ರವಾಸೋದ್ಯಮ ಮತ್ತು ಅದರ ಪೂರಕ ಕ್ಷೇತ್ರಗಳು ತೀವ್ರತರವಾದ ವಾಣಿಜ್ಯ ಚಟುವಟಿಕೆಗಳನ್ನು ಒಳಗೊಂಡಿವೆ. ಇವುಗಳೆಂದರೆ, ಸಾರಿಗೆ ಉದ್ಯಮ, ವಸತಿ ಮತ್ತು ಉಪಚಾರ ಉದ್ಯಮ, ಟ್ರಾವೆಲ್ ಏಜೆನ್ಸಿಗಳು, ಪ್ರವಾಸ ಆಯೋಜಕರು, ಮನರಂಜನಾ ಉದ್ಯಮ, ಕರಕುಶಲ ಕಲಾಕೃತಿಗಳ ನಿರ್ಮಾಣ ಮತ್ತು ಮಾರಾಟ ಉದ್ಯಮ, ಸಮ್ಮೇಳನ, ಕಾರ್ಯಕ್ರಮ ಸಂಘಟನೆ, ವಸ್ತು ಪ್ರದರ್ಶನ, ಉದ್ಯಾನಗಳ ನಿರ್ವಹಣೆ ಮತ್ತು ಮನರಂಜನಾ–ಪ್ರೇಕ್ಷಣೀಯ ಸ್ಥಳಗಳು.

ಪ್ರವಾಸೋದ್ಯಮ ಉದ್ಯಮಶೀಲತೆ ಬಗ್ಗೆ ಪ್ರಸ್ತುತ ಲಭ್ಯವಿರುವ ಎಲ್ಲ ಮಾಹಿತಿ ಬಗೆಗಿನ ಒಂದು ಕ್ಷಿಪ್ರನೋಟಹರಿಸುವುದಾದರೆ ಹಲವು ಸಂಶೋಧಕರ ಪರಿಕಲ್ಪನಾತ್ಮಕ ಮತ್ತು ಪ್ರಯೋಗಾತ್ಮಕ ಕೃತಿಗಳು ಮುಖ್ಯವಾಗುತ್ತವೆ. ಅವುಗಳೆಂದರೆ, ಮೀಯರ್ ಮತ್ತು ಬಾಲ್ಡ್ ವಿನ್ (1957), ಡೇವಿಡ್‌ಸಿ ಮೆಕೆಲ್ಯಾಂಡ್ (1961), ಜಾರ್ಜ್ ಗಿಲ್ಡರ್ (1984), ಟೆಡ್ ಸಿಲ್ಬರ್ಬರ್ಗ್ (1995), ಅಲಿಸನ್ ಮಾರಿಸನ್ (1999), ಬೆಜ್ ಬರೂ (1999), ಹೀದಿ ದಹ್ಲ್ಸ್ (1999), ಆ್ಯಂಡ್ರ್ಯೂ ಟರ್ನ್ಬುಲ್ (2002), ರಸೆಲ್ ಮತ್ತು ಬಿಲ್ ಫೌಕರ್ (2004), ಸ್ಟೀಫನ್ ಬಾಲ್ (2005), ಮೆಲೊಡಿ ಬತಾ ಎತ್ ಅಲ್ (2006), ನತನ್ ಕೆ ಆಸ್ಟಿನ್ (2007), ಪೀಟರ್ ಡ್ರಕರ್ (2009), ರಾಸ್ಲಿನ್ ಸ್ಟೀಫನ್ ಜೆ ಪೇಜ್ ಮತ್ತು ಜೋವೊ ಅಟೆಲ್ಜೆವಿಕ್ (2009), ಅಂಜನ್ ಭೂಯಾನ್ (2010), ಕ್ಲೌಸ್ ವೀರ್ ಮೇರ್ ಎತ್ ಅಲ್ (2010), ರಾಜೇಂದ್ರ ಪಾಲ್ (2010), ಬ್ರಾಂಡನ್ ಕೋನೆ (2012), ಅಮತಾ ಮ್ವಾಲೋ ಮಥಾಯಿಸ್ (2013), ಹ್ಯೂಗಸ್ ಸೆರ್ಫಿನ್ (2013) ಮತ್ತು ಇತರರು ಪ್ರವಾಸೋದ್ಯಮ ಮತ್ತು ಅದರ ಸಂಬಂಧಿ ಕ್ಷೇತ್ರಗಳಲ್ಲಿನ ಉದ್ಯಮಶೀಲತೆ ಕುರಿತು ವಿವಿಧ ದೃಷ್ಟಿಕೋನಗಳನ್ನು ಪರಿಶೀಲಿಸಿದ್ದಾರೆ.

ಇವುಗಳಲ್ಲಿ ಬಹುತೇಕ ಅಧ್ಯಯನಗಳು ಪ್ರಾದೇಶಿಕ ವಲಯಕ್ಕೆ ಸಂಬಂಧಿಸಿದ್ದಾಗಿದ್ದು, ಪ್ರದೇಶ ಮತ್ತು ರಾಷ್ಟ್ರಗಳ ಆಯಾ ಪ್ರವಾಸಿ ನೆಲೆಗಳ ಕೇಂದ್ರಿತ ಉದ್ಯಮಶೀಲ ಚಟುವಟಿಕೆಗಳ ಕುರಿತಾಗಿದೆ.

### ವಿನೂತನ ಪ್ರವಾಸೋದ್ಯಮ ಉತ್ಪನ್ನಗಳು–ಭಾರತೀಯ ಪ್ರವಾಸೋದ್ಯಮದ ಅಭಿವೃದ್ಧಿಗೆ ಪ್ರಮುಖ ಅಂಶ

ವಿನೂತನ ಪ್ರವಾಸೋದ್ಯಮ ಉತ್ಪನ್ನಗಳೇ ಭಾರತದಲ್ಲಿನ ಪ್ರವಾಸೋದ್ಯಮ ಕ್ಷೇತ್ರದ ಯಶಸ್ಸು ಮತ್ತು ಸ್ಥಿರತೆಗೆ ಕಾರಣವಾಗಿರುವುದನ್ನು ವಿಶೇಷವಾಗಿ ವಿವರಿಸಬೇಕಿಲ್ಲ. ಪ್ರವಾಸೋದ್ಯಮದ ಸಾಕಷ್ಟು ಪ್ರಯೋಜನಗಳು ಸ್ಪಷ್ಟವಾಗಿ ತಿಳಿದಿದ್ದಾಗ್ಯೂ, ಭಾರತೀಯ ಪ್ರವಾಸೋದ್ಯಮ ಕ್ಷೇತ್ರವನ್ನು ಅಭಿವೃದ್ಧಿಯ ಮತ್ತೊಂದು ಹಂತಕ್ಕೆ ಕೊಂಡೊಯ್ಯುವಲ್ಲಿ ಸರ್ಕಾರ ಮತ್ತು ಇತರೆ ಅಭಿವೃದ್ಧಿ ಏಜೆನ್ಸಿಗಳ ಪಾತ್ರ ಅಷ್ಟೊಂದು ತೃಪ್ತಿಕರವಾಗೇನೂ ಇಲ್ಲ. ಕಳೆದ ಹಲವಾರು ದಶಕಗಳಲ್ಲಿ ಉಲ್ಲೇಖಿಸಬಹುದಾದಷ್ಟು ಹೊಸ ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಗೊಳಿಸಿಲ್ಲ. ಇದರ ಪರಿಣಾಮವಾಗಿ, ದೂರಸಂಪರ್ಕ ಸೌಲಭ್ಯ ಲಭ್ಯವಿರುವ, ಸಾರಿಗೆ ಸಂಪರ್ಕ ಸಾಧ್ಯವಿರುವಂಥ ಪ್ರಸ್ತುತ ಇರುವ ಪ್ರವಾಸಿ ತಾಣಗಳ ಮೇಲೆ ದಿನೇ ದಿನೇ ಒತ್ತಡ ಹೆಚ್ಚುತ್ತಿದೆ. ಇದೇ ಸಂದರ್ಭದಲ್ಲಿ ಜೀವನಶೈಲಿ ಮತ್ತು ಆದ್ಯತೆಗಳ ಹೊರತಾಗಿಯೂ ಈ ಪ್ರವಾಸೋದ್ಯಮ ಕ್ಷೇತ್ರಕ್ಕೆ ಸಂಬಂಧಿಸಿದ ಗ್ರಾಹಕರ ಆದಾಯದಲ್ಲಿ ಗಮನಾರ್ಹ ಏರಿಕೆ ಕಂಡುಬಂದಿರುವುದು ಗಮನಿಸಲೇಬೇಕಾದ ಅಂಶ. ಈ ಎಲ್ಲ ಕಾರಣಗಳಿಂದ, ಹೊಸ ಉತ್ಪನ್ನ/ಯೋಜನೆ/ತಾಣಗಳ ಅಭಿವೃದ್ಧಿ ಅತ್ಯಂತ ತುರ್ತಾಗಿದ್ದು, ಈ ಹಿಂದಿಗಿಂತಲೂ ಹೆಚ್ಚು ಗಮನ ನೀಡಿ ಪೂರ್ಣಗೊಳಿಸಬೇಕಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಪ್ರವಾಸೋದ್ಯಮವನ್ನು ಪ್ರಗತಿಯ ಹೊಸ ಕಕ್ಷೆಗೆ ಉಡಾಯಿಸಲು ಅಗತ್ಯವಿರುವ ಕೆಲವು ಉಪಕ್ರಮಗಳನ್ನು ಮುಂದೆ ಸೂಚಿಸಲಾಗಿದೆ.

### ಅನುಪಮ ಮತ್ತು ಅಚ್ಚರಿ ತಾಣಗಳ ಅಭಿವೃದ್ಧಿ/ಪ್ರಚಾರ

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರಕೃತಿ ಮತ್ತು ತರ್ಕವನ್ನು ಒಟ್ಟಿಗೇ ಮೇಳೈಸಿಕೊಂಡಿರುವ ಕೆಲವು ಅತ್ಯಂತ ಅನುಪಮವೆನಿಸಬಹುದಾದ ತಾಣಗಳನ್ನು ಅಭಿವೃದ್ಧಿಪಡಿಸಿರುವಂತೆಯೇ ನಮ್ಮ ಭಾರತದಲ್ಲೂ 'ವಿಸ್ಮಯ ತಾಣ'ಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ. ಉದಾಹರಿಸುವುದಾದರೆ, ಅಸ್ಸಾಂನ ಹಾಫ್ಲಾಂಗ್ ಬಳಿ 'ಜತಿಂಗ' ಎಂಬ ವಿಚಿತ್ರವಾದ ತಾಣವಿದೆ. ಪ್ರತಿ ವರ್ಷ



ಸೆಪ್ಟೆಂಬರ್–ನವೆಂಬರ್ ಮಾಹೆಯಲ್ಲಿ ದೂರದ ನಾನಾ ದೇಶಗಳಿಂದ ಸಾವಿರಾರು ಹಕ್ಕಿಗಳು ಇಲ್ಲಿಗೆ ಬಂದು ಆತ್ಮಹತ್ಯೆ ಮಾಡಿಕೊಳ್ಳುತ್ತವೆ. ಇದು ನಿಜಕ್ಕೂ ಅಚ್ಚರಿ! ಇದೇ ತೆರದಲ್ಲಿ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ಮಹಾನಂದಿ ಎಂಬ ಸರೋವರವಿದೆ (ಕೆರೆ). ಅಲ್ಲಿನ ಅಚ್ಚರಿಯ ಸಂಗತಿಯೆಂದರೆ ಯಾವಾಗಲೂ ಅಂದರೆ ವರ್ಷವಿಡೀ ನೀರಿನ ಮಟ್ಟ ಒಂದೇ ಪ್ರಮಾಣದಲ್ಲಿರುತ್ತದೆ. ಈ ಸರೋವರ 1.5 ಮೀ (5 ಅಡಿ) ಆಳವಿದೆ. ವಿಚಿತ್ರವೆಂದರೆ ಇಲ್ಲಿನ ಯಾರಿಗೂ ಈ ನೀರಿನ ಮಟ್ಟ ಸ್ಥಿರತೆ ಬಗೆಗಾಗಲಿ ಅಥವಾ ಇದರ ಜಲಮೂಲದ ಬಗೆಗಾಗಲಿ ಕಾರಣ ಗೊತ್ತಿಲ್ಲ. ಕೇವಲ ಸದಾ ನಿರ್ದಿಷ್ಟ ಪ್ರಮಾಣದಲ್ಲಿರುವುದಷ್ಟೇ ಅಲ್ಲ, ಸ್ಫಟಿಕದಷ್ಟು ಸ್ಪಷ್ಟ ಮತ್ತು ನಿರ್ಮಲ. ಈ ನೀರು ಎಷ್ಟು ಶುದ್ಧವಾಗಿದೆಯೆಂದರೆ ಒಂದು ಸಣ್ಣ ನಾಣ್ಯ ಹಾಕಿದರೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಇಂಥದ್ದೇ ಇನ್ನೊಂದು ವಿಸ್ಮಯದ ತಾಣವೆಂದರೆ ರಾಜಸ್ತಾನದ ಅಳ್ವಾರ್ ಬಳಿಯ ಬಾಂಗ್ರಾ ಕೋಟೆ. ಇದು ಜಗತ್ತಿನಲ್ಲೇ ಅತ್ಯಂತ ವಿಸ್ಮಯಕಾರಿ ತಾಣಗಳಲ್ಲಿ ಒಂದು. ರಾಜಾ ಮಾಧೋಸಿಂಗ್ ಎಂಬಾತ 1613 ರಲ್ಲಿ ಈ ಕೋಟೆಯನ್ನು ನಿರ್ಮಿಸಿದ. ಒಂದು ದಂತಕಥೆಯ ಪ್ರಕಾರ, ಬಾಬಾ ಬಲೂನಾಥ್ ಎಂಬ ಸಾಧು ಈ ಕೋಟೆಯ ಪ್ರದೇಶದಲ್ಲಿ ವಾಸಿಸಿದ್ದನಂತೆ. ಆತ ವಿಧಿಸಿದ ಷರತ್ತೆಂದರೆ, ಸುತ್ತಮುತ್ತಲಿನಲ್ಲಿ ಯಾರೇ ಮನೆ ನಿರ್ಮಿಸಿದರೂ ತನ್ನ ಮನೆಗಿಂತ ಎತ್ತರಕ್ಕೆ ಕಟ್ಟಬಾರದು ಎಂಬುದು. ಒಂದುವೇಳೆ ಯಾವುದೇ ಅಂಥ ಎತ್ತರದ ಮನೆಯ ನೆರಳು ತನ್ನಮನೆ ಮೇಲೆ ಬಿದ್ದರೆ ಕೋಟೆ ಕುಸಿಯುತ್ತದೆ ಎಂದು ಸಾರಿದ್ದ. ಈಗಲೂ ಈ ಹಳ್ಳಿಯಲ್ಲಿರುವ ಮನೆಗಳಿಗೆ ಮೇಲ್ಛಾವಣಿ ಇಲ್ಲ. ಇಲ್ಲಿನ ಅತ್ಯಂತ ಜನಪ್ರಿಯ ನಂಬಿಕೆ ಮತ್ತು ಆಚರಣೆಯೆಂದರೆ, ಮನೆಗೆ ಮೇಲ್ಛಾವಣಿ ಹಾಕತೊಡಗಿದ ತಕ್ಷಣವೇ ಆ

ಮನೆ ಕುಸಿಯತೊಡಗುವುದಂತೆ. ಹಾಗಾಗಿ ಯಾರೂ ಮನೆಗೆ ಮೇಲ್ಛಾವಣಿಯನ್ನೇ ಹಾಕುವುದಿಲ್ಲ. ಕೆಲವು ನಿಶ್ಚಿತ ನಂಬಿಕೆಗಳಿಗಾಗಿ ಕೋಟೆಯೊಳಗೆ ರಾತ್ರಿಯನ್ನು ಕಳೆಯಲು ಅವಕಾಶ ನೀಡುವುದಿಲ್ಲ. ಇಲ್ಲಿಯ ಜನರು ಹೇಳುವುದೇನೆಂದರೆ, ಸಂಜೆಯ ನಂತರವೂ ಕೋಟೆಯೊಳಗೆ ಇರುವವರು ಯಾರೂ ವಾಪಸು ಬಂದಿಲ್ಲ! ಹೀಗೇ ಇನ್ನೊಂದು ತಾಣವನ್ನು ಉಲ್ಲೇಖಿಸಬಹುದಾದರೆ ಮಹಾರಾಷ್ಟ್ರದ ಶನಿ ಸಿಗ್ನಾಪುರ್. ಈ ಊರಿನಲ್ಲಿರುವ ಯಾವುದೇ ಮನೆಗಳಿಗೂ ಬಾಗಿಲುಗಳೆ ಇಲ್ಲ. ಇಲ್ಲಿಯ ಜನರ ದೃಢವಾದ ನಂಬಿಕೆಯೆಂದರೆ ಯಾರೇ ಆಗಲಿ ಯಾವುದೇ ಮನೆಯಿಂದ ಏನನ್ನೂ ಕದ್ದರೂ ದೇವರು ಶಿಕ್ಷಿಸುತ್ತಾನೆಂಬುದು. ಈಗಿನ ಸಮಕಾಲೀನ ಸಮಾಜದಲ್ಲಿ ನಂಬಲು ಅಸಾಧ್ಯವಾದುದು ಮತ್ತು ಅಚ್ಚರಿಯಾದುದು.

ಈ ಎಲ್ಲ ಕುತೂಹಲ ಮತ್ತು ವಿಸ್ಮಯ ತಾಣಗಳು ಪ್ರವಾಸೋದ್ಯಮ ದೃಷ್ಟಿಯಿಂದ ಅಭಿವೃದ್ಧಿಗೊಳಿಸಲು ಅತ್ಯಂತ ಪ್ರಶಸ್ತವಾಗಿವೆ. ಇಲ್ಲಿನ ಈ ವಿಸ್ಮಯದ ಸಂಪನ್ಮೂಲವನ್ನು ದುಡಿಸಿಕೊಳ್ಳುವುದನ್ನೇ ಉದ್ಯಮಶೀಲತೆ ಎನ್ನುತ್ತೇವೆ. ಇದನ್ನು ಒಂದು ಉತ್ಪನ್ನವನ್ನಾಗಿ ವಿನ್ಯಾಸಗೊಳಿಸುವುದು, ಸಾರಿಗೆ ಸಂಪರ್ಕ ಹೆಚ್ಚಿಸುವುದು, ವಸತಿ ವ್ಯವಸ್ಥೆ ಕಲ್ಪಿಸುವುದು ಮತ್ತು ಇತರೆ ಪ್ರವಾಸಿ ಸೌಲಭ್ಯಗಳನ್ನು ಒದಗಿಸುವುದು ಆಗಬೇಕಾದ ಕೆಲಸ.

ಇಂಥ ವಿಸ್ಮಯಕಾರಿ ತಾಣಗಳನ್ನೆಲ್ಲಾ ಒಂದೆಡೆ ಕಲೆ ಹಾಕಿ ಬೃಹತ್ ಮಟ್ಟದಲ್ಲಿ ಪ್ರಚಾರ ನೀಡಬೇಕು. ಇವುಗಳ ಬಗೆಗಿನ ಕುತೂಹಲ, ಈ ತಾಣಗಳ ಸುತ್ತ ಇರುವ ಅಚ್ಚ ಅಂಶ ಹಾಗೂ ಈ ಬಗ್ಗೆ ಲಭ್ಯ ಇರುವ ಜಾನಪದ ಅಂಶಗಳನ್ನೇ ಪ್ರಧಾನವಾಗಿರಿಸಿ ಅನುಪಮ ಅಂಶವಾಗಿ ಬಿಂಬಿಸಿ ಅಂದರೆ ಮೂಲ ಬಂಡವಾಳವನ್ನಾಗಿಸಿ ಅಭಿವೃದ್ಧಿಪಡಿಸಬೇಕು. ಇಂಥ ಅಸಾಂಪ್ರದಾಯಿಕ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಇದು ಸೂಕ್ತ ಕಾಲ ಮತ್ತು ಇದನ್ನು ನಮ್ಮ ರಾಷ್ಟ್ರೀಯ ಮತ್ತು ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಸೇರಿಸಬೇಕಾದುದು ಅವಶ್ಯ.

### ಪ್ರಚಾರಕ್ಕೆ ಬಾರದ ತಾಣಗಳನ್ನು ಹೆಚ್ಚು ಜನಪ್ರಿಯಗೊಳಿಸುವುದು

ಭಾರತದಲ್ಲಿ ಸಾಕಷ್ಟು ವೈವಿಧ್ಯಮಯ ಪ್ರವಾಸಿ ತಾಣಗಳಿದ್ದು, ಅವುಗಳನ್ನೆಲ್ಲಾ ಸಮರ್ಥ ಸಂಪನ್ಮೂಲವನ್ನಾಗಿ ದುಡಿಸಿಕೊಳ್ಳುವ ಸಲುವಾಗಿ ರಾಷ್ಟ್ರೀಯ ಪ್ರವಾಸಿ ನಕ್ಷೆಯಲ್ಲಿ ಗುರುತಿಸಬೇಕಿದೆ. ಅದಕ್ಕೆ ಇದು ಅತ್ಯಂತ ಪ್ರಶಸ್ತ ಸಮಯ. ಉದಾಹರಿಸುವುದಾದರೆ, ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ (ಚೆನ್ನೈನಿಂದ 150 ಕಿ ಮೀ) ಪುಲಿಕೇತ್ ಸರೋವರ ಮತ್ತು ಪಕ್ಷಿಧಾಮ, ಉತ್ತಮ ವಸತಿ ಸೌಲಭ್ಯಗಳೊಂದಿಗೆ ಪ್ರಕೃತಿ ಸೌಂದರ್ಯ ಸವಿಯಲು ಕರ್ನಾಟಕದ ಮುಪ್ಪಾಣೆ, ಪರಿಸರ ಪ್ರವಾಸೋದ್ಯಮಕ್ಕಾಗಿ ಪಾರಂಬಿಕುಲಂ, ತಮಿಳುನಾಡಿನ ತೇಣಿ ಜಿಲ್ಲೆಯ ಮೇಘ ಮಲೈ–ಚಾರಣಿಗರ ಸ್ವರ್ಗ– ಇವೆಲ್ಲವೂ ಪ್ರವಾಸಿಗರಲ್ಲೆ ಕೆಲವು ಸೀಮಿತ ವಿಶೇಷಾಸಕ್ತಿಯ ಗುಂಪಿಗೆ ಹೊರತುಪಡಿಸಿದರೆ ಬಹಳಷ್ಟು ಜನರಿಗೆ ತಿಳಿದೇ ಇಲ್ಲ. ಅದರಂತೆಯೇ ಆಂಧ್ರ ಪ್ರದೇಶದ ವಿಶಾಖಪಟ್ಟಣದ ಬಳಿಯ ಲಂಬಸಿಂಗಿ ಇಡೀ ದಕ್ಷಿಣ ಭಾರತದಲ್ಲೆ ಹಿಮಪಾತವನ್ನು ಕಾಣುವ ಏಕೈಕ ಪ್ರದೇಶ. ಈ ಕುರಿತು ವಿಶೇಷವಾಗಿ ಉಲ್ಲೇಖಿಸಲೇಬೇಕು. ಹೀಗೆ ವಿಶೇಷವೆನಿಸುವ ನೂರಾರು ಪ್ರದೇಶಗಳು ನಮ್ಮ ದೇಶದಲ್ಲಿ ಲಭ್ಯವಿದ್ದು, ಪ್ರವಾಸೋದ್ಯಮದ ದೃಷ್ಟಿಕೋನದಲ್ಲಿ ಬಗೆಹರಿಸಬೇಕಿದೆ.

### ತಲುಪಲು ಸಾಧ್ಯವಾಗುವ ಪ್ರವಾಸೋದ್ಯಮ

ಉತ್ಪಾದನಾ ಕ್ಷೇತ್ರ, ಸೇವಾ ಕ್ಷೇತ್ರಗಳಲ್ಲಿನ ಉತ್ಪನ್ನಗಳನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ವಿಶೇಷವಾಗಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ವಿಶೇಷ ಸಾಮರ್ಥ್ಯದ ಜನರ (ಅಂಗವಿಕಲರು) ಅಗತ್ಯಗಳನ್ನು ಇನ್ನೂ ಸ್ಪಷ್ಟವಾಗಿ ಅರಿತು ಅದಕ್ಕೆ ತಕ್ಕಂತೆ ರೂಪಿಸಬೇಕಿರುವುದು ವಿಪರ್ಯಾಸವೇ ಸರಿ. ಎಲ್ಲ ರಾಷ್ಟ್ರಗಳು ಮತ್ತು ವಿವಿಧ ಕ್ಷೇತ್ರಗಳು “ಎಲ್ಲರನ್ನೂ ಒಳಗೊಂಡ” ಅಭಿವೃದ್ಧಿಗಾಗಿ ಹಪಾಹಪಿಸಿ ಅತ್ತ ಧಾವಿಸತೊಡಗಿದ್ದರೆ, ಪ್ರವಾಸೋದ್ಯಮ ಕ್ಷೇತ್ರ ಮಾತ್ರ ವಿಶೇಷ ಸಾಮರ್ಥ್ಯವುಳ್ಳ ಮಂದಿಯ ಬೇಡಿಕೆಗಳನ್ನು ಗುರುತಿಸಿ ಪೂರೈಸುವಲ್ಲಿ ಹಿಂದೆ ಬಿದ್ದಿರುವುದು ಸ್ಪಷ್ಟ. ವಿವಿಧಾಸಕ್ತಿಯ ತಾಣಗಳಿಗೆ ಭೇಟಿ ನೀಡಿ ಅನುಭವಿಸುವುದು, ಪ್ರಕೃತಿಯ ಸೌಂದರ್ಯವನ್ನು ಸವಿಯುವುದು ಪ್ರತಿ ಮಾನವನ ಸಹಜ ಗುಣಗಳಲ್ಲಿ ಒಂದು ಎಂಬುದು ಎಲ್ಲರಿಗೂ ತಿಳಿದದ್ದೇ. ಆದರೆ, ಅತ್ಯಂತ ವಿಷಾದನೀಯ ಸಂಗತಿಯೆಂದರೆ



ವಿಶ್ವಾದ್ಯಂತ ಸುಮಾರು 600 ದಶಲಕ್ಷದಷ್ಟು ಜನಸಂಖ್ಯೆ ಹೊಂದಿರುವ ವಿಶೇಷ ಸಾಮರ್ಥ್ಯವುಳ್ಳ ಜನರ ಸ್ಪಷ್ಟ ಅಗತ್ಯಗಳನ್ನು ಗಮನಕ್ಕೆ ತೆಗೆದುಕೊಂಡು ಸಂಘಟಿತ ರೀತಿಯಲ್ಲಿ ಪೂರೈಸಲು ಗಮನ ಹರಿಸಿಲ್ಲ. ಸಮಾನತೆ ಮತ್ತು ಸಾಮಾಜಿಕ ನ್ಯಾಯವೆಂಬ ಸಾಮಾಜಿಕ ಉದ್ದೇಶಗಳನ್ನು ಈಡೇರಿಸುವತ್ತ ಗಮನಹರಿಸಿದ್ದು ಹೊರತುಪಡಿಸಿದರೆ, ಈ ಸಮುದಾಯದ ಅವಶ್ಯಗಳಿಗೆ ತಕ್ಕಂತೆ ಉತ್ಪನ್ನಗಳ ವಿನ್ಯಾಸ ಮತ್ತು ಅಭಿವೃದ್ಧಿಗೆ ವಿಫುಲ ಅವಕಾಶಗಳಿವೆ. ಯುರೋಪಿಯನ್ ನೆಟ್ ವರ್ಕ್ ಫಾರ್ ಆಕ್ಸೆಸಿಬಲ್ ಟೂರಿಸಂ (ಇಎನ್‌ಎಟಿ)ನ ಪ್ರಕಾರ, ಎಲ್ಲರನ್ನೂ ತಲುಪಬಹುದಾದ ಪ್ರವಾಸೋದ್ಯಮವೆಂದರೆ ಹೊಸ ಸೃಷ್ಟಿ ಅಥವಾ ಲಭ್ಯ ಮೂಲಭೂತ ಸೌಲಭ್ಯಗಳಲ್ಲಿ ಸುಧಾರಣೆ ತರುವುದು ಸೇರಿದೆ. ಉದಾಹರಣೆಗೆ ನಿಷೇಧ ಮುಕ್ತ ಪ್ರವಾಸಿ ತಾಣ, ಆಯಾಸಕರ ಪ್ರಯಾಣ, ಉನ್ನತ ಮಟ್ಟದ ಸೇವೆಗಳು, ಚಟುವಟಿಕೆಗಳು ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸುವಿಕೆ, ಕಾದಿರಿಸುವಿಕೆ ಮತ್ತು ಇತರೆ ಸೇವೆಗಳಲ್ಲಿ ತೃಪ್ತಿಕರ ಗುಣಮಟ್ಟ ಕಾಪಾಡಿಕೊಳ್ಳುವುದು ಇತ್ಯಾದಿ. ಈ ದೃಷ್ಟಿಯಲ್ಲಿ ಅಂತರಜಾಲ (ಇಂಟರ್ ನೆಟ್) ಗೆ ಧನ್ಯವಾದಗಳನ್ನು ಸಲ್ಲಿಸಬೇಕು. ಇದರ ಸಹಾಯದಿಂದ ಆನ್ ಲೈನ್ ಮೂಲಕ ಪ್ರವಾಸದ ಯೋಜನೆ ಮತ್ತು ಕಾದಿರಿಸುವಿಕೆಗೆ ಸಾಧ್ಯವಾಗಿರುವುದು ಎಲ್ಲ ವಲಯಗಳ ಜನರಿಗೂ ಅನುಕೂಲವಾಗಿದೆ ಮತ್ತು ತಲುಪುವಂತಾಗಿದೆ. ಆದರೂ, ಪ್ರವಾಸಿ ತಾಣದ ಮಾರ್ಗಗಳು ಮತ್ತು ತಾಣಗಳಲ್ಲಿನ ಸೌಲಭ್ಯವನ್ನು ಇನ್ನಷ್ಟು ಹೆಚ್ಚಿಸಲೇ ಬೇಕಿದೆ.

### ಬಡವರ ಪರ ಪ್ರವಾಸೋದ್ಯಮ

ವಿವಿಧ ತಾಣಗಳಿಗೆ ಭೇಟಿ ನೀಡುವುದು, ಅಲ್ಲಿನ ನಿವಾಸಿಗಳೊಂದಿಗೆ ಹರಟುವುದು, ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಸವಿದು ವೈವಿಧ್ಯವಾದ

ಅಡುಗೆಯನ್ನು ಸವಿಯುವುದು ಮನುಷ್ಯನ ಸಹಜ ಸ್ವಭಾವ. ಅವನ ಆರ್ಥಿಕ ಸ್ಥಿತಿ, ವಸತಿ, ಲಿಂಗ ಮತ್ತು ವಯಸ್ಸು ಮುಖ್ಯವಾಗುವುದಿಲ್ಲ. ಆದರೆ, ಉದ್ದೇಶಪೂರ್ವವಾಗಿಯೋ ಅಥವಾ ಸಹಜವಾಗಿಯೋ ಭಾರತೀಯ ಪ್ರವಾಸೋದ್ಯಮ ಈ ಹಿಂದಿನ ಹಲವು ವರ್ಷಗಳಿಂದ ನಗರದ ಶ್ರೀಮಂತ ಮತ್ತು ಗಣ್ಯ ವರ್ಗದತ್ತಲೇ ಕೇಂದ್ರೀಕೃತವಾಗಿದೆ. ಇದೇ ಮಾದರಿ ಮುಂದುವರಿದರೆ, ಶೀಘ್ರದಲ್ಲೇ ನಾವು ಇದನ್ನು 'ಗಣ್ಯರಿಗಾಗಿ, ಗಣ್ಯರಿಂದ ಮತ್ತು ಗಣ್ಯರಿಗೋಸ್ಕರ ಪ್ರವಾಸೋದ್ಯಮ' ಎಂದು ವ್ಯಾಖ್ಯಾನಿಸಬೇಕಾದೀತು!

ಪ್ರವಾಸೋದ್ಯಮದಲ್ಲಿ ಸಾರಿಗೆ, ವಸತಿ ವ್ಯವಸ್ಥೆ ಸೇರಿದಂತೆ ಇತರೆ ಸೇವೆಗಳಿಗೆ ಸಂಬಂಧಿಸಿದಂತೆ ಮೂಲಭೂತ ಸೌಲಭ್ಯಗಳು ಅಭಿವೃದ್ಧಿಗೊಳ್ಳುತ್ತಿದ್ದರೂ, ದುರದೃಷ್ಟಕರ ಸಂಗತಿಯೆಂದರೆ ಭಾರತೀಯ ಸಮಾಜದ ಗ್ರಾಮೀಣ ಮತ್ತು ಅರೆಪಟ್ಟಣ ನಿವಾಸಿಗಳು ಈ ಪ್ರವಾಸದ ಅನುಭವ ಪಡೆಯುವವರ ಪರಿಧಿಯಿಂದ ಹೊರಗುಳಿದಿದ್ದಾರೆ. ಉತ್ಪಾದನಾ ಕ್ಷೇತ್ರವು ತನ್ನ ಉತ್ಪನ್ನಗಳು ಗ್ರಾಮೀಣ ಮಾರುಕಟ್ಟೆಯ ಕುಗ್ರಾಮಕ್ಕೂ ತಲುಪಿಸುವಲ್ಲಿ ಯಶಸ್ವಿಯಾಗಿರುವಂಥ ಹೊತ್ತಿನಲ್ಲಿ ಪ್ರವಾಸೋದ್ಯಮ ಕ್ಷೇತ್ರಕ್ಕೆ ಸಾಧ್ಯವಾಗದಿರುವುದು ವಿಪರ್ಯಾಸ. ಹಾಗಾಗಿ ಪ್ರವಾಸೋದ್ಯಮ ಎಂಬ ಉತ್ಪನ್ನವು ಎಲ್ಲರನ್ನೂ ಒಳಗೊಳ್ಳುವ ಮೂಲಕ ತನ್ನ ಪರಿಧಿಯೊಳಗೆ ತಂದುಕೊಳ್ಳುವ ಪ್ರಕ್ರಿಯೆ ಬೃಹತ್ ಮಟ್ಟದಲ್ಲಿ ನಡೆಯಬೇಕಿದೆ. 'ಪಿರಮಿಡ್ಡ್‌ನ ತಳಮಟ್ಟದಲ್ಲಿ ಅದೃಷ್ಟ ಅಡಗಿದೆ' ಎಂಬ ಸಿಕೆ ಪ್ರಹ್ಲಾದರ ಜನಪ್ರಿಯ ಮಾತಿನಂತೆ ಗ್ರಾಮೀಣ ಮಾರುಕಟ್ಟೆಯನ್ನು ಶೋಧಿಸಿ ಅವಕಾಶಗಳನ್ನು ಸೃಷ್ಟಿಸಿಕೊಳ್ಳಲು ಇದು ಅತ್ಯಂತ ಸಕಾಲ. ದೃಷ್ಟಿಕೋನದ ಬದಲಾವಣೆ, ಕೈಗೆಟುಕುವ ದರದಲ್ಲಿ ಪ್ರವಾಸೋದ್ಯಮ ಉತ್ಪನ್ನ ಅಭಿವೃದ್ಧಿ ಹಾಗೂ



ಗ್ರಾಮೀಣ ಜನತೆಯ ಪಾಲ್ಗೊಳ್ಳುವಿಕೆಯತ್ತ ಗಮನಿಸುವ ಮನೋಧರ್ಮ ನಿರ್ಮಿಸಬೇಕಿದ್ದು, ಈ ಸಂಬಂಧ ಇರುವ ಕೆಲವು ಸಮಸ್ಯೆಗಳನ್ನು ಬಗೆಹರಿಸಬೇಕಿದೆ. ಗ್ರಾಮೀಣ ಪ್ರವಾಸೋದ್ಯಮ ಮಾರುಕಟ್ಟೆಯ ನೆಲೆಯಲ್ಲಿ ಹೇಳುವುದಾದರೆ, ದೇಶದ ಕೆಲವು ಧಾರ್ಮಿಕ ಪ್ರವಾಸಿ ತಾಣಗಳನ್ನು ಹೊರತುಪಡಿಸಿದರೆ, ಮಿಕ್ಕೆಲ್ಲಾ ನಮ್ಮ ಪ್ರವಾಸೋದ್ಯಮ ಉತ್ಪನ್ನಗಳು ಪರಿಪೂರ್ಣವಾಗಿಲ್ಲ.

### ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ವಿಹಾರ/ಪ್ರವಾಸಿ ಪ್ಯಾಕೇಜ್‌ಗಳು

ಬಹಳ ಕುತೂಹಲಕರದ ಸಂಗತಿಯೆಂದರೆ, ಯಾವುದೇ ಪ್ರಮುಖ ಪ್ರವಾಸ ಸಂಘಟನಾ ಸಂಸ್ಥೆಗಳಾಗಲಿ ಅಥವಾ ಟ್ರಾವೆಲ್ ಪೋರ್ಟಲ್‌ಗಳಾಗಲಿ ಶಾಲಾ, ಕಾಲೇಜು ವಿದ್ಯಾರ್ಥಿಗಳ ನಿರ್ದಿಷ್ಟ ಅವಶ್ಯಗಳನ್ನು ಪೂರೈಸುವಂಥ ಉತ್ಪನ್ನಗಳನ್ನು ವಿನ್ಯಾಸಗೊಳಿಸಿಯೇ ಇಲ್ಲ. ಈಗ ಎಲ್ಲರಿಗೂ ತಿಳಿದಿರುವಂತಹ ಒಂದು ಸಾಮಾನ್ಯ ಅಂಶವೆಂದರೆ, ಬಹುತೇಕ ಶೈಕ್ಷಣಿಕ ಸಂಸ್ಥೆಗಳು ಕಿರು ವಿಹಾರ/ಪ್ರವಾಸ/ಅಧ್ಯಯನ ಪ್ರವಾಸ/ವಾಣಿಜ್ಯ ಸಂಸ್ಥೆಗಳ, ಕೈಗಾರಿಕೆಗಳ ಭೇಟಿಯನ್ನು ಪ್ರತಿ ವರ್ಷವೂ ಹಮ್ಮಿಕೊಳ್ಳುತ್ತವೆ. ದಿನೇ ದಿನೇ ಬೆಳೆಯುತ್ತಿರುವ ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆ, ನೋಂದಣಿಗೊಳ್ಳುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ–ಇವೆಲ್ಲವನ್ನೂ ಗಮನಿಸಿ ಸ್ಪಷ್ಟವಾದ ರೀತಿಯಲ್ಲಿ ಇದನ್ನು ದುಡಿಸಿಕೊಳ್ಳುವತ್ತ ಸಂಘಟನಾಪೂರ್ವಕ ಪ್ರಯತ್ನ ನಡೆಯಬೇಕಿದೆ. ಪ್ರಸ್ತುತ ಅಸಂಘಟಿತ ವಲಯದ ಕೆಲವು ಪ್ರವಾಸೋದ್ಯಮಿಗಳು ಈ ಬೇಡಿಕೆಯನ್ನು ಅತ್ಯಂತ ವೃತ್ತಿಪರ ರಹಿತವಾದ ರೀತಿಯಲ್ಲಿ, ಅಸುರಕ್ಷಿತ ರೀತಿಯಲ್ಲಿ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳ ಸುರಕ್ಷತೆಯ ಪ್ರಶ್ನೆಯೂ ಉದ್ಭವಿಸಿದೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಲಾರ್ಜಿ ಹೈಡ್ರೋ ವಿದ್ಯುಚ್ಛಕ್ತಿ ನಿಗಮದವರು ಬಿಯಾಸ್ ನದಿಯ ಕೆಳಹರಿವಿಗೆ ಇದ್ದಕ್ಕಿದ್ದಂತೆ ಹೆಚ್ಚು ನೀರು ಹರಿಬಿಟ್ಟ ಕಾರಣ ನದಿ ದಡದಲ್ಲಿದ್ದ ಹೈದರಾಬಾದ್‌ನ ಎಂಜಿನಿಯರಿಂಗ್ ಕಾಲೇಜೊಂದರ 24 ವಿದ್ಯಾರ್ಥಿಗಳು ಕೊಚ್ಚಿಹೋದ ದುರಂತ. ಇದಲ್ಲದೇ ಪ್ರವಾಸದ ಹೆಸರಿನಲ್ಲಿ ವಂಚಿಸುವ ಮತ್ತು ಶೋಷಿಸುವ ಪ್ರಸಂಗಗಳೂ ಬೇಕಾದಷ್ಟಿವೆ.



ತಮ್ಮ ವಿದ್ಯಾರ್ಥಿ ಪ್ರತಿನಿಧಿಗಳೊಂದಿಗೆ ಪ್ರವಾಸವನ್ನು ಯೋಜಿಸುವ ಶಿಕ್ಷಕರಿಗೂ ವೃತ್ತಿಪರವಾದ ಅನುಭವದ ಕೊರತೆ ಸಮಸ್ಯೆಯಾಗಿ ಕಾಡುತ್ತದೆ. ಹಾಗಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಲ್ಲಿ ಉತ್ತಮ ಸೌಲಭ್ಯಗಳು, ಅನಗತ್ಯ ಆರ್ಥಿಕ ಹೊರೆಯ ನಿರ್ವಹಣೆ ಹಾಗೂ ಅನಿರೀಕ್ಷಿತ ಘಟನೆಗಳ ಸಂದರ್ಭದಲ್ಲಿ ಪರ್ಯಾಯ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತಿಲ್ಲ. ಇದೇ ಕಾರಣದಿಂದ ಬಸ್ಸು ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಹೊರೆ ಹೊತ್ತುಕೊಂಡ ನಿಸ್ತೇಜ ಮುಖದ ವಿದ್ಯಾರ್ಥಿಗಳ ಗುಂಪುಗಳು ಕಂಡು ಬರುವುದು ಸರ್ವೇ ಸಾಮಾನ್ಯವಾಗಿದೆ.

### ಮನುಷ್ಯನಿರ್ಮಿತ ಪ್ರವಾಸಿ ಸಂಪನ್ಮೂಲಗಳಿಗೆ ಪ್ರಚಾರ

ಸಾವಿರಾರು ಕಿಲೋಮೀಟರ್ ಪೂರ್ವ ಮತ್ತು ಪಶ್ಚಿಮ ಕರಾವಳಿಯಿದ್ದರೂ, ಬೇಸರದ ಸಂಗತಿಯೆಂದರೆ ಸಮುದ್ರತೀರ ಪ್ರವಾಸೋದ್ಯಮದ (ಬೀಚ್ ಟೂರಿಸಂ) ಬಗ್ಗೆ ಸಾಕಷ್ಟು ಗಮನವನ್ನೇ ಹರಿಸಿಲ್ಲ ಎಂಬುದು. ಪಶ್ಚಿಮ ಕರಾವಳಿಯಲ್ಲಿ ಗೋವಾ ಮತ್ತು ಪೂರ್ವ ಕರಾವಳಿಯಲ್ಲಿ ಪುರಿ ಸಮುದ್ರ ತೀರ ಹೊರತುಪಡಿಸಿದರೆ, ಇನ್ನೆಲ್ಲೂ ಅಂತಾರಾಷ್ಟ್ರೀಯವಾಗಿ ಪ್ರಸಿದ್ಧವಾಗಿರುವ ಸಮುದ್ರ ತೀರಗಳಿಲ್ಲ. ನಿಜ, ಕರಾವಳಿಯುದ್ದುದ್ದಕ್ಕೂ ಸಾವಿರಾರು ಸಮುದ್ರ ತೀರ ತಾಣಗಳು ತಮ್ಮದೇ ಆದ ವಿಶಿಷ್ಟತೆ ಹೊಂದಿದ್ದು, ಸ್ಥಳೀಯ ಮತ್ತು ಪ್ರಾದೇಶಿಕ ಮಟ್ಟದ ಮಾರುಕಟ್ಟೆಯತ್ತ ಗಮನಹರಿಸಿರಬಹುದು. ಆದರೂ, ಅರ್ಧ ಡಜನ್ ಗಿಂತಲೂ ಹೆಚ್ಚಿನ ಬೀಚ್ ಪ್ರವಾಸೋದ್ಯಮ ತಾಣಗಳನ್ನು ಕಡಿಮೆ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿಪಡಿಸಲಂತೂ ನಮ್ಮಲ್ಲಿ ಅವಕಾಶವಿದೆ. ಜಲಕ್ರೀಡೆ ಎಂಬುದು ಮತ್ತೊಂದು ಹೆಚ್ಚಿನ ಬೇಡಿಕೆಯಲ್ಲಿರುವಂಥ

(13ನೇ ಪುಟಕ್ಕೆ)

# ಭೀತರ್‌ಕನಿಕ ರಾಷ್ಟ್ರೀಯ ಉದ್ಯಾನದ ಮಾದರಿ

* ಮಧುಮಿತಾ ದಾಸ್ ಮತ್ತು
** ಬಾನಿ ಚಟರ್ಜಿ
ಕನ್ನಡಕ್ಕೆ : ಸ್ಮಿತಾ



**ಅಭಿವೃದ್ಧಿ ಹೊಂದುತ್ತಿರುವ ಭಾರತಕ್ಕೆ ಆರ್ಥಿಕ ಬೆಳವಣಿಗೆ ಮತ್ತು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಪರಿಸರ ಪ್ರವಾಸ ಎಂಬುದು ಮಾದರಿ ಉದ್ಯಮವಾಗಿದೆ.**

ಪ್ರವಾಸೋದ್ಯಮ, ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದು ಕೆಲವು ದೇಶಗಳ ರಾಷ್ಟ್ರೀಯ ಆದಾಯ ಹೆಚ್ಚಿಸುವ ಮೂಲ ಕೂಡ. ಹೀಗಿದ್ದರೂ ದೂರಗಾಮಿ ನೆಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಿಂದ ಹಾನಿ ತಪ್ಪಿದ್ದಲ್ಲ ಎಂಬ ಟೀಕೆಗಳೂ ಕೇಳಿ ಬರುತ್ತಿವೆ. ಪರಿಸರ ಹಾನಿಗೆ ಅದರ ಕೊಡುಗೆಯೂ ಇದೆ. ಪ್ರವಾಸಿಗಳ ಸಂಖ್ಯೆ ಹೆಚ್ಚಿದಂತೆ ಜೀವನ ಮಟ್ಟ ಹಾಗೂ ಪರಿಸರದ ಮೇಲೆ ಪರಿಣಾಮ ಬೀರುತ್ತದೆ. ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿದಂತೆ ಹಸಿರುಮನೆ ಅನಿಲ ಹೆಚ್ಚಳದ ಸಮಸ್ಯೆ ವೃದ್ಧಿಸುತ್ತದೆ, ಶಬ್ದ ಮಾಲಿನ್ಯ, ವಾಯುಮಾಲಿನ್ಯ, ಜಲಮಾಲಿನ್ಯ, ಜೈವಿಕ ಪರಿಸರ ನಾಶ, ಫಲವತ್ತಾದ ಭೂಮಿಗೆ ಬರಡುತನ ಇತ್ಯಾದಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದಲೇ ಪ್ರಕೃತಿ ಸಂರಕ್ಷಣೆಯ ಅಂತಾರಾಷ್ಟ್ರೀಯ ಒಕ್ಕೂಟವು 1992ರಲ್ಲಿ ಸಂರಕ್ಷಿತ ಪ್ರದೇಶಗಳಿಗೆ ಪ್ರವಾಸೋದ್ಯಮ ಅಭಿವೃದ್ಧಿ ಮಾರಕವಾಗುವುದೆಂದು ಹೇಳಿತ್ತು. ಪ್ರವಾಸೋದ್ಯಮದ ವಿರುದ್ಧ ಇರುವ ಟೀಕೆಗಳನ್ನು ಅನುಲಕ್ಷಿಸಿ ಅನೇಕ ಸಂಶೋಧಕರು ಪ್ರವಾಸೋದ್ಯಮವು ಎಚ್ಚರಿಕೆಯಿಂದ ಹಾಗೂ ಸುಸ್ಥಿರವಾಗಿ ಮುನ್ನಡೆಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ರಿಯೊ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ 'ನಮಗೆ ಬೇಕಾದ ಭವಿಷ್ಯ' ಕುರಿತಾಗಿ ಕೈಗೊಂಡ ನಿರ್ಣಯವು ಸುಸ್ಥಿರ ಪ್ರವಾಸೋದ್ಯಮವು ಅದರ ಕೆಡಕುಗಳನ್ನು ಮೀರುವ ಹೆಜ್ಜೆ ಇಡುವುದಕ್ಕೆ ಆದ್ಯತೆ ನೀಡಿದೆ. ಸುಸ್ಥಿರ ಪ್ರವಾಸೋದ್ಯಮ ಸದ್ಯದ ಮತ್ತು ಭವಿಷ್ಯದ ಆರ್ಥಿಕತೆ, ಸಾಮಾಜಿಕ ಮತ್ತು ಪರಿಸರದ ಮೇಲಿನ ಪರಿಣಾಮ, ಪ್ರವಾಸಿಗರ ಅವಶ್ಯಕತೆಗಳತ್ತ ಗಮನ, ಉದ್ಯಮ, ನಿಸರ್ಗ ಮತ್ತು ಸ್ಥಳೀಯ ಜನಸಮುದಾಯವನ್ನು ಒಳಗೊಳ್ಳಬೇಕು ಎಂದು ವಿಶ್ವಸಂಸ್ಥೆಯು ವ್ಯಾಖ್ಯಾನಿಸಿದೆ.

ಈಗ ಪರಿಸರ ಪ್ರವಾಸೋದ್ಯಮ ತ್ವರಿತವಾಗಿ ಬೆಳೆಯುತ್ತಿರುವ ಮಾರುಕಟ್ಟೆ. ಜಗತ್ತಿನ ಬೃಹತ್ ಉದ್ಯಮಗಳಲ್ಲಿ ಒಂದು ಎಂದೂ ಪರಿಗಣಿತವಾಗಿದೆ. ಸಾಂಪ್ರದಾಯಿಕ ಪ್ರವಾಸಿಗರಿಗಿಂತ ಈ ವರ್ಗದ ಪ್ರವಾಸಿಗರ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿರುವುದನ್ನು ಸ್ವಾರ್ಮರ್ ಸ್ಮಿತ್ ಅವರು 2004ರಲ್ಲಿ ನಡೆಸಿದ ಅಧ್ಯಯನ ಗುರುತಿಸಿದೆ. 2024ರ ವೇಳೆಗೆ ಪರಿಸರ ಪ್ರವಾಸೋದ್ಯಮವು ವಿಶ್ವದ ರಜಾ ಮಾರುಕಟ್ಟೆಯ ಶೇ 5 ರಷ್ಟನ್ನು ಆವರಿಸಿಕೊಳ್ಳಲಿದೆ ಎಂದೂ ಹೇಳಿದೆ. ಈ ಬೆಳವಣಿಗೆಗೆ ಗ್ರಾಹಕ ಪ್ರವೃತ್ತಿಯಲ್ಲಾದ ಬದಲಾವಣೆಯೂ ಕಾರಣವಾಗಿದೆ. ಪ್ರವಾಸಿಗರು ಪರಿಸರ ಪ್ರಜ್ಞೆ ಬೆಳೆಸಿಕೊಳ್ಳುತ್ತಿರುವುದನ್ನು 2006ರಲ್ಲಿ ಶಾರ್ಪ್‌ಲೇ ಅಧ್ಯಯನ ಗುರುತಿಸಿದೆ. 2012ರಲ್ಲಿ ನಡೆಸಿದ ಒಂದು ಸಮೀಕ್ಷೆಯಲ್ಲಿ ಶೇ 47ರಷ್ಟು ಪ್ರವಾಸಿಗರು ತಮ್ಮ ವಿಹಾರ ಸ್ಥಳಗಳ ಆದ್ಯತೆ ನಿಸರ್ಗಧಾಮಗಳಿಗೆ ಬದಲಾಗಿರುವುದನ್ನು ಹೇಳಿಕೊಂಡಿದ್ದಾರೆ. ಭೀತರ್‌ಕನಿಕ ರಾಷ್ಟ್ರೀಯ ಉದ್ಯಾನಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ 2008-09ರಲ್ಲಿ 37,080 ಇದ್ದುದು 2012-13ರ ವೇಳೆಗೆ 46,917ಕ್ಕೆ ಏರಿದ್ದನ್ನು ಒಡಿಶಾ ರಾಜ್ಯದ ಕೇಂದ್ರಪಾರ ಜಿಲ್ಲೆ ಅರಣ್ಯ ಇಲಾಖೆ ಮಾಹಿತಿ

ಮಾನವಿಕ ಮತ್ತು ಸಮಾಜವಿಜ್ಞಾನ ವಿಭಾಗ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಖರಗಪುರ.
Email : * madhumita.das@hss.iitkgp.ernet.in ** bani@hss.iitkgp.ernet.in

ಪತ್ರಿಕೆ ದೃಢಪಡಿಸಿದೆ. ವಿದೇಶಿ ಪ್ರವಾಸಿಗರ ಸಂಖ್ಯೆ ಪ್ರತಿವರ್ಷಕ್ಕೆ ಶೇ 6.5ರಂತೆ ಏರಿಕೆಯಾಗಿರುವುದನ್ನೂ ಗುರುತಿಸಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಭಾರತಕ್ಕೆ ಆರ್ಥಿಕ ಬೆಳವಣಿಗೆ ಮತ್ತು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಪರಿಸರ ಪ್ರವಾಸ ಎಂಬುದು ಮಾದರಿ ಉದ್ಯಮವಾಗಿದೆ. ನೈಸರ್ಗಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಸಮೂಹ ಪ್ರವಾಸೋದ್ಯಮ ನೈಸರ್ಗಿಕ ಸಂಪತ್ತಿಗೆ ಧಕ್ಕೆ ತರುವಂತಿದ್ದರೆ ಪರಿಸರ ಪ್ರವಾಸೋದ್ಯಮ ಇಂಥ ದುಷ್ಪರಿಣಾಮಗಳನ್ನು ತಗ್ಗಿಸಬಲ್ಲದು. ಸಂರಕ್ಷಣೆಗೂ ನೆರವಾಗಬಲ್ಲದು. ಸ್ಥಳೀಯ ಸಮುದಾಯಗಳಲ್ಲಿ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿ ಆ ಮೂಲಕ ಸ್ಥಳೀಕರ ವರಮಾನವನ್ನು ಹೆಚ್ಚಿಸಿ ವ್ಯವಹಾರ ಜ್ಞಾನವನ್ನೂ ವಿಸ್ತರಿಸಬಲ್ಲದು.

### ದೇಶದಲ್ಲಿ ಪರಿಸರ ಪ್ರವಾಸೋದ್ಯಮ

ಭಾರತದ ನಿಸರ್ಗ ಸೌಂದರ್ಯ ಅನುಪಮವಾದುದು. 'ಸಂಪತ್ತು, ಸಾಮರ್ಥ್ಯ ಮತ್ತು ಸೊಬಗು ಮೇಳೈಸಿದ ದೇಶವನ್ನು ಜಗತ್ತಿನಲ್ಲಿ ಹುಡುಕಲು ಹೊರಟರೆ ಭಾರತದ ಕೆಲವೊಂದು ಪ್ರದೇಶಗಳಲ್ಲಿ ನಾನು ಅಂಥ ಸ್ವರ್ಗ ಸದೃಶ ತಾಣವಾಗಿ ಕಾಣುತ್ತೇನೆ' ಎಂದು ಮ್ಯಾಕ್ಸ್ ಮುಲ್ಲರ್ ಒಮ್ಮೆ ಹೇಳಿದ್ದರು. ದೇಶದ ಪ್ರವಾಸೋದ್ಯಮ ಸಚಿವಾಲಯ 1998ರಲ್ಲಿ ರೂಪಿಸಿದ ಪರಿಸರ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಆಧರಿಸಿ ಪರಿಸರ ಮತ್ತು ಅರಣ್ಯ ಖಾತೆಯು 2011ರ ಜೂನ್‌ನಲ್ಲಿ ದೇಶದ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮವನ್ನು ಬೆಳೆಸಲು ಅಗತ್ಯವಾದ ನೀತಿ ನಿಯಮಗಳನ್ನು ರೂಪಿಸಲು ರಾಜ್ಯಗಳಿಗೆ ನಿರ್ದೇಶನ ನೀಡಿತ್ತು. ಭಾರತ ಸರ್ಕಾರ 12ನೇ ಪಂಚವಾರ್ಷಿಕ ಯೋಜನೆಯಲ್ಲಿ (2012–17) ಪ್ರವಾಸೋದ್ಯಮ ಚಟುವಟಿಕೆಗಳ ಲಾಭ ಆ ಪ್ರದೇಶಗಳ ಬಡ ಜನತೆಗೆ ತಲುಪಬೇಕು ಮತ್ತು ಅದು ಅಲ್ಲಿನ ಪರಿಸರ ಸಂರಕ್ಷಣೆಗೂ ಬಳಕೆಯಾಗಬೇಕು ಎಂಬ ಗುರಿಯನ್ನು ನಿಗದಿಪಡಿಸಿತ್ತು. ಭಾರತದಲ್ಲಿ ಈಗ ಒಂದು ನೂರು ರಾಷ್ಟ್ರೀಯ ಉದ್ಯಾನಗಳಿವೆ. 514 ವನ್ಯಜೀವಿ ಧಾಮಗಳಿವೆ. 43 ಸಂರಕ್ಷಿತ ಅರಣ್ಯಪ್ರದೇಶಗಳಿವೆ. ನಾಲ್ಕು ಸಮುದಾಯ ರಕ್ಷಿತ ಅರಣ್ಯ ಪ್ರದೇಶಗಳೂ ಸೇರಿದಂತೆ ಒಟ್ಟು 661 ಸಂರಕ್ಷಿತ ಪ್ರದೇಶಗಳಿವೆ. ದೇಶದ ವಿವಿಧ ಭಾಗಗಳಲ್ಲಿ ವ್ಯಾಪಿಸಿದ ಈ ಪ್ರದೇಶ ದೇಶದ ಭೂಭಾಗದ ಶೇ ಐದರಷ್ಟನ್ನು ಒಳಗೊಂಡಿದೆ.

ಒಡಿಶಾದ ಭೀತರ್‌ಕನಿಕ ವನ್ಯಜೀವಿ ಧಾಮ ವಿನಾಶದ ಅಂಚಿನಲ್ಲಿರುವ ಉಪ್ಪುನೀರಿನ ಮೊಸಳೆ ಸಂರಕ್ಷಣೆಗೆ ಹೆಸರಾದದ್ದು. ಪಶ್ಚಿಮ ಒಡಿಶಾದ ಕೇಂದ್ರಪಾರ ಜಿಲ್ಲೆಯಲ್ಲಿರುವ ಈ ವನ್ಯಜೀವಿ ಧಾಮದಲ್ಲಿ ಬೆಳೆದ 23 ಅಡಿ ಉದ್ದದ ಉಪ್ಪುನೀರಿನ ಮೊಸಳೆ 2008ರಲ್ಲಿ ಜಗತ್ತಿನ ಉದ್ದನೆಯ ಮೊಸಳೆಯೆಂದು ಗಿನ್ನೆಸ್ ವಿಶ್ವದಾಖಲೆಯಲ್ಲಿ ಸ್ಥಾನ ಪಡೆದಿತ್ತು. ಭೀತರ್‌ಕನಿಕ ರಾಷ್ಟ್ರೀಯ ಉದ್ಯಾನ 1975ರಲ್ಲಿ ಘೋಷಣೆಯಾಗಿದ್ದ ಭೀತರ್‌ಕನಿಕ ವನ್ಯಜೀವಿ ಧಾಮದಿಂದ 1998ರಲ್ಲಿ ಪ್ರತ್ಯೇಕಗೊಂಡಿತ್ತು. ಜಗತ್ತಿನಲ್ಲಿಯೇ ಎರಡನೆಯ ಅತಿದೊಡ್ಡ ಮಾನವನಿರ್ಮಿತ ಜೀವಿಪರಿಸರ ಧಾಮವೆಂದು ಪರಿಗಣಿತವಾದ ಈ ರಾಷ್ಟ್ರೀಯ ಉದ್ಯಾನದ ವಿಸ್ತೀರ್ಣ 672 ಚದರ ಕಿಲೋಮೀಟರ್. ಬ್ರಾಹ್ಮಣಿ, ಬೈತರಣಿ ಮತ್ತು ಧಮ್ರಾ ನದಿಗಳ ಸಂಗಮ ಪ್ರದೇಶದಲ್ಲಿ ಮೊಸಳೆಗಳ ನೈಸರ್ಗಿಕ ಆವಾಸವಾಗಿ ಅಭಿವೃದ್ಧಿ ಹೊಂದಿದೆ.

ಒಡಿಶಾ ರಾಜ್ಯದ ಕೇಂದ್ರಪಾರ ಜಿಲ್ಲೆ ರಾಜನಗರದ ಕಾಂಡ್ಲವನ ಅರಣ್ಯ ವಿಭಾಗ, ಭುವನೇಶ್ವರದ ಪ್ರಧಾನ ಮುಖ್ಯ ಅರಣ್ಯ ಸಂಕ್ಷಣಾಧಿಕಾರಿ ಕಚೇರಿಯಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. 2014ರ ಫೆಬ್ರುವರಿಯಿಂದ ಜುಲೈ ವರೆಗೆ ನಡೆಸಿದ ಕ್ಷೇತ್ರ ಕಾರ್ಯ ಅಧ್ಯಯನದಲ್ಲಿ ಪ್ರವಾಸಿಗರಿಂದ ಮಾಹಿತಿ ಪಡೆಯಲಾಗಿದೆ. ಅಲ್ಲಿನ ನೈಸರ್ಗಿಕ ಸೊಬಗನ್ನು ಆಸ್ವಾದಿಸುವುದಕ್ಕೆ ಬರುತ್ತಿರುವ ಪ್ರವಾಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿರುವಂತೆ ಅವರಿಗೆ ಅನುಕೂಲ ಕಲ್ಪಿಸಲು ಬಗೆಬಗೆಯ ಕೆಲಸಗಳು ಸೃಷ್ಟಿಯಾಗಿದ್ದು ಅದರಲ್ಲಿ ಸ್ಥಳೀಯರು ಭಾಗಿಯಾಗುತ್ತಿರುವುದು ನಿಸರ್ಗ ಸಂಪತ್ತಿನ ರಕ್ಷಣೆಯಲ್ಲಿ ಮಹತ್ವದ ಸಂಗತಿ. ಇದರಿಂದ ಸ್ಥಳೀಯರಿಗೆ ಅರಣ್ಯ ಉತ್ಪನ್ನಗಳ ಮೇಲಿನ ಅವಲಂಬನೆ ಕಡಿಮೆಯಾಗಿ ಅವರ ಸಂರಕ್ಷಣೆಯಲ್ಲಿ ಭಾಗಿಯಾಗುವಂತಾಯಿತು. ಅರಣ್ಯ ಇಲಾಖೆಯ ಸಹಯೋಗದಲ್ಲಿ ಸ್ಥಳೀಯ ಗ್ರಾಮಸ್ಥರು ಅನೇಕ



ಪರಿಸರ ಅಭಿವೃದ್ಧಿ ಸಮಿತಿಗಳನ್ನು ರಚಿಸಿಕೊಂಡಿದ್ದಾರೆ. ಇಲಾಖೆ ಅಧಿಕಾರಿಗಳು, ಸ್ಥಳೀಯ ಮುಖಂಡರು ಮತ್ತು ಕೆಲವು ಪರಿಸರತಜ್ಞರು ಒಳಗೊಂಡ ಭೀತರ್ ಕನಿಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಸೊಸೈಟಿಗಳನ್ನೂ ಈಚೆಗೆ ರಚಿಸಿಕೊಳ್ಳಲಾಗಿದೆ. ಈ ಸೊಸೈಟಿಯಿಂದ ಸ್ಥಳೀಯ ಯುವಕರಿಗೆ ಪ್ರವಾಸೋದ್ಯಮಕ್ಕೆ ಸಂಬಂಧಿಸಿ ಸಣ್ಣಮಟ್ಟ ಕೆಲಸಗಳನ್ನು ಆರಂಭಿಸಲು ತರಬೇತಿಯನ್ನೂ ನೀಡಲಾಗುತ್ತಿದೆ. ರಾಷ್ಟ್ರೀಯ ಉದ್ಯಾನದ ಒಳಗಡೆ ಮಾತ್ರವಲ್ಲದೆ ಅದರ ಹೊರಗಡೆಯೂ ಸೃಷ್ಟಿಯಾದ ಕೆಲಸದ ಅವಕಾಶಗಳ ವಿವರ ಇಲ್ಲಿದೆ: ಭೀತರ್ ಕನಿಕ ರಾಷ್ಟ್ರೀಯ ಉದ್ಯಾನವನ್ನು ಪರಿಸರ ಪ್ರವಾಸೋದ್ಯಮಕ್ಕೆ ತೆರೆದಾಗ ಸ್ಥಳೀಯರು ನಿರೀಕ್ಷೆ ಮಾಡಿದ್ದು ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿಯ ಬಗ್ಗೆ ಗಮನ. ಅದರಂತೆ ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ ಅನ್ವಯ ರಾಜನಗರದಿಂದ ರಾಷ್ಟ್ರೀಯ ಉದ್ಯಾನಕ್ಕೆ ಪಕ್ಕಾ ರಸ್ತೆಯ ನಿರ್ಮಾಣವಾಯಿತು. ಉತ್ತಮ ರಸ್ತೆ ಇದ್ದಾಗ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಯಿತು. ಪ್ರವಾಸಿಗರೊಂದಿಗೆ ವ್ಯವಹರಿಸುವುದರಿಂದ ಸ್ಥಳೀಯರ ವ್ಯವಹಾರ ಚಾತುರ್ಯವೂ ಬೆಳೆಯಿತು. ಸ್ಥಳೀಯ ಹೆಣ್ಣುಮಕ್ಕಳು ನಾಲ್ಕುಗೋಡೆಗಳ ಆವರಣದಿಂದ ಹೊರ ಬಂದು ಪ್ರವಾಸಿಗರಿಗೆ ಅಗತ್ಯ ವಸ್ತುಗಳನ್ನು ಒದಗಿಸಲು ಮುಂದಾದರು. ಅನೇಕ ಸ್ವಸಹಾಯ ಗುಂಪುಗಳು ರಚನೆಯಾದವು. ಮಹಿಳೆಯರ ಗುಂಪುಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗದಿದ್ದರೂ ಪ್ರವಾಸಿಗರ ಆಗಮನದಿಂದ ಅನುಕೂಲವಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ನೆರವಾಯಿತು. ಆರೋಗ್ಯ ವ್ಯವಸ್ಥೆ ಮತ್ತು ಶಿಕ್ಷಣ ಸೌಲಭ್ಯಗಳ ವಿಷಯದಲ್ಲಿಯೂ ಸುಧಾರಣೆಗಳಾದವು. ರಸ್ತೆ ಸುಧಾರಣೆಯಿಂದ ಸರ್ಕಾರಿ ಆಂಬ್ಯುಲೆನ್ಸ್ ವಾಹನ 108ಕ್ಕೆ ಕರೆ ಮಾಡುವ, ಅದರ ಪ್ರಯೋಜನ ಪಡೆಯುವ ಪ್ರಕರಣಗಳು

ಹೆಚ್ಚಾದವು. ರಸ್ತೆಯ ಕಾರಣ ಸ್ಥಳೀಯ ಮಕ್ಕಳು ಶಾಲೆಗಳ ಮುಖ ನೋಡುವಂತಾಯಿತು. ಆದರೆ, ರಾಷ್ಟ್ರೀಯ ಉದ್ಯಾನದಿಂದ ಹೆಚ್ಚು ದೂರ ಇರುವ ಹಳ್ಳಿಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳು ಸಿಗಬೇಕಾಗಿದೆ. ಪ್ರವಾಸಿಗರ ಆಗಮನ ತರುತ್ತಿರುವ ಆದಾಯದಿಂದ ಸ್ಥಳೀಯರ ಸಾಮಾಜಿಕ– ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ ಬದಲಾವಣೆ ಆಗುತ್ತಿರುವುದರಿಂದ ಸ್ಥಳೀಯರು ಅರಣ್ಯದಿಂದ ಕಟ್ಟಿಗೆ, ಉದುರು ಎಲೆ ಮತ್ತು ಜೇನು ಮತ್ತಿತರ ಅರಣ್ಯ ಉತ್ಪತ್ತಿಗಳಿಗಾಗಿ ಕಾಡನ್ನು ನುಗ್ಗುವ ಸನ್ನಿವೇಶ ನಿವಾರಣೆಯಾಗಿದೆ. ಸಂರಕ್ಷಿತ ಅರಣ್ಯದಲ್ಲಿ ಮನುಷ್ಯರ ಚಟುವಟಿಕೆ ಕಡಿಮೆಯಾಗಿರುವುದರಿಂದ ವನ್ಯಜೀವಿಗಳ ಸಂತತಿಯೂ ಹೆಚ್ಚುತ್ತಿದೆ. 2002–03ರಲ್ಲಿ 1308ರಷ್ಟಿದ್ದ ಮೊಸಳೆಗಳ ಸಂಖ್ಯೆ 2009–10ರ ವೇಳೆಗೆ 1610ಕ್ಕೆ ಏರಿದೆ. ಅರಣ್ಯದಲ್ಲಿ ಚಿರತೆ, ಕಾಡುಹಂದಿಗಳನ್ನು ನೋಡಲು ಸಾಧ್ಯವಾಗುತ್ತಿದೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಹತ್ತು ವರ್ಷಗಳ ಹಿಂದೆ ಅವು ಕಾಣುತ್ತಿರಲಿಲ್ಲವಂತೆ. ಕಾಡಿನಲ್ಲಿ ನುಗ್ಗಿ ಒಣಕಟ್ಟಿಗೆಯನ್ನು ತರುವುದಕ್ಕೆ ನಿಷೇಧವಿರುವುದರಿಂದ ಅರಣ್ಯ ಪ್ರದೇಶದಲ್ಲಿ ಸಸ್ಯಸಾಂದ್ರತೆಯೂ ಹೆಚ್ಚಾಗಿದೆ. ಕಾಡು ಸಮೃದ್ಧವಾಗುತ್ತಿರುವುದರ ಬಗ್ಗೆ ಸ್ಥಳೀಯರಲ್ಲಿ ಮೆಚ್ಚುಗೆಯೂ ಉಂಟಾಗುತ್ತಿದೆ. ಭೀತರ್ ಕನಿಕ ರಾಷ್ಟ್ರೀಯ ಉದ್ಯಾನವನ್ನು ಪರಿಸರ ಪ್ರವಾಸೋದ್ಯಮಕ್ಕೆ ತೆರೆದ ಬಗ್ಗೆ ಸ್ಥಳೀಯರಲ್ಲಿ ಸಮಾಧಾನವಿದೆಯಾದರೂ, ಅದರಿಂದ ಅವರಿಗೆ ಆರ್ಥಿಕವಾಗಿ ಅನುಕೂಲ ಕಾಣುತ್ತಿದ್ದರೂ ತಮಗೆ ಕಾಯಂ ಸ್ವರೂಪದ ನೌಕರಿ ಆಗುತ್ತಿಲ್ಲ ಎಂಬ ಹಳಹಳಿಕೆಯನ್ನು ಆಗಾಗ ವ್ಯಕ್ತಪಡಿಸುತ್ತಾರೆ. ದೋಣಿ ನಡೆಸುವವರು, ಹೋಟೆಲುಗಳಲ್ಲಿ ಕೆಲಸ ಮಾಡುವವರಿಗೂ ಈ ಬಗ್ಗೆ ಸಮಾಧಾನವಿಲ್ಲ. ಗೈಡ್‌ಗಳದೂ ಅಸಂತೃಪ್ತಿ. ಮೂಲ ಶಿಕ್ಷಣದ ಕೊರತೆ ಅವರ ಆದಾಯ ಹೆಚ್ಚಳ ಸಾಧ್ಯತೆಗೆ ಅಡ್ಡಿಯಾಗಿರುವುದನ್ನು ಮನಗಾಣುತ್ತಿದ್ದಾರೆ. ಇದರಲ್ಲಿ ಹೆಚ್ಚಿನ ಅಸಮಾಧಾನ ಮಹಿಳೆಯರಲ್ಲಿಯೂ ಕಂಡು ಬಂದಿದೆ. ಆದರೆ, ಪ್ರವಾಸಗಳನ್ನು ನಿರ್ವಹಿಸುವವರು, ವಸತಿಗೃಹ ಹಾಗೂ ಹೊಟೆಲು ಮಾಲಿಕರು, ದೋಣಿ ನಡೆಸುವವರು ಹೆಚ್ಚಿನ ಲಾಭ ಗಳಿಸುತ್ತಿದ್ದಾರೆ. ಉದ್ಯಾನದ ಒಳಗಡೆ ಶ್ರಮದ ಕೆಲಸ ಮಾಡುತ್ತಿರುವವರಿಗೆ ದಿನದ ಕೂಲಿ. ಅವರ ಜೀವನ ಶೈಲಿಯಲ್ಲಿ ಹೆಚ್ಚಿನ ಬದಲಾವಣೆ ಕಂಡಿಲ್ಲ. ಇಂಥವರು ಕಟ್ಟಿಗೆಗಾಗಿ ಅರಣ್ಯವನ್ನು ಅವಲಂಬಿಸಬೇಕಾಗಿದೆ. ಪರಿಸರ ಪ್ರವಾಸೋದ್ಯಮದಲ್ಲಿ ಭಾಗಿಯಾಗಲಾರದ ಸ್ಥಳೀಯರು ನದಿ ತೀರದಲ್ಲಿ ಮೀನು ಹಿಡಿಯುವ, ಅರಣ್ಯದ ಅಂಚಿನಲ್ಲಿ ಹುಲ್ಲು ಕೊಯ್ಯುವ, ಒಳಗಡೆ ನುಗ್ಗಿ ಒಣ ಕಟ್ಟಿಗೆಗಳನ್ನು ಸಂಗ್ರಹಿಸುವ ಕೆಲಸ ಮಾಡಲೇಬೇಕಾಗಿದೆ. ತಜ್ಞ ಗೈಡುಗಳ ಕೊರತೆಯೂ ಪ್ರವಾಸಿಗರಿಗೆ ಎದ್ದು ಕಾಣುತ್ತದೆ. ಪರಿಸರ ಪ್ರವಾಸೋದ್ಯಮಕ್ಕೆ ಇಲಾಖೆ ಅಕ್ಟೋಬರ್‌ನಿಂದ ಫೆಬ್ರವರಿಯವರೆಗೆ ಮಾತ್ರ ಸಮಯ ನಿಗದಿ ಮಾಡಿರುವುದೂ ಸ್ಥಳೀಯರಿಗೆ ಕೊರತೆ ಎನಿಸಿದೆ.

| ಕೋಷ್ಟಕ 1: ಪ್ರವಾಸಿಗರ ಸಂಖ್ಯೆ ಮತ್ತು ವರಮಾನ ಸಂಗ್ರಹ | | | | |
|---|---|---|---|---|
| ವರ್ಷ | ಪ್ರವಾಸಿಗರು | | ಸಂಗ್ರಹವಾದ ಹಣ (ರೂಪಾಯಿಗಳಲ್ಲಿ) | ಒಟ್ಟು |
| | ಭಾರತೀಯರು | ವಿದೇಶೀಯರು | | |
| 2008–09 | 36,792 | 288 | 37,080 | 12,63,479 |
| 2009–10 | 45,178 | 249 | 45,427 | 11,19,696 |
| 2010–11 | 48,972 | 300 | 49,272 | 15,86,383 |
| 2011–12 | 39,295 | 275 | 39,570 | 13,86,868 |
| 2012–13 | 46,714 | 203 | 46,917 | 15,48,989 |

ಮೂಲ : ಒಡಿಶಾ ಕೇಂದ್ರಪಾರ ಜಿಲ್ಲೆ ರಾಜನಗರದ ಕಾಂಡ್ಲವನ ಅರಣ್ಯ ವಿಭಾಗ।

ಭೀತರ್ ಕನಿಕ ರಾಷ್ಟ್ರೀಯ ಉದ್ಯಾನವನ್ನು ಪರಿಸರ ಪ್ರವಾಸೋದ್ಯಮಕ್ಕೆ ಮುಕ್ತಗೊಳಿಸಿದ ನಂತರ ಜನ– ಜಾನುವಾರು ಹಾನಿ, ವನ್ಯಜೀವಿಗಳಿಂದ ಕಾಡಂಚಿನ ಬೆಳೆನಾಶದ ಸಮಸ್ಯೆಗಳನ್ನು ಸ್ಥಳೀಯರು ಎದುರಿಸುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಇಲಾಖೆಯ ಸಂಕೀರ್ಣ ಮಾರ್ಗಸೂಚಿಯ ಕಾರಣ ಸರ್ಕಾರದ ಪರಿಹಾರವೂ ಸಿಗುತ್ತಿಲ್ಲ. ಇದರಿಂದ ಸ್ಥಳೀಯರು 'ಸರ್ಕಾರಕ್ಕೆ ಜನರ ಪ್ರಾಣಕ್ಕಿಂತಲೂ ವನ್ಯಜೀವಿಗಳ ಪ್ರಾಣ ಅಮೂಲ್ಯವಾಗಿವೆ' ಎಂದು ಆಕ್ಷೇಪಿಸುವುದಕ್ಕೆ ಆಸ್ಪದವಾಗಿದೆ. ಇದಕ್ಕೆ ಅಧಿಕಾರಶಾಹಿಯ ದುರ್ವರ್ತನೆಯೂ ಕೆಲವು ಮಟ್ಟಿಗೆ ಕಾರಣವಾಗಿದೆ. ಆದ್ದರಿಂದ ಭೀತರ್‌ಕನಿಕ ರಾಷ್ಟ್ರೀಯ ಉದ್ಯಾನದಲ್ಲಿ ಪರಿಸರ ಪ್ರವಾಸೋದ್ಯಮ ಯಶಸ್ವಿಯಾಗುವುದಕ್ಕೆ ಸಂಪನ್ಮೂಲ, ಸ್ಥಳೀಯ ಜನತೆ ಹಾಗೂ ಪ್ರವಾಸಿಗರ ಮಧ್ಯೆ ಹೊಂದಾಣಿಕೆಯನ್ನು ತರುವುದು ಅವಶ್ಯಕವಾಗಿದೆ. ಪ್ರವಾಸಿಗರಲ್ಲಿ ಮಾತ್ರವಲ್ಲದೆ ಸ್ಥಳೀಯ ಜನತೆಯಲ್ಲಿಯೂ ಪರಿಸರ ಪ್ರವಾಸೋದ್ಯಮ ಕುರಿತಾಗಿ ಜಾಗೃತಿ ಮೂಡಿಸಬೇಕಾಗಿದೆ. ಇಬ್ಬರಿಗೂ ಅದು ಲಾಭಕರವೆಂದು ಮನವರಿಕೆ ಮಾಡಿಕೊಡಬೇಕು. ಸ್ಥಳೀಯರಿಗೆ ಅದು ಲಾಭಕರವೆಂದು ಅರಿವಾದರೆ ಅರಣ್ಯ ಸಂರಕ್ಷಣೆಯಲ್ಲಿ ಅವರು ಸಂಪೂರ್ಣವಾಗಿ ತೊಡಗಿಕೊಳ್ಳುತ್ತಾರೆ. ಬಂದೂಕು ತೋರಿಸಿ, ಲಾಠಿಯಿಂದ ಬೆದರಿಸದೆ ಸ್ಥಳೀಯರನ್ನು ವಿಶ್ವಾಸಕ್ಕೆ ತಂದುಕೊಂಡು ವ್ಯವಹರಿಸಿದರೆ ಸಂರಕ್ಷಣೆಯ ಕೆಲಸ ಸುಲಭವಾಗುತ್ತದೆ. ಸರ್ಕಾರ ಎಂದಿನ ಸಾಂಸ್ಥಿಕ ಚೌಕಟ್ಟಿನ ಭ್ರಷ್ಟ ಕಪಿಮುಷ್ಠಿಯಿಂದ ಹೊರಬಂದು ಸ್ಥಳೀಯರನ್ನು ಅಭಿವೃದ್ಧಿಯಲ್ಲಿ ಭಾಗಿದಾರರಂತೆ ನೋಡಿಕೊಂಡರೆ ಪರಿಸರ ಪ್ರವಾಸೋದ್ಯಮದ ಪ್ರಯತ್ನ ಆ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಬಲ್ಲದು.

## ಉಪಸಂಹಾರ

ಸದ್ಯಕ್ಕೆ ಅದರ ಅನುಷ್ಠಾನದಲ್ಲಿ ಅನೇಕ ಎಡರು ತೊಡರುಗಳು ಕಾಣಿಸಿಕೊಂಡರೂ ಪರಿಸರ ಪ್ರವಾಸೋದ್ಯಮಕ್ಕೆ ಉಜ್ವಲ ಭವಿಷ್ಯವಿದೆ. ನೈಸರ್ಗಿಕ ಸಂಪನ್ಮೂಲ ಮತ್ತು ಅದಕ್ಕೆ ಸಂಬಂಧಿಸಿದ ಜನಸಮುದಾಯದ ಸಮಗ್ರ ಅಭಿವೃದ್ಧಿಯನ್ನು ಸುಧಾರಿಸಲು ಪ್ರಾಮಾಣಿಕ ಪ್ರಯತ್ನ ನಡೆದರೆ ಈ ಪರಿಕಲ್ಪನೆ ಯಶಸ್ವಿಯಾಗುವುದು ಖಚಿತ. ಅಡ್ಡಿಯಾಗುವ ಅಂಶಗಳನ್ನು ನಿವಾರಿಸಿ ಸ್ಥಳೀಯರ ಏಳಿಗೆ ಮತ್ತು ನೈಸರ್ಗಿಕ ಸಂಪನ್ಮೂಲದ ಸಂರಕ್ಷಣೆಯ ಆಶಯಗಳನ್ನು ನಿರ್ವಹಿಸಿದರೆ ಸಂಬಂಧ ಪಟ್ಟ ಎಲ್ಲರಿಗೂ ಅನುಕೂಲವಾಗುತ್ತದೆ. ನೈಸರ್ಗಿಕ ಸಂಪನ್ಮೂಲದ ಉಳಿವು ಮತ್ತು ಸ್ಥಳೀಯ ಜನಸಮುದಾಯದ ಏಳಿಗೆಯನ್ನು ಏಕಕಾಲದಲ್ಲಿ ಸಾಧಿಸುವುದು ಸಾಧ್ಯ. ❑

# ಶೈಕ್ಷಣಿಕ ಪ್ರವಾಸೋದ್ಯಮ: ಅಂದು, ಇಂದು, ಮುಂದು

* ಅರ್ಚನಾ ಕುಮಾರಿ
** ದಿವ್ಯಾಂಶು ಕುಮಾರ್
ಕನ್ನಡಕ್ಕೆ : ಅಕ್ಕಿಮಂಗಲ ಸುರೇಶ



**ಭಾರತದಲ್ಲಿ ಪ್ರಸ್ತುತ ಶೈಕ್ಷಣಿಕ ಪ್ರವಾಸೋದ್ಯಮ ಮಸುಕಾಗಿ ಕಂಡರೂ, ಶೈಕ್ಷಣಿಕ ಪ್ರವಾಸೋದ್ಯಮದ ವಿಸ್ತರಣೆಗೆ ಇರುವ ಅವಕಾಶಗಳ ಬಗ್ಗೆ ಜಾಗತಿಕ ವರದಿಗಳಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ. ಇದನ್ನು ನೋಡಿದಾಗ ಭಾರತದ ಶೈಕ್ಷಣಿಕ ಪ್ರವಾಸೋದ್ಯಮದ ಬಗ್ಗೆ ಭರವಸೆಯ ಆಶಾಕಿರಣ ಮೂಡುತ್ತದೆ.**

**ಪ್ರಾ**ಚೀನ ಕಾಲದಿಂದಲೂ ಭಾರತವು ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿನ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿದೆ. ತಕ್ಷಶಿಲಾ, ನಳಂದ, ವಿಕ್ರಮಶಿಲಾ ವಿಶ್ವವಿದ್ಯಾಲಯಗಳು ಜ್ಞಾನದ ಕೇಂದ್ರಗಳಾಗಿದ್ದವು. ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಹಾಗೂ ಹೊಸ ವಿಚಾರಗಳ ಬಗ್ಗೆ ತಿಳಿದುಕೊಳ್ಳುವ ಉದ್ದೇಶದಿಂದ ದೇಶಿಯ ವಿದ್ವಾಂಸರು ಅಷ್ಟೆ ಅಲ್ಲದೆ ವಿದೇಶಗಳ ವಿದ್ವಾಂಸರು ಸಹ ಇಲ್ಲಿಗೆ ಭೇಟಿ ನೀಡುತ್ತಿದ್ದರು. ಇದರಿಂದಾಗಿಯೇ ಇವು ಪ್ರಮುಖ ಶೈಕ್ಷಣಿಕ ತಾಣಗಳಾಗಿ ಅಭಿವೃದ್ಧಿ ಹೊಂದಿದ್ದವು. ಈ ಮೂಲಕ ಭಾರತದಲ್ಲಿ ಶೈಕ್ಷಣಿಕ ಪ್ರವಾಸೋದ್ಯಮಕ್ಕೆ ಬುನಾದಿ ಹಾಕಲಾಯಿತು. ಪ್ರಮುಖ ಶೈಕ್ಷಣಿಕ ಪ್ರವಾಸೋದ್ಯಮ ತಾಣವಾಗಿ ಬಿಂಬಿಸಿಕೊಳ್ಳುವ ನಿಟ್ಟಿನಲ್ಲಿ ಭಾರತ ಈಗಲೂ ಕಾರ್ಯೋನ್ಮುಖವಾಗಿದೆ. ಶೈಕ್ಷಣಿಕ ಮತ್ತು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಭಾರತ ಗಣನೀಯ ಪ್ರಗತಿ ಸಾಧಿಸಿದೆ. ನೆರೆಯ ರಾಷ್ಟ್ರಗಳು ಅಷ್ಟೆ ಅಲ್ಲದೆ ಇಡೀ ಜಗತ್ತು ಮೆಚ್ಚುವಂತಹ ಶೈಕ್ಷಣಿಕ ಪ್ರವಾಸೋದ್ಯಮ ತಾಣವಾಗಿ ಹೊರಹೊಮ್ಮುವ ಎಲ್ಲ ಅವಕಾಶಗಳನ್ನು ಹೊಂದಿದೆ.

ಶೈಕ್ಷಣಿಕ ಪ್ರವಾಸೋದ್ಯಮ ನೇರವಾಗಿ ಕಲಿಕೆಯ ಸ್ಥಳ ಮತ್ತು ಉದ್ದೇಶವನ್ನು ಬಿಂಬಿಸುತ್ತದೆ. ಸ್ಥಳವನ್ನು ಆಧರಿಸಿ ಶೈಕ್ಷಣಿಕ ಉದ್ದೇಶಕ್ಕಾಗಿ ಬರುವವರ ಸಂಖ್ಯೆ ಅಧಿಕವಾಗಿದ್ದು, ಇದು ಕಲಿಕಾ ಅವಧಿಯಲ್ಲಿ ಹೊಸ ಅನುಭವವನ್ನು ನೀಡಲಿದೆ. ಶೈಕ್ಷಣಿಕ ಉದ್ದೇಶಕ್ಕಾಗಿ ಪ್ರವಾಸ ಕೈಗೊಳ್ಳುವುದು ಚಿಂತಕರ (ಗಿಬ್ಸನ್ 1998; ಹಾಲ್ಡ್ನಕ್ ಅಂಡ್ ಹಾಲೆಂಡ್) ಪ್ರಕಾರ ಹೊಸದೇನೂ ಅಲ್ಲ. ಶೈಕ್ಷಣಿಕ ಪ್ರವಾಸೋದ್ಯಮ ಮಾರುಕಟ್ಟೆಯ ಜನಪ್ರಿಯತೆ ಈಚೆಗೆ ಹೆಚ್ಚಾಗುತ್ತಿದೆ ಅಷ್ಟೆ. ಇನ್ನು ದೇಶಿಯವಾಗಿ ಅಷ್ಟೆ ಅಲ್ಲದೆ ಜಾಗತಿಕ ಮಟ್ಟದಲ್ಲೂ ಶೈಕ್ಷಣಿಕ ಕ್ಷೇತ್ರಕ್ಕೆ ಭಾರತ ನೀಡಿರುವ ಕೊಡುಗೆ ಅಪಾರವಾದುದು. ವಿಶ್ವದ ಹಲವು ರಾಷ್ಟ್ರಗಳ ವಿದ್ಯಾರ್ಥಿಗಳು ಭಾರತದತ್ತ ಆಕರ್ಷಿತರಾಗಿದ್ದು, ಶೈಕ್ಷಣಿಕ ಉದ್ದೇಶಕ್ಕಾಗಿ ಭಾರತವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

### ಭಾರತಕ್ಕೆ ಇರುವ ಅನುಕೂಲಕರ ಅಂಶಗಳು

* ಅತ್ಯಂತ ವೇಗವಾಗಿ ಆರ್ಥಿಕ ಬೆಳವಣಿಗೆ ಸಾಧಿಸುತ್ತಿರುವ ರಾಷ್ಟ್ರಗಳಲ್ಲಿ ಭಾರತವು ಒಂದಾಗಿರುವುದು. * ಪ್ರಮುಖ ಪ್ರವಾಸಿ ತಾಣವಾಗಿ ಹೊರ ಹೊಮ್ಮುತ್ತಿರುವುದು. * ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಉಳಿದುಕೊಳ್ಳಲು ತಗಲುವ ವೆಚ್ಚ ಕಡಿಮೆ. * ಭಾರತದಲ್ಲಿ ಅತ್ಯುತ್ತಮ ಶೈಕ್ಷಣಿಕ ಸಂಸ್ಥೆಗಳಿದ್ದು, ಎಲ್ಲ ರೀತಿಯ ಸೌಲಭ್ಯಗಳು, ಸಂಪನ್ಮೂಲಗಳು ಲಭ್ಯವಾಗುತ್ತಿವೆ. * ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಮಾನವ ಸಂಪನ್ಮೂಲವನ್ನು ಒದಗಿಸುವ ಪ್ರಮುಖ ರಾಷ್ಟ್ರವಾಗಿರುವುದು. ಶೈಕ್ಷಣಿಕ ಪ್ರವಾಸೋದ್ಯಮಕ್ಕೆ ಭಾರತದಲ್ಲಿ ಇರುವ ಅನುಕೂಲಕರ ಅಂಶಗಳ ಬಗ್ಗೆ ಚರ್ಚೆ ನಡೆಸುವ ಮುನ್ನ ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಶೈಕ್ಷಣಿಕ ಪ್ರವಾಸೋದ್ಯಮಕ್ಕೆ ಇದ್ದ ಸಕಾರಾತ್ಮಕ ಅಂಶಗಳ ಬಗ್ಗೆ ಗಮನಹರಿಸುವುದು ಬಹಳ ಮುಖ್ಯ.

* ಪ್ರಾಧ್ಯಾಪಕರು, ಸೆಂಟ್ರಲ್ ಯುನಿವರ್ಸಿಟಿ. E-mail : kumardivyanshu@gmail.com
** ಪ್ರಾಧ್ಯಾಪಕರು ಐಐಎಂಸಿ.

ಪ್ರಾಚೀನ ಕಾಲದಲ್ಲಿ ಐತಿಹಾಸಿಕವಾದ ತಕ್ಷಶಿಲಾ ಮತ್ತು ನಳಂದ ವಿಶ್ವವಿದ್ಯಾಲಯಗಳು ಅಷ್ಟೆ ಅಲ್ಲದೆ ಭಾರತದಲ್ಲಿ ಇನ್ನೂ ಕೆಲವು ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿದ್ದವು. ಬಿಹಾರದಲ್ಲಿ ಓದಂತಪುರಿ, ವಿಕ್ರಮಶಿಲಾ, ಬಾಂಗ್ಲಾದೇಶದಲ್ಲಿ ಸೋಮಪುರ, ಬಂಗಾಳದಲ್ಲಿ ಜಗದ್ದಳ, ಆಂಧ್ರಪ್ರದೇಶದಲ್ಲಿ ನಾಗಾರ್ಜುನಕೊಂಡ, ಕಾಶ್ಮೀರದಲ್ಲಿ ಶಾರದಾಪೀಠ, ಗುಜರಾತ್‌ನಲ್ಲಿ ವಲಭಿ, ಉತ್ತರ ಪ್ರದೇಶದಲ್ಲಿ ವಾರಾಣಸಿ, ತಮಿಳುನಾಡಿನಲ್ಲಿ ಕಾಂಚಿಪುರಂ, ಕರ್ನಾಟಕದಲ್ಲಿ ಮಾನ್ಯಖೇಡ, ಒಡಿಶಾದಲ್ಲಿ ಪುಷ್ಪಗಿರಿ, ರತ್ನಗಿರಿ ಹಾಗೂ ಶ್ರೀಲಂಕಾದಲ್ಲಿ ಸುನೇತ್ರಾದೇವಿ ಪಿರಿವೀಣಾ ಬೌದ್ಧ ಕಲಿಕಾ ಕೇಂದ್ರಗಳು ಇದ್ದವು. ಆದರೆ, ತಕ್ಷಶಿಲಾ ಮತ್ತು ನಳಂದ ವಿಶ್ವವಿದ್ಯಾಲಯಗಳು ಮಾತ್ರ ಹೆಚ್ಚು ಜನಪ್ರಿಯವಾಗಿದ್ದವು. ಚಾಣುಕ್ಯ, ಚಂದ್ರಗುಪ್ತ ಮತ್ತು ಚರಕ ಇವರಿಂದಾಗಿ ತಕ್ಷಶಿಲಾ ವಿಶ್ವವಿದ್ಯಾಲಯ ಹೆಚ್ಚು ಪ್ರಸಿದ್ಧಿಯಾಗಿತ್ತು. ಆರ್ಥಿಕ ಮತ್ತು ರಾಜಕೀಯ ವಲಯದಲ್ಲಿ ಪ್ರಸಿದ್ಧವಾಗಿರುವ ಅರ್ಥಶಾಸ್ತ್ರ ಪುಸ್ತಕವನ್ನು ಚಾಣಕ್ಯ ಇಲ್ಲಿಯೇ ಬರೆದಿದ್ದಾರೆ ಎಂದು ಹೇಳಲಾಗಿದೆ.

ಭಾರತದ ಖ್ಯಾತ ಚಕ್ರವರ್ತಿಯಾಗಿದ್ದ ಚಂದ್ರಗುಪ್ತ ಮೌರ್ಯ ಇಲ್ಲಿಯೇ ವ್ಯಾಸಂಗ ಮಾಡಿದ್ದರು. ಅಲ್ಲದೆ ಚರಕ ಸಂಹಿತೆಯನ್ನು ಬರೆದಿದ್ದರು. ಸಾಮಾನ್ಯವಾಗಿ 16ನೇ ವಯಸ್ಸಿಗೆ ತಕ್ಷಶಿಲಾ ವಿಶ್ವವಿದ್ಯಾಲಯವನ್ನು ವಿದ್ಯಾರ್ಥಿಗಳು ಪ್ರವೇಶಿಸುತ್ತಿದ್ದರು. ವೇದಗಳ ಜೊತೆಗೆ 18 ರೀತಿಯ ಕಲೆಗಳನ್ನು ಇಲ್ಲಿ ಕಲಿಸಲಾಗುತ್ತಿತ್ತು. ಬಿಲ್ಲುಗಾರಿಕೆ, ಬೇಟೆಯಾಡುವುದು, ಆನೆಗಳನ್ನು ಪಳಗಿಸುವುದು, ಕಾನೂನು, ವೈದ್ಯಕೀಯ, ವಿಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತಿತ್ತು. ವೇದಗಳ ಅಧ್ಯಯನ ಅಷ್ಟೆ ಅಲ್ಲದೆ ಬೌದ್ಧಧರ್ಮದ ಬಗ್ಗೆಯೂ ತಿಳಿಸಿಕೊಡಲಾಗುತ್ತಿತ್ತು. ಆ ಧರ್ಮದ ಮಹಾಯಾನ ಪಂಥ ರೂಪ ತಳೆಯಲು ಇದು ವೇದಿಕೆಯಾಯಿತು ಎಂಬುದು ಗಮನಾರ್ಹ. ನಳಂದ ವಸತಿಯುತ ವಿಶ್ವವಿದ್ಯಾಲಯವಾಗಿದ್ದು, ಇಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳು ಹಾಗೂ ಎರಡು ಸಾವಿರ ಬೋಧಕರು ಇದ್ದರು. ಬೌದ್ಧಧರ್ಮದವರು ಮಾತ್ರವಲ್ಲದೆ ಬೇರೆ ಧರ್ಮದವರು ಸಹ ಇಲ್ಲಿ ಅಧ್ಯಯನ ಮಾಡುತ್ತಿದ್ದರು. ಮಗಧ ಸಾಮ್ರಾಜ್ಯದ ಅವಧಿಯಲ್ಲಿ ಈ ವಿಶ್ವವಿದ್ಯಾಲಯ ಹೆಚ್ಚಿನ ಪ್ರಗತಿಯನ್ನು ಕಂಡಿತು. ಸಮಗ್ರ ಜ್ಞಾನ ಕೇಂದ್ರವಾಗಿ ಬೆಳವಣಿಗೆ ಹೊಂದುವ ಮೂಲಕ ಸಾವಿರಾರು ವಿದ್ಯಾರ್ಥಿಗಳನ್ನು ತನ್ನತ್ತ ಸೆಳೆಯಿತು. ಶಿಕ್ಷಕರಲ್ಲಿನ ಆಳವಾದ ಜ್ಞಾನ ಮತ್ತು ವಿದ್ಯಾರ್ಥಿಗಳನ್ನು ಜ್ಞಾನಾರ್ಜನೆಗೊಳಿಸಲು ವಿಶ್ವವಿದ್ಯಾಲಯ ತೆಗೆದುಕೊಂಡಿದ್ದ ಕ್ರಮಗಳು ಹೊರ ದೇಶದವರನ್ನು ಆಕರ್ಷಿಸಿದವು.

ಚೀನಾ, ಕೊರಿಯಾ, ಜಪಾನ್, ಟಿಬೆಟ್, ಮಂಗೋಲಿಯಾ, ಟರ್ಕಿ, ಶ್ರೀಲಂಕಾ ಮತ್ತು ಆಗ್ನೇಯ ಏಷ್ಯಾದ ಅನೇಕ ರಾಷ್ಟ್ರಗಳ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯ ತನ್ನತ್ತ ಸೆಳೆಯಿತು. ವಿದ್ವಾಂಸರ ಒಳನಾಟ, ಅಧ್ಯಯನಕ್ಕೆ ಬೇಕಾದ ವಾತಾವರಣ, ವಿಶಿಷ್ಟವಾದ ಜೀವನ ಶೈಲಿಯೇ ಇದಕ್ಕೆ ಕಾರಣ ಎಂದು ಚೀನಾದ ವಿದ್ವಾಂಸ ಕ್ಸುವಾನ್ ಜಂಗ್ ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸಿದ್ದಾರೆ. ಮೇಲೆ ಪ್ರಸ್ತಾಪಿಸಿದ ಅಂಶಗಳಿಂದಾಗಿ ನಳಂದ ವಿಶ್ವವಿದ್ಯಾಲಯ ಹೆಸರುವಾಸಿಯಾಗಿತ್ತು. ಅಧಿಕ ಸಂಖ್ಯೆಯಲ್ಲಿ ಶೈಕ್ಷಣಿಕ ಪ್ರವಾಸಿಗರನ್ನು ಸೆಳೆಯಿತು. ಆಗ ಬದಲಾವಣೆ ಮತ್ತು ಸಂಪರ್ಕ ಎರಡೂ ಕಷ್ಟವಾಗಿತ್ತು. ಆದರೂ ಈ ಕೆಳಕಂಡ ಅಂಶಗಳಿಂದ ಆರ್ಕಷಣೀಯ ಕೇಂದ್ರವಾಗಿತ್ತು.

ಭಾರತ ಅನೇಕ ಧರ್ಮಗಳು ಮತ್ತು ಬಹುಸಂಸ್ಕೃತಿಯಿಂದ ಕೂಡಿದ ಸಮಾಜವಾಗಿದ್ದು ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲು ಬಯಸುವವರನ್ನು ಕೈಬೀಸಿ ಕರೆಯುತ್ತದೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ಹೊರತಾಗಿಯೂ, ಕೌಶಲಗಳನ್ನು ಕಲಿಯಲು ಹೊರಗಿನವರು ಆಸಕ್ತಿ ತೋರಿಸುತ್ತಿದ್ದಾರೆ. ಶಿಕ್ಷಕರಲ್ಲಿನ ಆಳವಾದ ಜ್ಞಾನ ಮತ್ತು ಸಾಮರ್ಥ್ಯದಿಂದಾಗಿ ದೇಶಿಯ ಮತ್ತು ವಿದೇಶಿ ವಿದ್ವಾಂಸರು ಆಕರ್ಷಿತರಾಗಿದ್ದಾರೆ.

ಕೇವಲ ಅಧ್ಯಯನ ಅಲ್ಲದೆ ವಿಶಿಷ್ಟವಾದ ಬೋಧನೆ – ಕಲಿಕಾ ವಿಧಾನ, ಇಲ್ಲಿನ ಪರಿಸರ ದೇಶ – ವಿದೇಶಗಳ ಶೈಕ್ಷಣಿಕ ಪ್ರವಾಸಿಗರನ್ನು ಆಕರ್ಷಿಸಿತ್ತು. ವಿವಿಧ ಸಾಮ್ರಾಜ್ಯಗಳ ಆಡಳಿತ ಅವಧಿಯಲ್ಲಿ ಕೀರ್ತಿ – ಪತಾಕೆಯನ್ನು ಹಾರಿಸಿದ್ದ ಈ ವಿಶ್ವವಿದ್ಯಾಲಯಗಳು ದೀರ್ಘ ಕಾಲ ಅಸ್ತಿತ್ವದಲ್ಲಿ ಇರಲಿಲ್ಲ ಎಂಬುದು ಬೇಸರದ ಸಂಗತಿ.



**ಪ್ರಸ್ತುತತೆ**

ಭಾರತದಲ್ಲಿ ಪ್ರವಾಸೋದ್ಯಮ ಕ್ಷೇತ್ರ ದೊಡ್ಡ ಉದ್ಯಮವಾಗಿ ಬೆಳವಣಿಗೆ ಹೊಂದಿದ್ದು, ಪ್ರವಾಸೋದ್ಯಮ ಇಲಾಖೆಯ ವಾರ್ಷಿಕ ವರದಿ ಪ್ರಕಾರ 2012–13ನೇ ಸಾಲಿನಲ್ಲಿ ರಾಷ್ಟ್ರದ ಒಟ್ಟು ಜಿಡಿಪಿಯಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಪಾಲು ಶೇ 6.88. ಅದೇ ರೀತಿ ಉದ್ಯೋಗ ನೀಡಿಕೆಯಲ್ಲಿ ಈ ಕ್ಷೇತ್ರದ ಪಾಲು ಶೇ 12.36. 1990–2011ರ ಅವಧಿಯಲ್ಲಿ ಜಿಡಿಪಿಗೆ ಪ್ರವಾಸೋದ್ಯಮ ವಲಯ ನೀಡಿರುವ ಕೊಡುಗೆ 229ರಷ್ಟು ಹೆಚ್ಚಾಗಿದೆ. ಅಲ್ಲದೆ ಈ ಅವಧಿಯಲ್ಲಿ ವಾರ್ಷಿಕ ಬೆಳವಣಿಗೆ ದರ ಶೇ 7.7 ಎಂದು ನಿರೀಕ್ಷಿಸಲಾಗಿತ್ತು.

ವರ್ಲ್ಡ್ ಟ್ರಾವಲ್ ಅಂಡ್ ಟೂರಿಸಂ ಕೌನ್ಸಿಲ್ ಪ್ರಕಾರ 2011–21ರ ಅವಧಿಯಲ್ಲಿ ವಾರ್ಷಿಕ ಬೆಳವಣಿಗೆ ದರ ಶೇ 8.8 ಎಂದು ಅಂದಾಜಿಸಲಾಗಿದೆ. ಪ್ರವಾಸೋದ್ಯಮ ಕ್ಷೇತ್ರ ವೇಗವಾಗಿ ಬೆಳೆಯುತ್ತಿರುವ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಭಾರತ 5ನೇ ಸ್ಥಾನದಲ್ಲಿದೆ. ಭಾರತದಲ್ಲಿ ಪ್ರವಾಸೋದ್ಯಮ ಕ್ಷೇತ್ರ ಇಷ್ಟೊಂದು ವೇಗವಾಗಿ ಬೆಳೆಯುತ್ತಿದ್ದರೂ, ಶೈಕ್ಷಣಿಕ ಪ್ರವಾಸೋದ್ಯಮದ ಪಾತ್ರವೇನು ಎಂಬ ಪ್ರಶ್ನೆ ಹಾಗೆಯೇ ಉಳಿದಿದೆ. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ (ಒಇಸಿಡಿ) ಕುರಿತ 2014ರ ವರದಿಯಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಮುಖವಾಗಿ ಉಲ್ಲೇಖಿಸಲಾಗಿದೆ.

* ವಿಶ್ವದಾದ್ಯಂತ ಇರುವ ವಿದೇಶಿ ವಿದ್ಯಾರ್ಥಿಗಳ ಪೈಕಿ ಶೇ 53ರಷ್ಟು ಮಂದಿ ಏಷ್ಯಾವನ್ನು ಪ್ರತಿನಿಧಿಸುತ್ತಿದ್ದಾರೆ. ಇವರಲ್ಲಿ ಚೀನಾ, ಭಾರತ ಮತ್ತು ಕೊರಿಯಾದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ.
* ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಯೂರೋಪ್ ಮುಂಚೂಣಿಯಲ್ಲಿದೆ.

ಅಲ್ಲಿರುವ ಶೇ 48ರಷ್ಟು ವಿದ್ಯಾರ್ಥಿಗಳು ವಿದೇಶದವರು. ಉತ್ತರ ಕೊರಿಯಾದಲ್ಲಿ ಶೇ 21ರಷ್ಟು ಮಂದಿ ವಿದೇಶಿ ವಿದ್ಯಾರ್ಥಿಗಳು ಇದ್ದಾರೆ. ಇವರಲ್ಲಿ ಶೇ 18ರಷ್ಟು ಮಂದಿ ಏಷ್ಯಾದವರು. * ಕಳೆದ ಮೂರು ದಶಕಗಳಲ್ಲಿ ವಿದೇಶಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. 1975ರಲ್ಲಿ 0.8 ದಶಲಕ್ಷ ಇದ್ದ ವಿದೇಶಿ ವಿದ್ಯಾರ್ಥಿಗಳ ನೋಂದಣಿಯು, 2012ರಲ್ಲಿ 4.5 ದಶಲಕ್ಷಕ್ಕೆ ಏರಿದೆ. ಏಷ್ಯಾದಲ್ಲಿ, ಅದರಲ್ಲೂ ಮುಖ್ಯವಾಗಿ ಭಾರತದಲ್ಲಿ ಶೈಕ್ಷಣಿಕ ಪ್ರವಾಸೋದ್ಯಮ ವೇಗವಾಗಿ ಬೆಳೆಯುತ್ತಿರುವುದು ಮೇಲಿನ ಅಂಶಗಳಿಂದ ಗೊತ್ತಾಗುತ್ತದೆ. ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಯೂರೋಪ್ ಮುಂಚೂಣಿಯಲ್ಲಿದ್ದು, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶದಿಂದ ಬೇರೆ ರಾಷ್ಟ್ರಗಳೊಂದಿಗೆ ಕೈಜೋಡಿಸಿದೆ.

ಯೂರೋಪ್ ಶೈಕ್ಷಣಿಕವಾಗಿ ಉನ್ನತ ತಾಣವಾಗಿದೆ. ಸಾರಿಗೆ ವೆಚ್ಚ ಕಡಿಮೆ ಮಾಡಲು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ನುರಿತ ಕಾರ್ಮಿಕ ಸಿಬ್ಬಂದಿ ಲಭ್ಯವಾಗುವಂತೆ ಮಾಡಲು ವಿದ್ಯಾರ್ಥಿಗಳ ಕೌಶಲಕ್ಕೆ ಒತ್ತು ನೀಡಿದ್ದು, ಇದನ್ನು ಉನ್ನತ ಶಿಕ್ಷಣದ ಭಾಗವಾಗಿ ಪರಿಗಣಿಸಲಾಗಿದೆ. ಜಾಗತಿಕ ಮಟ್ಟದಲ್ಲೂ ವಿದ್ಯಾರ್ಥಿಗಳ ವಲಸೆ ಹೆಚ್ಚಾಗುತ್ತಿರುವುದನ್ನು ನಾವು ಕಾಣಬಹುದು.

**ಭಾರತದ ಪಾಲು :** ವಿದೇಶಗಳಲ್ಲಿ ವ್ಯಾಸಂಗ ಮಾಡುತ್ತಿರುವ ಭಾರತದ ವಿದ್ಯಾರ್ಥಿಗಳ ಪ್ರಮಾಣ ಶೇ 5.8. ಇವರಲ್ಲಿ ಶೇ 45ರಷ್ಟು ಮಂದಿ ಅಮೆರಿಕ, ಶೇ 17ರಷ್ಟು ಮಂದಿ ಬ್ರಿಟನ್, ಶೇ 6ರಷ್ಟು ಮಂದಿ ಕೆನಡಾ ಹಾಗೂ ಶೇ 5ರಷ್ಟು ಮಂದಿ ಆಸ್ಟ್ರೇಲಿಯಾದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.



### ಭವಿಷ್ಯದ ಬಗ್ಗೆ ಭರವಸೆ

ಭಾರತದಲ್ಲಿ ಪ್ರಸ್ತುತ ಶೈಕ್ಷಣಿಕ ಪ್ರವಾಸೋದ್ಯಮದ ಮಸುಕಾಗಿ ಕಂಡರೂ, ಈ ಕ್ಷೇತ್ರದ ಬೆಳವಣಿಗೆಗೆ ಸಾಕಷ್ಟು ಅವಕಾಶಗಳಿವೆ. ಶೈಕ್ಷಣಿಕ ಪ್ರವಾಸೋದ್ಯಮದ ವಿಸ್ತರಣೆಗೆ ಇರುವ ಅವಕಾಶಗಳ ಬಗ್ಗೆ ಜಾಗತಿಕ ವರದಿಗಳಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ. ಇದನ್ನು ನೋಡಿದಾಗ ಭಾರತದ ಶೈಕ್ಷಣಿಕ ಪ್ರವಾಸೋದ್ಯಮದ ಬಗ್ಗೆ ಭರವಸೆಯ ಆಶಾಕಿರಣ ಮೂಡುತ್ತದೆ. ಪ್ರವಾಸೋದ್ಯಮ ಸಚಿವಾಲಯ ಹೊರ ತಂದಿರುವ 2015ರ ವಾರ್ಷಿಕ ವರದಿಯಲ್ಲೂ ಇತರ ನಾಗರೀಕತೆಗಳ ಮೇಲೆ ಭಾರತದ ಪ್ರಭಾವ, ಶ್ರೀಮಂತ ಮತ್ತು ಸಾಂಸ್ಕೃತಿಕ ವೈವಿಧ್ಯತೆ, ಸಂಪ್ರದಾಯ ಕಲೆ, ಭಾಷೆ ಇತ್ಯಾದಿಗಳನ್ನು ಬಳಸಿಕೊಂಡು ಪ್ರವಾಸೋದ್ಯಮ ಕ್ಷೇತ್ರವನ್ನು ವಿಸ್ತರಿಸಲು ಭಾರತಕ್ಕೆ ಒಳ್ಳೆಯ ಅವಕಾಶ ಇದೆ ಎಂದು ಅಭಿಪ್ರಾಯಪಡಲಾಗಿದೆ. ಭಾರತಕ್ಕೆ ಭೇಟಿ ನೀಡುವ ವಿದೇಶಿ ಪ್ರವಾಸಿಗರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಈ ಕ್ಷೇತ್ರದಲ್ಲಿ ಮತ್ತಷ್ಟು ಬೆಳವಣಿಗೆ ಸಾಧಿಸಲು ಎಲ್ಲ ಅವಕಾಶಗಳೂ ಇವೆ. ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾದರೆ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ.

### ಭಾರತದಲ್ಲಿ ಶೈಕ್ಷಣಿಕ ಪ್ರವಾಸೋದ್ಯಕ್ಕೆ ಇರುವ ಸಂಪನ್ಮೂಲಗಳ ಮೂಲ

ಭಾರತದಲ್ಲಿ ಶೈಕ್ಷಣಿಕ ಪ್ರವಾಸೋದ್ಯಮಕ್ಕೆ ಬೇಕಾದ ಸಹಕಾರ ನೀಡಲು ಪ್ರವಾಸೋದ್ಯಮ ವಲಯದಲ್ಲಿ ಸಾಕಷ್ಟು ಸಂಪನ್ಮೂಲಗಳಿವೆ. ಪ್ರಮುಖವಾಗಿ ಗುರುತಿಸಬಹುದಾದ ಕ್ಷೇತ್ರಗಳೆಂದರೆ ಸಾಂಸ್ಕೃತಿಕ ಅಥವಾ ಐತಿಹಾಸಿಕ ಪ್ರವಾಸೋದ್ಯಮ, ಪರಿಸರ ಪ್ರವಾಸೋದ್ಯಮ ಅಥವಾ ಪ್ರಕೃತಿ ಆಧಾರಿತ ಪ್ರವಾಸೋದ್ಯಮ, ಗ್ರಾಮೀಣ ಪ್ರವಾಸೋದ್ಯಮ, ವೈದ್ಯಕೀಯ ಪ್ರವಾಸೋದ್ಯಮ ಇತ್ಯಾದಿಗಳು.

ವಿನಿಮಯ ಕಾರ್ಯಕ್ರಮದ ಭಾಗವಾಗಿ ವಿದೇಶಿ ವಿದ್ಯಾರ್ಥಿಗಳು ಮತ್ತು ಬೋಧನಾ ಸಿಬ್ಬಂದಿ ಭಾರತದ ವಿಶ್ವವಿದ್ಯಾಲಯಗಳಲ್ಲಿ ಕೆಲ ಕಾಲ ಇರುತ್ತಾರೆ. ವಿನಿಮಯ ಕಾರ್ಯಕ್ರಮದ ಮೂಲಕ ಶೈಕ್ಷಣಿಕ ಪ್ರವಾಸೋದ್ಯಮಕ್ಕೆ ಇನ್ನಷ್ಟು



ಉತ್ತೇಜನ ನೀಡಬಹುದು. ಸಾಂಸ್ಕೃತಿಕ, ಐತಿಹಾಸಿಕ ವಿಷಯಗಳನ್ನು ಒಳಗೊಂಡಂತೆ ಕಲೆ, ವಾಸ್ತುಶಿಲ್ಪ, ಭಾಷೆ, ಪುರಾತತ್ವ ಇಲಾಖೆ ಗುರುತಿಸಿರುವ ಸ್ಥಳಗಳು, ಸಂಗೀತ, ನೃತ್ಯ ಇತ್ಯಾದಿಗಳನ್ನು ವಿದೇಶಿ ವಿದ್ಯಾರ್ಥಿಗಳಿಗೆ ಪರಿಚಯಿಸುವ ಮೂಲಕ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗುವಂತೆ ಮಾಡಬಹುದು.

### ಭಾರತದಲ್ಲಿ ಪ್ರವಾಸೋದ್ಯಮ ಮಾರುಕಟ್ಟೆ

ಸದ್ಯದ ಮಟ್ಟಿಗೆ ಹೇಳುವುದಾದರೆ ಭಾರತದಲ್ಲಿ ಶೈಕ್ಷಣಿಕ ಪ್ರವಾಸೋದ್ಯಮಕ್ಕೆ ದೊಡ್ಡ ಪ್ರಮಾಣದ ಮಾರುಕಟ್ಟೆ ಇಲ್ಲ. ಆದರೆ, ಪ್ರವಾಸೋದ್ಯಮ ಇಲಾಖೆ ಹೊರ ತಂದಿರುವ ವಾರ್ಷಿಕ ವರದಿಯಲ್ಲಿ ಪ್ರಸ್ತಾಪಿಸಿರುವ ಈ ಮುಂದಿನ ಅಂಶಗಳನ್ನು ಗಮನಿಸಿದರೆ ಮಾರುಕಟ್ಟೆ ವಿಸ್ತರಣೆಗೆ ಹೇರಳವಾದ ಅವಕಾಶಗಳಿವೆ.

* ವಿದೇಶಿ ಪ್ರವಾಸಿಗರ ಭೇಟಿ ಪ್ರಮಾಣ ಜಾಗತಿಕ ಮಟ್ಟದಲ್ಲಿ ಶೇ 4.7ರಷ್ಟಿದ್ದರೆ, ಕಳೆದ ವರ್ಷ ಭಾರತಕ್ಕೆ ಭೇಟಿ ನೀಡಿರುವ ವಿದೇಶಿ ಪ್ರವಾಸಿಗರ ಪ್ರಮಾಣ ಶೇ 10.6ರಷ್ಟಿದೆ. * ವಿದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗುತ್ತದೆ. ಇಂಗ್ಲಿಷ್‌ನಲ್ಲಿ ವ್ಯಾಸಂಗ ಮಾಡುವವರೇ ಅಧಿಕವಾಗಿರುತ್ತಾರೆ. ಸಾಮಾನ್ಯವಾಗಿ ಓದುವುದು, ಬರೆಯುವುದು ಇಂಗ್ಲಿಷ್ ಆಗಿರುವುದರಿಂದ ಮೊದಲ ಆದ್ಯತೆ ಇದಕ್ಕೆ ನೀಡುತ್ತಾರೆ. ಒಂದು ವೇಳೆ ತನ್ನ ಸ್ವಂತ ಭಾಷೆಯಲ್ಲಿಯೇ ಕಲಿಯಲು ಆಸಕ್ತಿ ತೋರಿದರೆ ಅದಕ್ಕೂ ಅವಕಾಶ ಕಲ್ಪಿಸಲಾಗುತ್ತದೆ. * ಗುಣಮಟ್ಟದ ಶೈಕ್ಷಣಿಕ ಸಂಸ್ಥೆಗಳು ಭಾರತದಲ್ಲಿ ಇರುವ ಕಾರಣ ಇಲ್ಲಿಗೆ ಬರುವ ವಿದೇಶಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮುದ್ರಣ ಮತ್ತು ಆನ್‌ಲೈನ್‌ನಲ್ಲಿ ಉನ್ನತ ಶಿಕ್ಷಣ ಲಭ್ಯವಿದ್ದು,




ಭಾರತದಲ್ಲಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಲು ವಿದೇಶಿಗರು ಒಲವು ತೋರುತ್ತಿದ್ದಾರೆ. * ಶೈಕ್ಷಣಿಕ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಬೋಧನಾ ವೆಚ್ಚ ಪ್ರಮುಖ ಪಾತ್ರ ವಹಿಸುತ್ತದೆ. ಆದರೂ ಬೋಧನಾ ವೆಚ್ಚ ನೋಡಿ ವಿದೇಶಿ ವಿದ್ಯಾರ್ಥಿಗಳು ಅಧೀರರಾಗುವುದಿಲ್ಲ. ಅವರು ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಾರೆ. ವ್ಯಾಸಂಗಕ್ಕೆ ಮಾಡಿದ ವೆಚ್ಚ ಎಷ್ಟು ವರ್ಷಗಳಲ್ಲಿ ವಾಪಸ್ ಬರುತ್ತದೆ, ಎಂಬುದರ ಜೊತೆಗೆ ವ್ಯಾಸಂಗದ ನಂತರ ಇರುವ ಅವಕಾಶಗಳತ್ತ ಅವರು ಗಮನಹರಿಸುತ್ತಾರೆ. * ಇತ್ತೀಚಿನ ವರ್ಷಗಳಲ್ಲಿ ಕೆಲವು ರಾಷ್ಟ್ರಗಳು ವಲಸೆ ನೀತಿಯನ್ನು ಸಡಿಲಗೊಳಿಸಿವೆ. ವಿದೇಶಿ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ತಾತ್ಕಾಲಿಕವಾಗಿ ಅಥವಾ ಕಾಯಂ ವಲಸೆಗೆ ವೀಸಾ ನೀತಿಯನ್ನು ಬದಲಿಸಿವೆ. ಕೆಲವು ರಾಷ್ಟ್ರಗಳು ವೀಸಾ ನೀಡುವಾಗಲೇ ಬೋಧನಾ ವೆಚ್ಚವನ್ನು ಕಟ್ಟಿಸಿಕೊಳ್ಳುತ್ತವೆ. ಯಾವ ರಾಷ್ಟ್ರದಲ್ಲಿ ಅಧ್ಯಯನ ಮಾಡಲಾಗುತ್ತದೆ ಎಂಬುದರ ಮೇಲೆ ಇದು ಅವಲಂಬನೆಯಾಗಿದೆ. * ಶೈಕ್ಷಣಿಕವಾಗಿ ಸಂಸ್ಥೆ ಹೊಂದಿರುವ ಗೌರವ, ಪದವಿಗೆ ಇರುವ ಮಾನ್ಯತೆ, ಅವಧಿ, ತಗಲುವ ವೆಚ್ಚ, ಸ್ವದೇಶದಲ್ಲಿ ಆ ಪದವಿಗೆ ಇರುವ ಮಹತ್ವ, ವಿಶ್ವವಿದ್ಯಾಲಯಗಳ ಪ್ರವೇಶ ನೀತಿ, ಭವಿಷ್ಯದಲ್ಲಿ ಇರುವ ಉದ್ಯೋಗಾವಕಾಶ, ರಾಷ್ಟ್ರಗಳ ನಡುವೆ ಇರುವ ಐತಿಹಾಸಿಕ ಮತ್ತು ವಾಣಿಜ್ಯ ಸಂಬಂಧ, ಸಾಂಸ್ಕೃತಿಕ ಸಂಬಂಧಗಳು, ವರ್ಗಾವಣೆ ನೀತಿಗಳು ಇತ್ಯಾದಿಗಳನ್ನು ಆಧರಿಸಿ ವಿದೇಶಿ ವಿದ್ಯಾರ್ಥಿಗಳು ತೀರ್ಮಾನ ತೆಗೆದುಕೊಳ್ಳುತ್ತಾರೆ.

ಈ ಎಲ್ಲ ಅಂಶಗಳನ್ನು ಅವಲೋಕಿಸಿದಾಗ ಮುಖ್ಯವಾಗಿ ನಮಗೆ ಕಂಡು ಬರುವುದೇನೆಂದರೆ ಇಂಗ್ಲಿಷ್ ಕಲಿಕಾ ಮಾಧ್ಯಮವಾಗಿದ್ದು, ಎಲ್ಲ ಪ್ರಮುಖ ನಗರಗಳಲ್ಲಿ ಇಂಗ್ಲಿಷ್‌ನಲ್ಲಿ ಬರೆಯುವುದು, ಓದುವುದು ಸಾಮಾನ್ಯವಾಗಿದೆ.

ಇಲ್ಲಿ ನೀಡುವ ಪದವಿಗಳು ಅಂತಾರಾಷ್ಟ್ರೀಯ ಮಟ್ಟದ ಗುಣಮಟ್ಟವನ್ನು ಹೊಂದಿಲ್ಲ. ಉಭಯ ರಾಷ್ಟ್ರಗಳ ನಡುವೆ ವರ್ಗಾವಣೆಗೆ ಸಂಬಂಧಿಸಿದಂತೆ ಏಕರೂಪ ವ್ಯವಸ್ಥೆ ಇರುವುದಿಲ್ಲ. ಈ ಎಲ್ಲ ನ್ಯೂನತೆಗಳನ್ನು ಸರಿಪಡಿಸಿ ವಿದೇಶಿ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರೆ ಭಾರತ ಪ್ರಮುಖ ಶೈಕ್ಷಣಿಕ ಪ್ರವಾಸೋದ್ಯಮ ತಾಣವಾಗಿ ಹೊರಹೊಮ್ಮುವುದರಲ್ಲಿ ಯಾವುದೇ ಅನುಮಾನ ಇಲ್ಲ. ❑

(6ನೇ ಪುಟದಿಂದ)

## ಕಾಯಕಲ್ಪಕ್ಕಾಗಿ ಕಾದಿರುವ ಪ್ರವಾಸೋದ್ಯಮ

ಕ್ಷೇತ್ರ. ಪ್ರಸ್ತುತ ಸ್ಥಿತಿಯಲ್ಲಿ ಹೇಳುವುದಾದರೆ, ಡಿಸ್ನಿಲ್ಯಾಂಡ್‌ಗೆ ಹೊಂದುವಂಥ ಅಥವಾ ಅಂಥದೊಂದು ಥೀಮ್ ಪಾರ್ಕ್‌ನ್ನು ಸೃಷ್ಟಿಸಲು ಎಷ್ಟು ವರ್ಷಗಳು ಬೇಕೊ? ಅಮೆರಿಕ ಯೂನಿವರ್ಸಲ್ ಸ್ಟುಡಿಯೊ ಹಾಲಿವುಡ್‌ನ್ನೇ ಇಟ್ಟುಕೊಂಡು ಎಷ್ಟು ಸಾಧ್ಯವೋ ಅಷ್ಟು ಲಾಭ ಮಾಡಿಕೊಳ್ಳುತ್ತಿರುವಾಗ, ಅಷ್ಟೇ ಇತಿಹಾಸ ಮತ್ತು ವಿಶೇಷತೆಗಳಿರುವ ಮುಂಬಯಿಯ ಬಾಲಿವುಡ್ ಸ್ಟುಡಿಯೊಗಳು, ಚೆನ್ನೈ ಮತ್ತು ಹೈದರಾಬಾದ್‌ನ ಸ್ಟುಡಿಯೊಗಳು ಇಂಥ ಸಾಧನೆಯನ್ನು ಮಾಡಲು ಇನ್ನಷ್ಟೇ ಪ್ರಯತ್ನಿಸಬೇಕಿದೆ.

ಈ ಕ್ಷೇತ್ರದಲ್ಲಿ ಯಾವುದೇ ಹೊಸರೀತಿಯ ಉಪಕ್ರಮಗಳು ಸಿನಿಮಾಸಕ್ತ ಮಂದಿಯನ್ನು ತನ್ನತ್ತ ಸೆಳೆದುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಹೈದರಾಬಾದ್‌ನ ರಾಮೋಜಿ ಫಿಲ್ಮ್ ಸಿಟಿಯ ಪಾತ್ರವನ್ನು ಅತ್ಯಂತ ಗೌರವದಿಂದ ಕಾಣಬೇಕು ಮತ್ತು ಮೆಚ್ಚಬೇಕಾದುದು. ಮುಂಬಯಿ ಮತ್ತು ಚೆನ್ನೈ ಸಹಿತ ತನ್ನ ಫಿಲ್ಮ್ ಸ್ಟುಡಿಯೊಗಳ ಇತಿಹಾಸ ಮತ್ತು ಪರಂಪರೆಯನ್ನು ಈ ನಿಟ್ಟಿನಲ್ಲಿ ದುಡಿಸಿಕೊಳ್ಳುವತ್ತ ಗಮನಹರಿಸಬೇಕಿದೆ.

### ಕ್ರಿಯಾಶೀಲವಾಗಬೇಕಾದ ಹೊತ್ತು

ಪ್ರವಾಸೋದ್ಯಮ ಹಿತದೃಷ್ಟಿಯಲ್ಲಿ ಈ ಎಲ್ಲ ವಿನೂತನ ಉಪಕ್ರಮಗಳು ಸಾವಿರಾರು ಅವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿವೆ. ಭಾರತೀಯ ಕಲ್ಪನೆಯ ಮತ್ತು ಸ್ಫೂರ್ತಿಯ 'ಅತಿಥಿ ದೇವೋಭವ' ದ ನೆಲೆಯಲ್ಲೇ ಪ್ರವಾಸಿಗರನ್ನು ಬರ ಸೆಳೆಯುವ ಸಂಸ್ಕೃತಿಯ ಮತ್ತು ಉದ್ಯಮಶೀಲ ಹುಮ್ಮಸ್ಸು ಇಂತಹ ಹಲವು ಸಂಪನ್ಮೂಲಗಳನ್ನು ದುಡಿಸಿಕೊಳ್ಳುವ ಸಾಮರ್ಥ್ಯ ಹೊಂದಿದೆ ಎಂದರೆ ಅಚ್ಚರಿಯಿಲ್ಲ.

ಉತ್ಪನ್ನ ವಿನ್ಯಾಸ, ಸಂಪರ್ಕ ಸಾಧ್ಯತೆಯ ಹೆಚ್ಚಳ, ವಸತಿ ಮತ್ತು ಇತರೆ ಪ್ರವಾಸಿಸ್ನೇಹಿ ಸೌಲಭ್ಯಗಳನ್ನು ಅಭಿವೃದ್ಧಿಗೊಳಿಸಬೇಕಿದೆ ಹಾಗೂ ಸರಿದೂಗಿಸಬೇಕಿದೆ. ಪ್ರತಿ ತಾಣವೂ ತನ್ನದೇ ಆದ ಸೌಂದರ್ಯ ಮತ್ತು ವಿಶೇಷತೆಯನ್ನು



ಹೊಂದಿದ್ದು, ಅದನ್ನು ಪ್ರಚಾರ ಮಾಡಬೇಕು. ಆಯಾ ತಾಣಗಳ ಮೂಲಬಂಡವಾಳವನ್ನು ಗುರುತಿಸಿ ಮಾರುಕಟ್ಟೆ ಗಿಟ್ಟಿಸುವುದು ಒಂದು ಕಲೆ ಮತ್ತು ವೃತ್ತಿಪರ ಕೌಶಲ್ಯವನ್ನು ಬಯಸುವಂಥದ್ದು.

ಆದ್ದರಿಂದ, ಅಸಾಂಪ್ರದಾಯಿಕ ಪ್ರವಾಸೋದ್ಯಮದ ಮೇಲೆ ಹೆಚ್ಚು ಗಮನಹರಿಸುವ ಮತ್ತು ಈ ಸಂಬಂಧಿ ಅಭಿವೃದ್ಧಿಗೆ ಪೂರಕವಾದ ಅವಕಾಶವನ್ನು ಸೃಷ್ಟಿಸುವಂತೆ ನೀತಿ ನಿರೂಪಣೆಯನ್ನು ರಾಷ್ಟ್ರೀಯ ಮತ್ತು ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಹೊಂದುವುದು ಅತ್ಯಂತ ತುರ್ತಾಗಿ ಆಗಬೇಕಾದದ್ದು ಹಾಗೂ ಸಕಾಲಿಕವಾದುದು. ❑

ವೀಸಾ

# ಪ್ರವಾಸಿಗರಿಗಿನ್ನು ಪ್ರಯಾಸವಿಲ್ಲ

* ನಾಣು ಭಾಸಿನ್
** ನವನೀತ ಕೌರ್
ಕನ್ನಡಕ್ಕೆ : ಹರ್ಷಕುಮಾರ್ ಕೆ.ಎಸ್




ವಿದೇಶಿ ಪ್ರವಾಸಿಗರು ದೇಶಕ್ಕೆ ಬರಲು ಇ-ಪ್ರವಾಸಿ ವೀಸಾ ಒಂದೇ ಮುಖ್ಯವಾದ ಮೂಲವಾಗಲು ಸಾಧ್ಯವಿಲ್ಲ. ಆದರೆ ಇದು ವಿದೇಶಿ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುವುದರಲ್ಲಿ ಒಂದು ಕೀಲಕ ಯೋಜನೆಯಾಗಿದೆ. ಪ್ರವಾಸಿಗರಿಗೆ ಭಾರತ ಪ್ರವಾಸವನ್ನು ಆಕರ್ಷಕವಾಗಿಸುವಲ್ಲಿ ಇ-ಪ್ರವಾಸಿ ವೀಸಾ ತನ್ನ ಕೊಡುಗೆ ನೀಡುವುದರಲ್ಲಿ ಸಂಶಯವಿಲ್ಲ.

ಪ್ರವಾಸೋದ್ಯಮ ಎಂದರೆ ಮನರಂಜನೆಗಾಗಿಯೊ, ಬಿಡುವಿನಲ್ಲಿಯೊ ಧಾರ್ಮಿಕ-ಕೌಟುಂಬಿಕ ಅಥವಾ ಉದ್ಯೋಗದ ಉದ್ದೇಶಗಳಿಗಾಗಿಯೊ ಅಲ್ಪಕಾಲಾವಧಿಯಲ್ಲಿ ಹಮ್ಮಿಕೊಳ್ಳುವ ಪ್ರಯಾಣ. ಸಾಮಾನ್ಯವಾಗಿ ಪ್ರವಾಸೋದ್ಯಮವು ಅಂತಾರಾಷ್ಟ್ರೀಯ ಪ್ರಯಾಣದೊಂದಿಗೆ ಸಂಬಂಧ ಹೊಂದಿದ್ದರೂ ದೇಶದೊಳಗೆಯೇ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಿಸುವುದಕ್ಕೂ ಅನ್ವಯವಾಗುತ್ತದೆ. ವಿಶ್ವ ಪ್ರವಾಸೋದ್ಯಮ ಸಂಸ್ಥೆಯು ಟೂರಿಸ್ಟ್ ಅಥವಾ ಪ್ರವಾಸಿ ಎನ್ನುವ ಪದಕ್ಕೆ, "ತಮ್ಮ ಮಾಮೂಲಿ ಪರಿಸರದಿಂದ ಹೊರಹೋಗಿ ಒಂದು ವರ್ಷಕ್ಕಿಂತ ಹೆಚ್ಚಾಗದಂತೆ ತಮ್ಮ ಬಿಡುವನ್ನು ಕಳೆಯುವ, ಉದ್ಯೋಗ ನಡೆಸುವ ಇಲ್ಲವೇ ಇನ್ನಾವುದೇ ಕೆಲಸ ಮಾಡುವ ಜನ" ಎಂಬ ವ್ಯಾಖ್ಯಾನ ನೀಡಿದೆ.

ಪ್ರವಾಸೋದ್ಯಮವು ಒಂದು ಜಾಗತಿಕ ಮಟ್ಟದ ವಿರಾಮಕಾಲದ ಚಟುವಟಿಕೆಯಾಗಿದೆ. ಪ್ರವಾಸೋದ್ಯಮವು ದೇಶದೊಳಗಿನದೂ ಆಗಬಹುದು ವಿದೇಶಿಯೂ ಆಗಬಹುದು. ಹಾಗೆಯೇ ವಿದೇಶದ ಪ್ರವಾಸೋದ್ಯಮವನ್ನು ಒಳಬರುವ ಮತ್ತು ಹೊರಹೋಗುವ ಪ್ರವಾಸೋದ್ಯಮ ಎಂದು ವಿಭಾಗಿಸಬಹುದು. ಇಂದು ಒಳಬರುವ ಪ್ರವಾಸೋದ್ಯಮವು ಹಲವು ದೇಶಗಳಿಗೆ ಆದಾಯದ ಪ್ರಮುಖ ಮೂಲವಾಗಿದೆ. ಅದರಲ್ಲೂ ಒಂದು ದೇಶ ಒಟ್ಟಾರೆಯಾಗಿ ಗಳಿಸುವ ವಿದೇಶಿ ವಿನಿಮಯದ ದೊಡ್ಡ ಮೂಲವಾಗಿದೆ. ಅದು ಸ್ಥಳೀಯ ಆರ್ಥಿಕತೆಯ ಮೇಲೆ ಗಮನಾರ್ಹ ಪರಿಣಾಮ ಬೀರುವುದಲ್ಲದೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಯಾವಾಗಲೂ ಭೇಟಿ ನೀಡುವ ಸ್ಥಳದಲ್ಲಿ ಸ್ಥಳೀಯ ಉದ್ಯೋಗದ ಮೇಲೆಯೂ ಉತ್ತಮ ಪರಿಣಾಮ ಬೀರುತ್ತದೆ.

ಭಾರತವು ಶ್ರೀಮಂತ ಪರಂಪರೆ ಹೊಂದಿದ್ದು ಯಾವಾಗಲೂ ಪ್ರವಾಸಿಗರನ್ನು ರಂಜಿಸುತ್ತದೆ. ಮರಳುಗಾಡು, ಸಮುದ್ರ, ನದಿ, ಕಾಡು, ಪರ್ವತ, ಹೂಹಣ್ಣು, ವನ್ಯಜೀವಿಗಳನ್ನೊಳಗೊಂಡ ಎಲ್ಲಾ ಬಗೆಯ ಪ್ರಕೃತಿಸೊಬಗನ್ನು ಒಂದೇ ಭೌಗೋಳಿಕ ಗಡಿಯೊಳಗೆ ಹೊಂದಿರುವ ವೈವಿಧ್ಯತೆಯ ವಿಶಿಷ್ಟತೆಯ ಆಗರ ಭಾರತ. ಭಾರತಕ್ಕೆ ಭೇಟಿ ನೀಡುವ ಯಾರಿಗೇ ಆಗಲಿ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ಸಂಸ್ಕೃತಿ, ಉಡುಗೆ ತೊಡುಗೆ, ಬಗೆಬಗೆಯ ಆಹಾರಕ್ರಮಗಳು, ಸಸ್ಯ ಪ್ರಾಣಿ ಪ್ರಬೇಧಗಳ ದರುಶನವಾಗುತ್ತದೆ. ಹೀಗಾಗಿ ಸಂಸ್ಕೃತಿ, ಸಂಪ್ರದಾಯ ಮತ್ತು ಶ್ರೀಮಂತ ಪರಂಪರೆಯ ಈ ಸಂಯೋಜನೆಯನ್ನು ಅನುಭವಿಸಲು ಬಯಸುವ ಪ್ರವಾಸಿಗರಿಗೆ ಭಾರತ ಹೇಳಿ ಮಾಡಿಸಿದ ತಾಣವಾಗಿದೆ. ಇಷ್ಟಲ್ಲದೆ ವಿದೇಶಿ ಪ್ರವಾಸಿಗರು ಪ್ರಪಂಚದಾದ್ಯಂತ ಈ ದೇಶದ ಹಿರಿಮೆಯನ್ನು ಸಾರುವ "ಭಾರತೀಯ ಸಂಸ್ಕೃತಿಯ ರಾಯಭಾರಿಗಳಾಗಿ"ರುತ್ತಾರೆ.

ಈ ಅನುಕೂಲತೆಗಳನ್ನು ಬಳಸಿಕೊಂಡು ಪ್ರವಾಸೋದ್ಯಮವನ್ನು ಉತ್ತೇಜಿಸಲು ಭಾರತ ಸರ್ಕಾರವು ಹಲವಾರು ಪ್ರಯತ್ನಗಳನ್ನು ನಡೆಸಿದೆ. ಅಂತಹ ಒಂದು ದೊಡ್ಡ ಪ್ರಯತ್ನವೆಂದರೆ

* ನಿರ್ದೇಶಕರು, ಪಿಐಬಿ ** ಉಪನಿರ್ದೇಶಕರು, ಪಿಐಬಿ. Email : pibcultour@gmail.com

ಇ–ಪ್ರವಾಸಿ ವೀಸಾ. ಭಾರತಕ್ಕೆ ಪ್ರವಾಸ ಹಮ್ಮಿಕೊಳ್ಳುವ ವಿದೇಶಿಯರಿಗೆ ಪ್ರವಾಸವು ಸುಲಭವಾಗುವಂತೆ ಮಾಡಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

### ಇ–ಪ್ರವಾಸಿ ವೀಸಾ : ಹಿನ್ನೆಲೆ

ದೇಶದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡಲು ವಿದೇಶಿ ಪ್ರವಾಸಿಗರಿಗೆ ವೀಸಾ ನೀಡುವ ವ್ಯವಸ್ಥೆ ಉದಾರೀಕರಣ ಜಾರಿಗೊಳಿಸಲು ಬಂದಂತಹ ಒತ್ತಾಸೆಯಿಂದಾಗಿ ಆರಂಭವಾಯಿತು. ಪರಿಣಾಮವಾಗಿ ಜಾರಿಗೊಂಡದ್ದು 'ತಲುಪಿ ಪಡೆಯುವ ವೀಸಾ' ಎಂದರೆ ದೇಶಪ್ರವೇಶ ಮಾಡಲು ಬೇಕಾಗುವ ವೀಸಾ. ಆದರೆ ಈ ವೀಸಾಕ್ಕಾಗಿ ದೇಶಕ್ಕೆ ಭೇಟಿ ನೀಡುವಾಗಲಷ್ಟೇ ಅರ್ಜಿಹಾಕುವುದು ಮತ್ತು ಪಡೆಯುವುದು ಸಾಧ್ಯವಿತ್ತು.

ಭಾರತ ಸರ್ಕಾರವು 'ಆಗಮಿಸಿ ಪಡೆಯುವ ವೀಸಾ' (ವೀಸಾ ಆನ್ ಅರೈವಲ್–ವಿಓಎ) ಯೋಜನೆಯನ್ನು 2010ರ ಜನವರಿಯಲ್ಲಿ ಐದು ದೇಶಗಳ ಪ್ರವಾಸಿಗರಿಗಾಗಿ ಆರಂಭಿಸಿತ್ತು. ಆ ಐದು ದೇಶಗಳೆಂದರೆ ಫಿನ್‌ಲ್ಯಾಂಡ್, ಜಪಾನ್, ಲಕ್ಸಂಬರ್ಗ್, ನ್ಯೂಜಿಲ್ಯಾಂಡ್ ಮತ್ತು ಸಿಂಗಪುರ. ಈ ಸಮಯದಲ್ಲಿ ಮೇಲೆ ತಿಳಿಸಿದ ವೀಸಾವನ್ನು ಹಸ್ತಚಾಲಿತವಾಗಿ ವಿತರಿಸಲಾಗುತ್ತಿತ್ತು. ನಂತರ 2011ರ ಜನವರಿಯಲ್ಲಿ ಕಾಂಬೋಡಿಯಾ, ಇಂಡೊನೇಷಿಯಾ, ವಿಯೆಟ್ನಾಂ, ಫಿಲಿಪ್ಪೀನ್ಸ್, ಲಾವೋಸ್ ಮತ್ತು ಮ್ಯಾನ್ಮಾರ್ ಈ ಆರು ದೇಶಗಳಿಗೆ ಹಾಗೂ 2014ರ ಏಪ್ರಿಲ್‌ನಲ್ಲಿ ದಕ್ಷಿಣ ಕೊರಿಯದ ಪ್ರವಾಸಿಗರಿಗೂ ವಿಸ್ತರಿಸಲಾಯಿತು. ಈ ಹಂತದವರೆಗೆ ವಿಓಎ ಯೋಜನೆಯು ಬಹಳ ಸಣ್ಣ ಮಟ್ಟಕ್ಕೆ ಕಾರ್ಯಗತವಾಗಿತ್ತು. ಆದರೆ ಈ ಯೋಜನೆಯನ್ನು 2014ರ ನವೆಂಬರ್ 27ರಿಂದ ಅನ್ವಯವಾಗುವಂತೆ 43 ದೇಶಗಳಿಗೆ ವಿಸ್ತರಿಸಿಯಾದ ಮೇಲೆ ಹಾಗೂ 2015ರ ಜನವರಿಯಲ್ಲಿ ಗಯಾನ ದೇಶ ಸೇರಿ ಒಟ್ಟು 45 ದೇಶಗಳಿಗೆ ವಿಸ್ತರಿಸಿದಾಗ ಇಡೀ ಯೋಜನೆಗೆ ಹೊಸ ಹುರುಪು ಬದಿತು.

ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು, ಹೊಸಸರ್ಕಾರ ತೆಗೆದುಕೊಂಡ ಕ್ರಮವೆಂದರೆ ಎಲೆಕ್ಟ್ರಾನಿಕ್ ಅಥೊರೈಸೇಶನ್‌ನಿಂದ ಪಡೆಯಬಹುದಾದ ವೀಸಾ (ವಿಓಎ). ಈಗ ಇದಕ್ಕೆ ಇ–ಟೂರಿಸ್ಟ್ ವೀಸಾ ಎಂದು ಮರುನಾಮಕರಣ ಮಾಡಲಾಗಿದೆ. ನಮ್ಮ ದೇಶಕ್ಕೆ ಪ್ರವಾಸಿಗರಾಗಿ ಬರುವವರಿಗೆ ಸರ್ಕಾರಗಳು ಉತ್ತಮ ಸೌಲಭ್ಯಗಳನ್ನು ಕಲ್ಪಿಸಿಕೊಡದಿದ್ದಲ್ಲಿ ಜಾಗತಿಕ ಪ್ರವಾಸೋದ್ಯಮದ ಲಾಭವನ್ನು ಪಡೆಯಲು ನಮಗೆ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ 2014ರ ನವೆಂಬರ್ 27ರಂದು ಎಲೆಕ್ಟ್ರಾನಿಕ್ ಟ್ರಾವೆಲ್ ಅಥೊರೈಜೇಶನ್ (ಇಟಿಎ) ಯೋಜನೆಯನ್ನು ಆರಂಭಿಸಲಾಗಿತ್ತು. ಈ ಯೋಜನೆಯನ್ನೇ ಈಗ ಇ–ಟೂರಿಸ್ಟ್ ವೀಸಾ ಎಂದು ಕರೆಯಲಾಗುತ್ತಿದ್ದು 'ಆಗಮಿಸಿ ಪಡೆಯುವ ವೀಸಾ'ವನ್ನು ಕ್ರಮೇಣವಾಗಿ 150 ದೇಶಗಳಿಗೆ ವಿಸ್ತರಿಸುವ ಉದ್ದೇಶವಿದೆ. 2015–16ರೊಳಗೆ 106 ದೇಶಗಳ ಪ್ರವಾಸಿಗರು ಈ ಯೋಜನೆಯ ಲಾಭ ಪಡೆಯುವಂತೆ ಮಾಡುವ ಪ್ರಸ್ತಾಪ ಸರ್ಕಾರದಲ್ಲಿದೆ.

ಹೊಸ ಯೋಜನೆಯಾದ ಇ–ಟೂರಿಸ್ಟ್ ವೀಸಾವು ಸಂಭಾವ್ಯ ಅಲ್ಪಾವಧಿ ಪ್ರವಾಸಿಗರು ಆತನ/ಆಕೆಯ ದೇಶದಿಂದ ಭಾರತದ ವೀಸಾಕ್ಕಾಗಿ ನೇರವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಕಾಶವನ್ನು ಒದಗಿಸುವುದರಿಂದ ಅವರಿಗೆ ಬಹಳ ಸಹಕಾರಿಯಾಗಿದೆ. ಆನ್‌ಲೈನ್ ಮೂಲಕವೇ ಒಮ್ಮೆ ಸಮ್ಮತಿ ಪಡೆದ ನಂತರದಲ್ಲಿ ಅವರು ನಿಶ್ಚಿತ ದಿನದಂದು ಭಾರತಕ್ಕೆ ತಲುಪಿ ಇಲ್ಲ ಭಾರತೀಯ ವಲಸೆ ಪ್ರಾಧಿಕಾರಗಳೆದುರು ಅಧಿಕೃತ ದಾಖಲೆಗಳನ್ನು ಹಾಜರಿಪಡಿಸಬೇಕು. ನಂತರವೇ ಅಧಿಕಾರಿಗಳು ಆ ಪ್ರವಾಸಿಗರು ದೇಶದೊಳಕ್ಕೆ ಪ್ರವೇಶಿಸಲು ಒಪ್ಪಿಗೆ ನೀಡುತ್ತಾರೆ. ಸದ್ಯ ವಿಓಎಯು ಒಂದು ತಿಂಗಳ ಅವಧಿಗೆ ಒಬ್ಬ ವ್ಯಕ್ತಿಗೆ ಮಾತ್ರ ಪ್ರವಾಸಕ್ಕೆ ಅನುಕೂಲ ಮಾಡಿಕೊಡುತ್ತಿದ್ದು ಮತ್ತದನ್ನು ವಿಸ್ತರಿಸಿಕೊಳ್ಳುವಂತಿಲ್ಲ.

ಇ–ಪ್ರವಾಸಿ ವೀಸಾವನ್ನು ಭಾರತಕ್ಕೆ ಮನರಂಜನೆಗಾಗಿ, ಪ್ರವಾಸಿ ತಾಣಗಳನ್ನು ನೋಡಲು ಬರುವವರು, ಸ್ನೇಹಿತರನ್ನು ಹಾಗೂ ಸಂಬಂಧಿಕರನ್ನು ಭೇಟಿ ಮಾಡಲು ಬರುವವರು, ಚಿಕಿತ್ಸೆಗಾಗಿ ಉದ್ದೇಶಕ್ಕಾಗಿ ಇಲ್ಲವೇ ಮಾಮೂಲಿ ಉದ್ದಿಮೆ ಸಂಬಂಧವಾಗಿ ಭೇಟಿ ನೀಡುವವರು ಪಡೆಯಬಹುದು. ಈ ವೀಸಾವು ರಾಯಭಾರಿತ್ವ/ ಅಧಿಕೃತ ಪಾಸ್‌ಪೋರ್ಟ್ ಹೊಂದಿರುವವರಿಗೆ ಅನ್ವಯವಾಗುವುದಿಲ್ಲ.



ಇ–ಪ್ರವಾಸಿ ವೀಸಾದ ಉದ್ದೇಶವೇನೆಂದರೆ ಒಂದು ಮಾಹಿತಿ ತಂತ್ರಜ್ಞಾನದ ಬೆಂಬಲ ಪಡೆದ ವ್ಯವಸ್ಥೆಯ ಮೂಲಕ ಭದ್ರತೆಯ ಚೌಕಟ್ಟನ್ನು ಬಲಪಡಿಸಿಕೊಂಡು ನ್ಯಾಯಬದ್ಧ ಪ್ರವಾಸಿಗರಿಗೆ ಉತ್ತೇಜನ ನೀಡುವುದು. ಪ್ರವಾಸಿಗರಿಗೆ 2010ರಲ್ಲಿ ಘೋಷಿಸಿದ್ದ ವಿಓಎ ಸೌಲಭ್ಯದಲ್ಲಿ ಸಾಕಷ್ಟು ಸಮಸ್ಯೆಗಳೆದುರಾಗಿದ್ದವು. ಈಗ ಜಾರಿಯಾಗಿರುವ ಹೊಸ ವ್ಯವಸ್ಥೆಯು ಸಂಪೂರ್ಣವಾಗಿ ಕಂಪ್ಯೂಟರೀಕರಣಗೊಂಡಿದ್ದು ಸರಳವಾಗಿ ಮತ್ತು ಬಳಕೆದಾರ ಸ್ನೇಹಿಯಾಗಿದೆ. ಹೀಗಾಗಿ ಇದುವರೆಗಿದ್ದ ಎಲ್ಲಾ ತೊಡಕುಗಳು ನಿವಾರಣೆಯಾಗಿವೆ.

### ಇ–ಪ್ರವಾಸಿ ವೀಸಾದ ವ್ಯಾಪ್ತಿ

ವಲಸೆ ಇಲಾಖೆಯು ಇ–ಪ್ರವಾಸಿ ವೀಸಾದ ಮೂಲಕ ಬರುವ ಪ್ರವಾಸಿಗರಿಗಾಗಿ ದೇಶದ ಒಂಭತ್ತು ವಿಮಾನ ನಿಲ್ದಾಣಗಳಲ್ಲಿ– ದೆಹಲಿ, ಮುಂಬೈ, ಚೆನ್ನೈ, ಕೋಲ್ಕತಾ, ಹೈದರಾಬಾದ್, ಬೆಂಗಳೂರು, ಕೊಚ್ಚಿ, ತಿರುವನಂತಪುರಂ ಮತ್ತು ಗೋವಾಗಳಲ್ಲಿ ಇದಕ್ಕೆಂದೇ ಮೀಸಲಾಗಿರಿಸಿದ 72 ಕೌಂಟರ್‌ಗಳನ್ನು ಆರಂಭಿಸಿದೆ.

ಸದ್ಯ ಇ–ಪ್ರವಾಸಿ ವೀಸಾ ಸೌಲಭ್ಯವು ಕೇವಲ ಒಂಭತ್ತು ವಿಮಾನ ನಿಲ್ದಾಣಗಳಲ್ಲಿ ಮಾತ್ರ ಲಭ್ಯವಿದೆ. ಆದರೆ, ವಿದೇಶಿ ವ್ಯಕ್ತಿಗಳು ಭಾರತದಲ್ಲಿ ಯಾವುದೇ ಅಧಿಕೃತ ವಲಸೆ ಚೆಕ್‌ಪೋಸ್ಟ್‌ಗಳಿಂದ ಹೊರನಡೆಯಬಹುದು.

2015ರ ಜನವರಿಯವರೆಗಿನ ಮಾಹಿತಿಯಂತೆ, ಇ–ಪ್ರವಾಸಿ ವೀಸಾವು ಈ ಮುಂದಿನ 44 ದೇಶಗಳಿಗೆ ಲಭ್ಯವಿದೆ:– ಆಸ್ಟ್ರೇಲಿಯಾ, ಬ್ರೆಜಿಲ್, ಕಾಂಬೋಡಿಯಾ, ಕುಕ್ ಸ್ವೀಪಗಳು, ಜಿಬೌಟಿ, ಫಿಜಿ, ಫಿನ್‌ಲ್ಯಾಂಡ್, ಜರ್ಮನಿ, ಗಯಾನ, ಇಂಡೊನೇಶಿಯಾ, ಇಸ್ರೇಲ್, ಜಪಾನ್, ಜೋರ್ಡಾನ್, ಕೆನ್ಯಾ, ಕಿರಿಬಾಟಿ, ಲಾವೋಸ್, ಲಕ್ಸಂಬರ್ಗ್, ಮಾರ್ಶಲ್ ಐಲ್ಯಾಂಡ್‌ಗಳು,

ಮಾರಿಷಸ್, ಮೆಕ್ಸಿಕೊ, ಮೈಕ್ರೋನೇಶಿಯಾ, ಮ್ಯಾನ್ಮಾರ್, ನಾವುರು, ನ್ಯೂಜಿಲ್ಯಾಂಡ್, ನಿಯೂ ಐಲ್ಯಾಂಡ್, ನಾರ್ವೆ, ಓಮನ್, ಪಲವು, ಪ್ಯಾಲೆಸ್ತೀನ್, ಪಾಪುವಾ ನ್ಯೂಗಿನಿ, ಫಿಲಿಪ್ಪೀನ್ಸ್, ರಿಪಬ್ಲಿಕ್ ಆಫ್ ಕೊರಿಯಾ, ರಷ್ಯಾ, ಸಮೋವಾ, ಸಿಂಗಪುರ, ಸೋಲೋಮನ್ ಐಲ್ಯಾಂಡ್ಸ್, ಥೈಲ್ಯಾಂಡ್, ಟೊಂಗಾ, ಟುವಲು, ಯನೈಟೆಡ್ ಅರಬ್ ಎಮಿರೇಟ್ಸ್, ಯುಕ್ರೈನ್, ಯೂಎಸ್ಎ, ವಾನುವಾಟು, ವಿಯೆಟ್ನಾಂ.

ಇ–ಪ್ರವಾಸಿ ವೀಸಾ ಜಾರಿಯಾದ ನಂತರದಲ್ಲಿ ಇದುವರೆಗೆ ಹಸ್ತಚಾಲಿತವಾಗಿ ಪ್ರಯಾಣಕ್ಕೆ ಮುನ್ನ ಪೂರ್ವಸಮ್ಮತಿಯ ಅಗತ್ಯವಿಲ್ಲದೆ 12 ದೇಶಗಳಿಗೆ ನೀಡಲಾಗುತ್ತಿದ್ದ (ಜಪಾನ್, ಸಿಂಗಪುರ, ಫಿಲಿಪ್ಪೀನ್ಸ್, ಫಿನ್‌ಲ್ಯಾಂಡ್, ಲಕ್ಸಂಬರ್ಗ್, ನ್ಯೂಜಿಲ್ಯಾಂಡ್, ಕಾಂಬೋಡಿಯಾ, ಲಾವೋಸ್, ವಿಯೆಟ್ನಾಂ, ಮ್ಯಾನ್ಮಾರ್, ಇಂಡೋನೇಶಿಯಾ ಹಾಗೂ ದಕ್ಷಿಣ ಕೊರಿಯಾ) ವಿಓಎಯನ್ನು 2015ರ ಜನವರಿ 27ರಿಂದ ಅನ್ವಯವಾಗುವಂತೆ ರದ್ದುಪಡಿಸಲಾಗಿದೆ.

**ಇ–ಪ್ರವಾಸಿ ವೀಸಾದ ಯಶಸ್ಸು**

ಈ ಯೋಜನೆಯ ಅನುಷ್ಠಾನವು ನೀಡುವ ಸ್ಪಷ್ಟ ಸಂದೇಶ ಏನೆಂದರೆ ಭಾರತ ದೇಶವು ದೇಶದಲ್ಲಿ ಪ್ರವಾಸ ಮಾಡಲಿಚ್ಛಿಸುವ ಪ್ರವಾಸಿಗರಿಗೆ ಅವರ ಪ್ರವಾಸವನ್ನು ಸುಗಮಗೊಳಿಸುತ್ತದೆ ಎಂಬುದಾಗಿದೆ. ಈ ಯೋಜನೆಯು 12ನೆಯ ಪಂಚವಾರ್ಷಿಕ ಯೋಜನೆ ಕೊನೆಗೊಳ್ಳುವುದರೊಳಗೆ ಅಂತಾರಾಷ್ಟ್ರೀಯ ಪ್ರವಾಸಿಗರ ಆಗಮನದಲ್ಲಿ ಹಾಲಿ ಇರುವ ಭಾರತದ ಪಾಲನ್ನು ಪ್ರತಿಶತ 0.64ರಿಂದ ಪ್ರತಿಶತ 1ಕ್ಕೆ ಏರಿಸಲು ಕೊಡುಗೆ ನೀಡುತ್ತದೆ.

ಪಟ್ಟಿ ತೋರಿಸುವಂತೆ ಹೊಸ ಎಟಿಎ ಜಾರಿಗೊಳಿಸಿದ ನಂತರದಲ್ಲಿ ಇ–ಪ್ರವಾಸಿ ವೀಸಾ ಪಡೆಯುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. 2015ರ ಮಾರ್ಚ್ ತಿಂಗಳಿನಲ್ಲಿ ಇ–ಪ್ರವಾಸಿ ವೀಸಾ




| TVoA/ಇ–ಪ್ರವಾಸಿ ವೀಸಾ ಯೋಜನೆಯ ಪ್ರಗತಿ | | | | | |
|---|---|---|---|---|---|
| **ವರ್ಷ** | **2010 (ಜನವರಿ–ನವೆಂಬರ್)** | **2011 (ಜನವರಿ–ಡಿಸೆಂಬರ್)** | **2012 (ಜನವರಿ–ಡಿಸೆಂಬರ್)** | **2013 (ಜನವರಿ–ಡಿಸೆಂಬರ್)** | **2014 (ಜನವರಿ–ಡಿಸೆಂಬರ್)** |
| TVoA/ ಇ–ಪ್ರವಾಸಿ ವೀಸಾ | 5644 | 12,761 | 16,084 | 20,294 | 39,046 |
| ಆಧಾರ– ಪ್ರವಾಸೋದ್ಯಮ ಸಚಿವಾಲಯದ ಮಾರ್ಕೆಟಿಂಗ್ ರಿಸರ್ಚ್ ಡಿವಿಜನ್, ಭಾರತ ಸರ್ಕಾರ | | | | | |

*ಇ–ಪ್ರವಾಸಿ ವೀಸಾವನ್ನು 2014ರ ನವೆಂಬರ್ 27ರಂದು ಜಾರಿಗೊಳಿಸಲಾಯಿತು.

| ಇ–ಪ್ರವಾಸಿ ವೀಸಾ ಮತ್ತು ಹಸ್ತಚಾಲಿತ ಟಿವಿಓಎ ಸಂಖ್ಯೆಗೆ ವ್ಯತ್ಯಾಸ | | | | |
|---|---|---|---|---|
| **ವರ್ಷ** | **ಜನವರಿ** | **ಫೆಬ್ರವರಿ** | **ಮಾರ್ಚ್** | **ಜನವರಿ–ಮಾರ್ಚ್** |
| 2014 (ಹಸ್ತಚಾಲಿತ ಟಿವಿಓಎ) | 1,903 | 1,980 | 1,958 | 5,841 |
| 2015 (ಇ–ಪ್ರವಾಸಿ ವೀಸಾ) | 25,023 (1215%)* | 24,985 (1162%)* | 25,851 (1220%)* | 75,859 (1199)* |
| ಆಧಾರ– ಪ್ರವಾಸೋದ್ಯಮ ಸಚಿವಾಲಯದ ಮಾರ್ಕೆಟಿಂಗ್ ರಿಸರ್ಚ್ ಡಿವಿಜನ್, ಭಾರತ ಸರ್ಕಾರ<br>* ಹಿಂದಿನ ವರ್ಷದ ಅದೇ ತಿಂಗಳಿನ ಹೋಲಿಕೆಯಲ್ಲಿ ಪ್ರತಿಶತ ಹೆಚ್ಚಳ<br>* ಆರಂಭಿಕ ಹಸ್ತಚಾಲಿತ ಟಿವಿಓಎ ಯೋಜನೆಯಲ್ಲಿ ಪೂರ್ವ ಅಧಿಕೃತ ಸಮ್ಮತಿ ಅಗತ್ಯತೆಯಿರಲಿಲ್ಲ. | | | | |

ಪಡೆದು ಭಾರತಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ ಒಟ್ಟು 25,851. 2014ರ ಮಾರ್ಚ್ ತಿಂಗಳಿನಲ್ಲಿ ಹಸ್ತಚಾಲಿತ ವೀಸಾ ಮೂಲಕ ಭಾರತಕ್ಕೆ ಭೇಟಿ ನೀಡಿದ್ದ ಪ್ರವಾಸಿಗರ ಸಂಖ್ಯೆ 1,958. ಅಂದರೆ ಒಟ್ಟು ಪ್ರವಾಸಿಗರ ಸಂಖ್ಯೆಯಲ್ಲಿ ಶೇಕಡಾ 1220.3ರಷ್ಟು ಹೆಚ್ಚಳವಾಗಿದೆ. ಅದೇ ರೀತಿಯಲ್ಲಿ 2015ರ ಫೆಬ್ರವರಿಯಲ್ಲಿ 24,989ಜನರು ಭೇಟಿ ನೀಡಿದ್ದರೆ ಕಳೆದ ವರ್ಷ ಅದೇ ತಿಂಗಳಿನಲ್ಲಿ 1,980 ಪ್ರವಾಸಿಗರು ಭೇಟಿ ನೀಡಿದ್ದರು. ಇದು ಶೇಕಡಾ 1161.9 ಹೆಚ್ಚಳ ಸೂಚಿಸುತ್ತದೆ

2015ರಲ್ಲಿ ಜನವರಿಯಿಂದ ಮಾರ್ಚ್‌ವರೆಗೆ ಒಟ್ಟು 75,859 ಪ್ರವಾಸಿಗರು ಇ–ಪ್ರವಾಸಿ ವೀಸಾದ ಮೂಲಕ ಭೇಟಿ ಮಾಡಿದ್ದಾರೆ. ಕಳೆದ ವರ್ಷ ಇದೇ ಅವಧಿಯಲ್ಲಿ 5,841. ಇದು ಶೇಕಡಾ 1198.7ರ ಪ್ರಮಾಣದಲ್ಲಿ ಹೆಚ್ಚಳವನ್ನು ತೋರಿಸುತ್ತದೆ.

ಲಭ್ಯ ಇರುವ ಮಾಹಿತಿಗಳ ಪ್ರಕಾರ 2015ರ ಏಪ್ರಿಲ್ 14ರ ವರೆಗೆ ಒಂದು ಲಕ್ಷದ ಹತ್ತು ಸಾವಿರ ವೀಸಾಗಳನ್ನು ಸರ್ಕಾರವು ಈ ಯೋಜನೆಯಡಿ ವಿತರಿಸಿದೆ. ಹಿಂದಿನ ಟಿವಿಓಎಯನ್ನು ಕೇವಲ 12 ದೇಶಗಳಿಗೆ ನೀಡಲಾಗುತ್ತಿದ್ದು ಇದೀಗ 40ಕ್ಕಿಂತ ಹೆಚ್ಚಿನ ದೇಶಗಳಿಗೆ ನೀಡಲಾಗುತ್ತಿರುವುದು ಈ ಪ್ರಮಾಣದ ಬೆಳವಣಿಗೆಗೆ ಕಾರಣವಾಗಿದೆ.

2015ರ ಮಾರ್ಚ್ ತಿಂಗಳಿನಲ್ಲಿ ವಿತರಣೆಯಾದ ಇ–ಪ್ರವಾಸಿಗಳನ್ನು ಪಡೆದ ದೇಶಗಳ ಪೈಕಿ ಮೊದಲ ಹತ್ತು ದೇಶಗಳೆಂದರೆ, ಯುಎಸ್ಎ(ಶೇ33.25), ಜರ್ಮನಿ (ಶೇ14.64), ರಷ್ಯನ್ ಫೆಡರೇಶನ್ (ಶೇ.13.13), ಆಸ್ಟ್ರೇಲಿಯಾ (ಶೇ.8.37), ರಿಪಬ್ಲಿಕ್ ಆಫ್ ಕೊರಿಯಾ (ಶೇ.6.39), ಯುಕ್ರೈನ್ (ಶೇ.4.21), ಮೆಕ್ಸಿಕೊ (ಶೇ.2.95), ಜಪಾನ್ (ಶೇ.1.99),

ನ್ಯೂಜಿಲ್ಯಾಂಡ್ (ಶೇ.1.91) ಮತ್ತು ಇಸ್ರೇಲ್ (ಶೇ.1.68)

ಭಾರತದೊಳಗೆ ಇ-ಪ್ರವಾಸಿ ವೀಸಾಗಳನ್ನು ಹಂಚಿರುವ ವಿಮಾನ ನಿಲ್ದಾಣಗಳ ಶೇಕಡಾವಾರು ಹಂಚಿಕೆ ಪ್ರಮಾಣ ಹೀಗಿದೆ. ನವದೆಹಲಿ (ಶೇ.47.32), ಮುಂಬಯಿ (ಶೇ18.55), ಗೋವಾ (ಶೇ.12.3), ಬೆಂಗಳೂರು (ಶೇ6.27), ಚೆನ್ನೈ (ಶೇ5.60), ಹೈದರಾಬಾದ್ (ಶೇ2.3) ಕೋಲ್ಕತಾ (ಶೇ.2.78), ಕೊಚಿ (ಶೇ.2.68) ಹಾಗೂ ತ್ರಿವೇಂದ್ರಂ (ಶೇ.1.84)

### ಇ-ಪ್ರವಾಸಿ ವೀಸಾಕ್ಕೆ ಸಂಬಂಧಿಸಿದ ತೊಡಕುಗಳು

ಸದ್ಯ ಇ-ಪ್ರವಾಸಿ ವೀಸಾವನ್ನು 40ಕ್ಕೂ ಹೆಚ್ಚು ದೇಶಗಳಿಗೆ ವಿತರಿಸಲಾಗುತ್ತಿದ್ದರೂ ಸಹ ಈ ಯೋಜನೆಯನ್ನು ಚೀನಾ, ಯುನೈಟೆಡ್ ಕಿಂಗ್‌ಡಂ, ಸ್ಪೇನ್, ಇಟಲಿ ಮತ್ತು ಮಲೇಶಿಯಾದಂತಹ ಹಲವಾರು ದೇಶಗಳಿಗೆ ವಿಸ್ತರಿಸಬೇಕಾಗಿದೆ. ಪ್ರವಾಸೋದ್ಯಮದ ದೃಷ್ಟಿಯಿಂದ ಈ ದೇಶಗಳು ಪ್ರಾಮುಖ್ಯತೆ ಪಡೆದಿವೆ.

ಇದೇ ರೀತಿ, ಈ ಸೌಲಭ್ಯವನ್ನು ವಾರಣಾಸಿ, ಗಯಾ, ಅಹಮದಾಬಾದ್, ಜಯಪುರ, ತಿರುಚಿರಾಪಳ್ಳಿಯಂತಹ ವಿದೇಶಿ ಪ್ರವಾಸಿಗರ ನೆಚ್ಚಿನ ತಾಣಗಳಲ್ಲಿನ ವಿಮಾನನಿಲ್ದಾಣಗಳಿಗೂ ವಿಸ್ತರಿಸಬೇಕಿದೆ. ಇದರಿಂದಾಗಿ ಹಾಲಿ ಇ-ಪ್ರವಾಸಿ ವೀಸಾ ವಿತರಣೆ ಇರುವ 9 ವಿಮಾನ ನಿಲ್ದಾಣಗಳಲ್ಲಿನ ಕೌಂಟರ್‌ಗಳಿಗೆ ಆಗುತ್ತಿರುವ ಹೊರೆಯನ್ನು ಇಳಿಸಲೂ ಸಹ ಇದು ಸಹಕಾರಿಯಾಗುತ್ತದೆ.

ಪ್ರವಾಸಿಗರು ಮತ್ತು ಈ ಯೋಜನೆಯ ಪಾಲುದಾರರಿಂದ ಕೇಳಿಬರುತ್ತಿರುವ ಒಂದು ಬೇಡಿಕೆಯೆಂದರೆ ವಿಓಎ ಜೊತೆಯಲ್ಲಿಯೇ ಬಹುಪ್ರವೇಶವನ್ನೂ ಒದಗಿಸಬೇಕು ಎನ್ನುವುದು. ಹಾಗೆ ಮಾಡಿದಾಗ ಭಾರತಕ್ಕೆ ಭೇಟಿ ನೀಡುವ ಪ್ರವಾಸಿಗರು ನೆರೆಯ ದೇಶಗಳಿಗೂ ಭೇಟಿ ನೀಡಬಹುದು. ಬಹುಪ್ರವೇಶವು ವಿದೇಶಿ ಪ್ರವಾಸಿಗರ ಆಗಮನಕ್ಕೆ ಇನ್ನೂ ಹೆಚ್ಚಿನ ಉತ್ತೇಜನ ನೀಡುತ್ತದೆ. ಇದೇ ರೀತಿಯಲ್ಲಿ ವೀಸಾ ಅವಧಿಯ್ನು ಎರಡು ತಿಂಗಳಿಗೆ ಹೆಚ್ಚಿಸಬೇಕು ಈ ಮೂಲಕ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲತೆ ಮಾಡಿಕೊಡಬೇಕು ಎಂಬ ಬೇಡಿಕೆಯೂ ಇದೆ. ಅಂತಾರಾಷ್ಟ್ರೀಯ ಪ್ರವಾಸಿಗರು ಬಯೋಮೆಟ್ರಿಕ್ಸ್‌ನ ತೊಂದರೆಯನ್ನೂ ಅನುಭವಿಸುತ್ತಿದ್ದಾರೆ. ಇದರಿಂದಾಗಿ ಅರ್ಜಿದಾರರು ತಮ್ಮ ದೇಶಗಳಲ್ಲಿ ಬಹಳ ದೂರದವರೆಗೆ ಅಲೆಯಬೇಕಾಗಿಬಂದಿದೆ. ಆನ್‌ಲೈನ್ ಅರ್ಜಿಯನ್ನು ಜಾರಿಗೆ ತಂದ ಮೂಲಉದ್ದೇಶಕ್ಕೇ ಇದು ವಿರುದ್ಧವಾಗಿದೆ.

ಹಸ್ತಚಾಲಿತ ವಿಓಎಯನ್ನು ರದ್ದುಪಡಿಸಿದಾಗಿನಿಂದ ವಿದೇಶಿ ಪ್ರವಾಸಿಗರು ಅದನ್ನು ಹಾಗೆ ಕರೆಯುವುದೇ ತಪ್ಪು ಎಂದಿದ್ದಾರೆ. ಆಗಮಿಸಿ ಪಡೆಯುವ ವೀಸಾಕ್ಕೆ ಪೂರ್ವ ಅಧಿಕೃತತೆಯ ಅಗತ್ಯವಿಲ್ಲವಾದ್ದರಿಂದ ಹೊಸ ಯೋಜನೆಯು ನಿಜವಾದ ಅರ್ಥದಲ್ಲಿ ಕೇವಲ ಇ-ವೀಸಾ ಆಗಿದೆಯೇ ವಿನಃ 'ಆಗಮಿಸಿ ಪಡೆಯುವ ವೀಸಾ' ಆಗಿಲ್ಲ ಎನ್ನುತ್ತಾರೆ.



### ಪರಿಸಮಾಪ್ತಿ

ಸಾರಾಂಶದಲ್ಲಿ ಹೇಳುವುದಾದರೆ ಪ್ರವಾಸೋದ್ಯಮ ಕೈಗಾರಿಕೆಯ ಬಹುಕಾಲದ ಬೇಡಿಕೆಯಾಗಿದ್ದ ಉದಾರೀಕರಣಗೊಂಡ ವೀಸಾ ಯುಗ ಇದೀಗ 20 ವರ್ಷಗಳ ನಂತರ ಇ-ಪ್ರವಾಸಿ ವೀಸಾ ರೂಪದಲ್ಲಿ ಸಾಕಾರಗೊಂಡಿದೆ. ಇಟಿಎ ಪಟ್ಟಿಯಲ್ಲಿ ಒಳಬರುವ ಪ್ರವಾಸಿಗರಲ್ಲಿ ಶೇಕಡಾ 40ರಷ್ಟನ್ನು ಒಳಗೊಳ್ಳುವ ಅಮೆರಿಕ, ಜರ್ಮನಿ ಮತ್ತು ಯುಎಇಯಂತಹ ದೇಶಗಳಿವೆ. ವಿದೇಶಿ ಪ್ರವಾಸಿಗರು ದೇಶಕ್ಕೆ ಬರಲು ಇ-ಪ್ರವಾಸಿ ವೀಸಾ ಒಂದೇ ಮುಖ್ಯವಾದ ಮೂಲವಾಗಲು ಸಾಧ್ಯವಿಲ್ಲ. ಆದರೆ ಇದು ವಿದೇಶಿ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುವುದರಲ್ಲಿ ಒಂದು ಕೀಲಕ ಯೋಜನೆಯಾಗಿದೆ. ಪ್ರವಾಸಿಗರಿಗೆ ಭಾರತ ಪ್ರವಾಸವನ್ನು ಆಕರ್ಷಕವಾಗಿಸುವಲ್ಲಿ ಇ-ಪ್ರವಾಸಿ ವೀಸಾ ತನ್ನ ಕೊಡುಗೆ ನೀಡುವುದರಲ್ಲಿ ಸಂಶಯವಿಲ್ಲ. ❑

### ಡಿಜಿಟಲ್ ಇಂಡಿಯಾ

ವೃತ್ತಿಪರ ತರಬೇತಿ ನೀಡಿಕೆಯ ಮಾರುಕಟ್ಟೆ ಕಾರ್ಯನಿರ್ವಹಣೆ ಉತ್ತಮಪಡಿಸುವಲ್ಲಿ ನೆರವಾಗುವ ಡಿಜಿಟಲ್ ವೇದಿಕೆ "ಡಿಜಿಟಲ್ ಇಂಡಿಯಾ" ಅನ್ನು ಇತ್ತೀಚೆಗೆ ಆರಂಭಿಸಲಾಗಿದೆ. ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ (ಡಿಜಿಇಟಿ) ಸರ್ಕಾರದ ವಿವಿಧ ಯೋಜನೆಗಳ ಜಾರಿ ಮತ್ತು ಸಾಧನೆಗಳ ಮೇಲುಸ್ತುವಾರಿ ನಡೆಸಲು ಸಹಾಯಕವಾಗುವಂತೆ ಈ ವೇದಿಕೆ, https://nevtmis.dqet.in ಪೋರ್ಟಲನ್ನು ಅಭಿವೃದ್ಧಿಪಡಿಸಿದೆ.

ಮೊದಲಹಂತದಲ್ಲಿ ಎನ್‌ಸಿಪಿಟಿ-ಎಂಐಎಸ್ ಪೋರ್ಟಲ್, ಡಿಜಿಇ-ಟಿಯ ಕ್ರಾಫ್ಟ್‌ಮನ್ ತರಬೇತಿ ಯೋಜನೆ, ಅಪ್ರೆಂಟಿಸ್ (ಸಿಟಿಎಸ್), ಪ್ರೋತ್ಸಾಹನ್ ಯೋಜನಾ (ಎಪಿವೈ) ಮೊದಲಾದ ಪ್ರಮುಖ ಯೋಜನೆಗಳ ಇ ಆಡಳಿತ ವ್ಯವಸ್ಥೆಗೆ ಅವಕಾಶ ಕಲ್ಪಿಸಿದೆ. ಕ್ರಾಫ್ಟ್‌ಮನ್ ಟ್ರೇಡ್ ಸ್ಕೀಮ್, ಅಪ್ರೆಂಟಿಸ್‌ಶಿಪ್ ಸ್ಕೀಂ ಮತ್ತು ಕ್ರಾಫ್ಟ್‌ಮನ್ ಟ್ರೇನಿಂಗ್ ಸ್ಕೀಮ್ ಇರುವ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಖಾಲಿ ಇರುವ ಸೀಟುಗಳ ಬಗ್ಗೆಯೂ ಮಾಹಿತಿ ದೊರಕುತ್ತದೆ. ಸುಮಾರು 11000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಔದ್ಯಮಿಕ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿ ಲಭ್ಯ ಇರುತ್ತದೆ.

### ಪ್ರಗತಿ – ವಿವಿಧೋದ್ದೇಶಿತ ವೇದಿಕೆ

ಬಹುಉದ್ದೇಶಿತ, ಬಹುಮಾದರಿ ವೇದಿಕೆಯಾದ ಕ್ರಿಯಾಪರ ಆಡಳಿತ ಮತ್ತು ಸಕಾಲಿಕ ಜಾರಿ-ಪ್ರಗತಿಯನ್ನು ಪ್ರಧಾನಮಂತ್ರಿಯವರು ಇತ್ತೀಚೆಗೆ ಆರಂಭಿಸಿದ್ದಾರೆ. ಜನಸಾಮಾನ್ಯರ ಕುಂದುಕೊರತೆಗಳಿಗೆ ಪರಿಹಾರ ಮತ್ತು ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಪ್ರಮುಖ ಯೋಜನೆಗಳ ನಿಗಾ ಮತ್ತು ಪರಿಶೀಲನೆ ನಡೆಸುವ ಉದ್ದೇಶದಿಂದ ಈ ವೇದಿಕೆ ಆರಂಭಿಸಲಾಗಿದೆ. ಡಿಜಿಟಲ್ ಮಾಹಿತಿ ನಿರ್ವಹಣೆ, ವಿಡಿಯೊ ಕಾನ್ಫರೆನ್ಸಿಂಗ್ ಮತ್ತು ಜಿಯೋ-ಸ್ಪೇಶಿಯಲ್ ತಂತ್ರಜ್ಞಾನ ಹೀಗೆ ಮೂರು ತಂತ್ರಜ್ಞಾನಗಳನ್ನು ಈ ವೇದಿಕೆಯಲ್ಲಿ ಬಳಸಲಾಗುತ್ತಿದೆ. ಕೇಂದ್ರದ ಕಾರ್ಯದರ್ಶಿಗಳು ಹಾಗೂ ರಾಜ್ಯಗಳ ಮುಖ್ಯಕಾರ್ಯದರ್ಶಿಗಳನ್ನು ಒಂದೇ ವೇದಿಕೆಗೆ ಕರೆತರುವ ಈ ಯತ್ನ ಸಹಕಾರಿ ಒಕ್ಕೂಟ ವ್ಯವಸ್ಥೆಯ ವಿಶಿಷ್ಟ ಇ ಆಡಳಿತವಾಗಿದೆ.

# ಆರೋಗ್ಯ ಪ್ರವಾಸದ ನಾಡಿ ಮಿಡಿತ



* ಡಾ|| ಹರಿಹರನ್

ಕನ್ನಡಕ್ಕೆ : ಡಾ|| ಬಿ. ಎಸ್. ಹೇಮಾದೇವಿ

ವಿರಾಮ, ಮನೋರಂಜನೆ ಮತ್ತು ಇತರೆ ಕಾರಣಗಳಿಗಾಗಿ ವಾಸಿಸುವ ಸ್ಥಳವನ್ನು ಬಿಟ್ಟು ಲಘು ವಿಹಾರಕ್ಕೆಂದು ಇತರೆ ಸ್ಥಳಗಳನ್ನು ಭೇಟಿ ನೀಡುವುದನ್ನು ಸಾಂಪ್ರದಾಯಿಕವಾಗಿ ಪ್ರವಾಸೋದ್ಯಮವೆಂದು ವ್ಯಾಖ್ಯಾನಿಸಲಾಗಿದೆ. ಆದರೆ ಇತ್ತೀಚೆಗೆ ಪ್ರವಾಸೋದ್ಯಮ ಎಂಬ ಪದವು ಕೇವಲ ವಿರಾಮ ಮತ್ತು ಮನೋರಂಜನೆಗಳಿಗೆ ಮಾತ್ರ ಸೀಮಿತವಾಗಿಲ್ಲ.

ಕಳೆದ ಕೆಲವು ದಶಕಗಳಲ್ಲಿ ಹೆಚ್ಚಿರುವ ಆರೋಗ್ಯ ತಿಳಿವಳಿಕೆ, ವೈದ್ಯಕೀಯ ಕ್ಷೇತ್ರದಲ್ಲಿ ಮೂಲರಚನೆಗಳು ಸುಧಾರಿಸಿರುವುದು ಮತ್ತು ಈ ಕ್ಷೇತ್ರದಲ್ಲಿ ದಿನೇ ದಿನೇ ತಜ್ಞತೆ ಹೆಚ್ಚುತ್ತಿರುವುದು – ಇವೆಲ್ಲವೂ ಇಂದು ವೈದ್ಯಕೀಯ ಪ್ರವಾಸೋದ್ಯಮ ಎಂಬ ಬೆಳವಣಿಗೆಗೆ ಎಡೆಮಾಡಿಕೊಟ್ಟಿವೆ.

ಆರೋಗ್ಯ ಮತ್ತು ಪ್ರವಾಸ ಉದ್ದಿಮೆಗಳ ತೀವ್ರಗತಿಯ ಬೆಳವಣಿಗೆಯನ್ನು ಗುರುತಿಸಲು ಟ್ರಾವೆಲ್ ಏಜೆಂಟರು ಮತ್ತು ಸಮೂಹ ಮಾಧ್ಯಮಗಳು ಈ ಪದವನ್ನು ಸೃಷ್ಟಿಸಿದ್ದು, ಈಗ ಇದು ವೈದ್ಯಕೀಯ, ದಂತ ಹಾಗೂ ಶಸ್ತ್ರ ಚಿಕಿತ್ಸೆ ಸೌಲಭ್ಯಗಳ ಪ್ರಯೋಜನಗಳನ್ನು ಪಡೆಯಲು ಇದರೊಂದಿಗೆ ದೇಶವು ಒದಗಿಸುವ ಹಲವು ಆಕರ್ಷಕ ಪ್ರವಾಸದಲ್ಲಿ ತಮ್ಮ ರಜೆಯನ್ನು ಕಳೆಯಲು ಇಡಿ ವಿಶ್ವದ ಎಲ್ಲೆಡೆಯಿಂದ ಜನರು ಬೇರೆ ದೇಶಕ್ಕೆ (ಇಲ್ಲಿ ಭಾರತ) ಬರುವ ಘಟನೆಯಾಗಿದೆ. ವಿಶೇಷವಾಗಿ, ಭಾರತದಲ್ಲಿ ವೈದ್ಯಕೀಯ ಪ್ರವಾಸೋದ್ಯಮವೆಂದರೆ ಆಧುನಿಕ, ಸಾಂಪ್ರದಾಯಿಕ ಹಾಗೂ ಪರ್ಯಾಯ ವೈದ್ಯ ಶಾಸ್ತ್ರಗಳು ಸೇರುತ್ತವೆ.

**ಆಧುನಿಕ/ ಆಲೋಪತಿ ವೈದ್ಯಶಾಸ್ತ್ರ:** ಈ ವೈದ್ಯಶಾಸ್ತ್ರದಲ್ಲಿ ಮಾತ್ರೆಗಳು ಮತ್ತಿತರ ಔಷಧಿಗಳನ್ನು ನೀಡುವುದರ ಜೊತೆಗೆ ಕೀಲು ಬದಲಿಕೆ, ಅವಯವ ಕಸಿಮಾಡುವಿಕೆ, ತಪಾಸಣಾ ಪರೀಕ್ಷೆಗಳು, ಸೌಂದರ್ಯವರ್ಧನ ಶಸ್ತ್ರಚಿಕಿತ್ಸೆ, ಬಹುವಿಧ ತಜ್ಞ ಆರೈಕೆ, ಬಂಜೆತನಕ್ಕೆ ಚಿಕಿತ್ಸೆ, ರಕ್ತ ಹಾಗೂ ರಕ್ತನಾಳ ಸಂಬಂಧಿ ರೋಗಗಳ ಶಸ್ತ್ರಚಿಕಿತ್ಸೆಗಳೂ ಸೇರುತ್ತವೆ. ಇಷ್ಟೇ ಅಲ್ಲದೆ ದಂತ ಕಸಿ, ದಂತಾಸ್ಥಿ ಆರೈಕೆ, ಲೇಸರ್ ಮೂಲಕ ಕೂದಲು ತೆಗೆಯುವಿಕೆ, ಕೂದಲು ಕಸಿಮಾಡುವಿಕೆ, ಮತ್ತು ಕೊನೆಯದಾಗಿ ಸ್ಪಾ ಮತ್ತು ಸೌಂದರ್ಯ ಚಿಕಿತ್ಸೆಗಳೂ ಸೇರುತ್ತವೆ.

**ಆಯುರ್ವೇದ:** ಆಯುರ್ವೇದವು ಕ್ರಿ.ಪೂ.600ರಿಂದ ಬಳಕೆಯಲ್ಲಿರುವ ಅನನ್ಯವಾದ ದೇಶೀಯ ಆರೋಗ್ಯ ಆರೈಕೆ ವ್ಯವಸ್ಥೆಯಾಗಿದೆ. ಆಯುರ್ವೇದವು ಒಂದು ವೈದ್ಯಕೀಯ ವಿಭಾಗವಾಗಿದ್ದು ಸಂಪೂರ್ಣವಾಗಿ ನೈಸರ್ಗಿಕ ಪದ್ಧತಿಯನ್ನು ಆಧರಿಸಿದೆ ಮತ್ತು ಸರಿಯಾದ ಸಮತೋಲನಕ್ಕಾಗಿ ದೇಹದ ಅಸ್ವಸ್ಥತೆಯ ತಪಾಸಣಾ ಕ್ರಮವನ್ನು ಅವಲಂಬಿಸಿದೆ. ಈ ಪುನರುಜ್ಜೀವನಕಾರಕ ನೈಸರ್ಗಿಕ ವಿಧಾನ ಮತ್ತು ಅಸ್ವಸ್ಥತೆಯ ನಿವಾರಣೆಯು ಇತ್ತೀಚಿಗೆ ಗಮನಾರ್ಹವಾಗಿ ಜನಪ್ರಿಯತೆಯನ್ನು ಗಳಿಸಿದೆ.

**ಯೋಗ:** ಯೋಗವು 'ಯೋಗ್' ಎಂದರೆ ಸಂಯೋಗ ಎಂಬ ಸಂಸ್ಕೃತ ಶಬ್ದದಿಂದ ವ್ಯುತ್ಪನ್ನವಾಗಿದೆ. ಇದು ಪ್ರಾಯಶಃ ದೈವತ್ವ ಅಥವಾ ಭಗವಂತನೊಂದಿಗೆ ಐಕ್ಯವಾಗುವುದು ಎಂಬುದಾಗಿರಬಹುದು.

**ಸೂಕ್ತ ಮಾರ್ಗದರ್ಶಿಯೊಂದಿಗೆ ಭಾರತದಲ್ಲಿ ವೈದ್ಯಕೀಯ ಪ್ರವಾಸೋದ್ಯಮವನ್ನು ಒಂದು 'ಉದ್ದಿಮೆ' ಎಂದು ಘೋಷಿಸುವುದು ಅತ್ಯಂತ ಜರೂರಾಗಿದೆ. ಇಲ್ಲದಿದ್ದಲ್ಲಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸುವ , ನಮ್ಮ ದೇಶ ಕುರಿತು ಸದ್ಭಾವನೆಯನ್ನು ಪ್ರಚುರ ಪಡಿಸುವ ಅತ್ಯುತ್ತಮ ಸಾಧನವಾಗಲಿರುವ, 100 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಗಳಿಕೆ ಸಾಧ್ಯತೆಯಿರುವ ಈ "ಉದಯೋನ್ಮುಖ ಉದ್ದಿಮೆಯು" ಒಂದು "ಕಳೆದು ಹೋದ ಅವಕಾಶ"ವಾಗಿ ಹೋಗುತ್ತದೆ.**

* ಹಿರಿಯ ವೈದ್ಯರು, ನೀತಿ ನಿರೂಪಕರು. E-mail : hariharandr56@gmail.com

ಇದು ಶಾರೀರ ಕ್ರಿಯಾ ಹಾಗೂ ಆಧ್ಯಾತ್ಮಿಕ ಆಯಾಮವುಳ್ಳದ್ದಾಗಿದ್ದು ದೇಹ– ಮನಸ್ಸು – ಆತ್ಮಗಳ ಸಂಯೋಜನೆಯ ಅನುಭವದ ಒಂದು ಧರ್ಮ ನಿರಪೇಕ್ಷ ವಿಧಾನ ಕ್ರಮವಾಗಿದೆ. ಭಾರತವು ಯೋಗ ಮತ್ತು ಧ್ಯಾನಗಳು ಒಂದು ಜೀವನ ಕ್ರಮವಾಗಿರುವ ದೇಶವಾಗಿದೆ.

ಇತರೆ ಪರ್ಯಾಯ ವೈದ್ಯಶಾಸ್ತ್ರಗಳಲ್ಲಿ ಹೋಮಿಯೊಪತಿ, ನಿಸರ್ಗ ಚಿಕಿತ್ಸೆ (ನ್ಯಾಚುರೋಪತಿ), ಧ್ಯಾನ ಮತ್ತು ಸಂಗೀತ ಚಿಕಿತ್ಸೆ, ಸುವಾಸನಾ ಚಿಕಿತ್ಸೆ, ಪ್ರಾಣ ಚಿಕಿತ್ಸೆ ಮತ್ತು ರೇಕಿ ಚಿಕಿತ್ಸಾ ಕ್ರಮಗಳು ಸೇರುತ್ತವೆ.

ಭಾರತದಲ್ಲಿ ದೊರಕುವ ಆಯ್ಕೆಗಳು ಮತ್ತು ಅವಕಾಶಗಳ ಪ್ರಮಾಣವನ್ನು ನಾವು ಪರಿಗಣಿಸಿದರೆ ಭಾರತದ ವೈದ್ಯಕೀಯ ಪ್ರವಾಸೋದ್ಯಮವು ಇಡಿ ವಿಶ್ವದಲ್ಲೇ ಅತ್ಯಂತ ಶೀಘ್ರವಾಗಿ ಮತ್ತು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವ ಒಂದು ಉದ್ದಿಮೆ ಎಂದೇ ಹೇಳಬಹುದು. ವಿಮೆಯಿಲ್ಲದ ಜನರ ಸಂಖ್ಯೆ ಹಾಗೂ ಅತಿ ಹೆಚ್ಚಿನ ಆದಾಯವಿರುವ ಜನರ ಸಂಖ್ಯೆಯು ಹೆಚ್ಚುತ್ತಾ ಹೋದಂತೆ, ತಮ್ಮ ಚಿಕಿತ್ಸೆಗೆ ತಾವೇ ಪಾವತಿಸಲು ಸಮರ್ಥರಾಗಿರುವ ಹಲವು ಜನರು ತಮ್ಮ ದೇಶದ ಹೊರಗೆ ಚಿಕಿತ್ಸೆ ಪಡೆಯಲು ಇಚ್ಛಿಸುತ್ತಾರೆ.

ಭಾರತದ ವೈದ್ಯಕೀಯ ಪ್ರವಾಸೋದ್ಯಮವು ಅತ್ಯಂತ ಕಡಿಮೆ ಖರ್ಚು ಅಥವಾ ಮಿಗುತಾಯದ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುತ್ತದೆ. ಇಲ್ಲಿ ಚಿಕಿತ್ಸೆಗಾಗಿ ಕಾಯಬೇಕಾದ ಪರಿಸ್ಥಿತಿಯಿಲ್ಲ. ಅತ್ಯುತ್ತಮ ಕೌಶಲ್ಯವಿರುವ, ಖ್ಯಾತ ವೈದ್ಯಕೀಯ ತಜ್ಞರ ಸೇವೆಯು ನಮ್ಮಲ್ಲಿ ಲಭ್ಯವಿದೆ. ಇದು ಇಡಿ ವಿಶ್ವದಾದ್ಯಂತ ಸುಲಭವಾಗಿ ವೈದ್ಯಕೀಯ ಪ್ರವಾಸಿಗಳು ಬರುವಂತೆ ಅನುವುಮಾಡಿಕೊಡುತ್ತಿದೆ.

ಪ್ರಸಕ್ತವಾಗಿ, ಈ ವೈದ್ಯಕೀಯ ಪ್ರವಾಸೋದ್ಯಮವು ತೀವ್ರಗತಿಯಲ್ಲಿ ಬೆಳೆಯುತ್ತಾ ಹೋಗುತ್ತದೆ ಮತ್ತು ಬೇರೆ ದೇಶಕ್ಕಿಂತ ಅತಿ ಕಡಿಮೆ ಖರ್ಚಿನಲ್ಲಿ ಪ್ರವಾಸಿಗರಿಗೆ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುತ್ತಾ ಮುಂದುವರೆಯುತ್ತದೆ ಎಂಬ ನಿರೀಕ್ಷೆಯಿದೆ.

ವೈದ್ಯಕೀಯ ಪ್ರವಾಸೋದ್ಯಮದ ಜೊತೆಗೆ, ಭಾರತವನ್ನು ಅಂತಾರಾಷ್ಟ್ರೀಯ ಅತ್ಯುತ್ತಮ ಪ್ರವಾಸಿ ತಾಣಗಳಲ್ಲೊಂದು ಎಂದು ಪರಿಗಣಿಸಲಾಗಿದೆ. ಇಂದು ತನ್ನ 'ಅತಿಥಿ ದೇವೋ ಭವ' (ಅತಿಥಿ ದೇವರು) ಎಂಬ ಸಶಕ್ತ ಘೋಷಣೆಯೊಂದಿಗೆ ಭಾರತವು, ವೈದ್ಯಕೀಯ ಸೇವೆಯನ್ನು ಒದಗಿಸುವವರು ಸಂಪೂರ್ಣರೀತಿಯಲ್ಲಿ ಮೊದಲಿನಿಂದ ಕೊನೆಯವರೆಗೆ ಎಲ್ಲಾ ಸೇವೆಗಳನ್ನು ಒದಗಿಸಲಿದ್ದಾರೆಂಬ ಭರವಸೆಯನ್ನು ನೀಡುತ್ತದೆ. ಈ ಸೌಲಭ್ಯಗಳಲ್ಲಿ ತಜ್ಞರಿಂದ ಚಿಕಿತ್ಸೆ , ಚಿಕಿತ್ಸೆಯ ಜೊತೆಗೆ ವಿಹಾರ ಸ್ಥಳ ವೀಕ್ಷಣೆ, ಕಡಿಮೆ ಖರ್ಚಿನಲ್ಲಿ ವೈದ್ಯಕೀಯ ಸಲಹೆ ಮತ್ತು ಚಿಕಿತ್ಸೆ, ಹಾಗೂ ಅತ್ಯಾಧುನಿಕ ಉಪಕರಣಗಳ ಲಭ್ಯತೆಗಳೂ ಸೇರುತ್ತವೆ. ಇಲ್ಲಿ ಚಿಕಿತ್ಸೆಗಾಗಿ ಕಾಯುವ ಅಗತ್ಯವಿಲ್ಲ. ಬಹಳಷ್ಟು ಪ್ರವಾಸಿಗರು ಆಫ್ರಿಕಾ, ಸಿಐಎಸ್ ದೇಶಗಳು, ಮಧ್ಯ ಪೂರ್ವ ದೇಶಗಳು, ಅಫ್ಘಾನಿಸ್ತಾನ್, ಇರಾಕ್ ಮತ್ತು ಬಾಂಗ್ಲಾದೇಶಗಳಿಂದ ಬರುತ್ತಾರೆ. ಆದರೂ ಯೂರೋಪ್ ಮತ್ತು ಉತ್ತರ ಅಮೆರಿಕ ದೇಶಗಳಂತಹ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಇದು ಬಹಳ ಕಡಿಮೆಯೇ ಎನ್ನಬಹುದು.

ಬಹಳಷ್ಟು ರೋಗಿಗಳು ಈಗ ಪ್ರಾಥಮಿಕವಾಗಿ ರಕ್ತನಾಳ ಶಸ್ತ್ರ ಚಿಕಿತ್ಸೆ (ಏಂಜಿಯೊ ಪ್ಲಾಸ್ಟಿ), ಹೃದಯ ಶಸ್ತ್ರಚಿಕಿತ್ಸೆ, ಕೀಲು ಬದಲಿಕೆ, ಕಣ್ಣು ಪೊರೆ ತೆಗೆಯುವಿಕೆ ಸೇರಿದಂತೆ ಹಲವು ಕಣ್ಣಿನ ಶಸ್ತ್ರ ಚಿಕಿತ್ಸೆಗಳು, ಯಕೃತ್ ಮತ್ತು ಮೂತ್ರಪಿಂಡಗಳನ್ನು ಸೇರಿದಂತೆ ಅವಯವ ಕಸಿಮಾಡುವಿಕೆ ಚಿಕಿತ್ಸೆ, ಐವಿಎಫ್, ಕ್ಯಾನ್ಸರ್ ಚಿಕಿತ್ಸೆ, ಹೀಗೆ ಹಲವಾರು ಕಷ್ಟಕರವಾದ ಕಾಯಿಲೆಗಳಿಗೆ ಚಿಕಿತ್ಸೆಗೆಂದು ಬರುತ್ತಿದ್ದಾರೆ. ಈ ಗುಣಮಟ್ಟದ ಆರೋಗ್ಯ ಆರೈಕೆಯು ಅತ್ಯಾಧುನಿಕವಾಗಿ ಸುಸಜ್ಜಿತವಾದ ತೃತೀಯ ಮಟ್ಟದ ಆಸ್ಪತ್ರೆಗಳು, ಹೆಚ್ಚುತ್ತಿರುವ ವಿಮೆ ಮಾರುಕಟ್ಟೆ ಮತ್ತು ಬಲಿಷ್ಠವಾದ ಔಷಧಿ ಕಾರ್ಖಾನೆಗಳ ಇರುವಿಕೆಯಿಂದಲೇ ಸಾಧ್ಯವಾಗಿದೆ. ಇಲ್ಲಿನ ಇತರೆ ಪ್ರಮುಖ ಪಾಲುದಾರರೆಂದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ಪ್ರವಾಸೋದ್ಯಮ ಸಚಿವಾಲಯಗಳು.

ಭಾರತೀಯ ವೈದ್ಯಕೀಯ/ ಆರೋಗ್ಯ ಪ್ರವಾಸೋದ್ಯಮ ಸೇವಾ ವಲಯ ಜಾಲ ವರದಿ, ಮೈಕ್ರೊ ರೀಜನಲ್ ಎನ್ವೈರನಮೆಂಟಲ್ ಪ್ಲಾನಿಂಗ್ ಪ್ರಕಾರ, ಇಲ್ಲಿನ ಅತ್ಯಾಧುನಿಕ ವೈದ್ಯಕೀಯ ಸೇವೆಗಳು ಮತ್ತು ದೇಶಿ ನೈಸರ್ಗಿಕ ಸಂಪತ್ತುಗಳು



ವೈದ್ಯಕೀಯ ಪ್ರವಾಸಿಗಳಿಗೆ ಸ್ವರ್ಗದಂತಾಗಿದೆ. ಸಾಫ್ಟ್‌ವೇರ್‌ನ ನಂತರ ಈ ವೈದ್ಯಕೀಯ ಪ್ರವಾಸೋದ್ಯಮವು ಭಾರತದಲ್ಲಿ ಅತ್ಯಂತ ಯಶಸ್ವಿ ಉದ್ದಿಮೆಯಾಗಿ ಹೊರಹೊಮ್ಮಲಿದೆ. ಭಾರತೀಯ ಉದ್ದಿಮೆಗಳ ಒಕ್ಕೂಟ ಮತ್ತು ಮ್ಯಾಕ್ ಕಿನ್ಸೆಗಳು, ಮೇಲ್ವರ್ಗದ ತೃತೀಯ ಮಟ್ಟದ ಆಸ್ಪತ್ರೆಗಳಲ್ಲಿ ಹೆಚ್ಚುವರಿ ಆದಾಯವನ್ನು ಸಂಪಾದಿಸುವತ್ತ ಈ ಉದ್ದಿಮೆಯ ಬೆಳವಣಿಗೆಯಾಗಲಿದೆ ಮತ್ತು ಇದು ಇಡಿ ಆರೋಗ್ಯ ಆರೈಕೆ ಬಟವಾಡೆ ಮಾರುಕಟ್ಟೆಯ ಶೇಕಡಾ 3–5 ರಷ್ಟಾಗಬಹುದೆಂದು ಎಂದು ಅಂದಾಜು ಮಾಡಿವೆ.

ಭಾರತದ ವೈದ್ಯಕೀಯ ಪ್ರವಾಸೋದ್ಯಮವು ವಾರ್ಷಿಕವಾಗಿ ಶೇಕಡಾ 30 ರಷ್ಟು ಬೆಳೆಯುತ್ತಿದ್ದು ಪಶ್ಚಿಮ ಏಷಿಯಾ, ಮಧ್ಯ ಪೂರ್ವ ಆಫ್ರಿಕಾ ಹಾಗೂ ಸ್ವಲ್ಪ ಮಟ್ಟಿಗೆ ಅಮೆರಿಕ ಹಾಗೂ ಯೂರೋಪಿನ ಕೆಲವು ದೇಶಗಳಿಗೆ ಸೇವೆಯನ್ನು ನೀಡುತ್ತಿದೆ. ಇದು ತನ್ನ ಪ್ರಾರಂಭಿಕ ಘಟ್ಟದಲ್ಲಿದ್ದರೂ ಗ್ರೀಸ್, ದಕ್ಷಿಣ ಅಮೆರಿಕ, ಜೋರ್ಡಾನ್, ಮಲೇಶಿಯಾ, ಫಿಲಿಫೈನ್ಸ್ ಮತ್ತು ಸಿಂಗಪುರ್‌ಗಳಂತಹ ಇಂತಹ ಉದ್ದಿಮೆಯಿರುವ ಇತರ ದೇಶಗಳನ್ನೂ ಮೀರಿಸಲು ಹೊರಟಿದೆ.

ಭಾರತದ ರಾಷ್ಟ್ರೀಯ ಆರೋಗ್ಯ ನೀತಿಯು ವಿದೇಶಿ ರೋಗಿಗಳ ಚಿಕಿತ್ಸೆಯನ್ನು ಕಾನೂನಾತ್ಮಕವಾದ 'ರಫ್ತು' ಎಂದು ಘೋಷಿಸಿದೆ ಮತ್ತು ರಫ್ತು ಗಳಿಕೆಗೆ ವಿಸ್ತರಿಸಲಾದ ಎಲ್ಲಾ ಹಣಕಾಸು ಸೌಲಭ್ಯಗಳಿಗೆ ಅರ್ಹವಾದದ್ದು ಎಂದು ಹೇಳಿದೆ. ಭಾರತದ ಸರ್ಕಾರ ಮತ್ತು ಖಾಸಗಿ ವಲಯಗಳ ಅಧ್ಯಯನಗಳು ವೈದ್ಯಕೀಯ ಪ್ರವಾಸೋದ್ಯಮವು 1 ಬಿಲಿಯನ್‌ನಿಂದ 2 ಬಿಲಿಯನ್‌ವರೆಗೆ ಆದಾಯವನ್ನು (1.25 ಬಿಲಿಯನ್ ಯೂರೊ ಮತ್ತು 2.50

ಬಿಲಿಯನ್ ಯೂರೊ) ತರಲಿದೆ ಎಂದು ಅಂದಾಜು ಮಾಡಿವೆ. ವಿವಿಧ ಮೂಲಗಳ ಹಣಕಾಸು ವರದಿಗಳು ಭಾರತದಲ್ಲಿ ವೈದ್ಯಕೀಯ ಪ್ರವಾಸೋದ್ಯಮವು ವಾರ್ಷಿಕವಾಗಿ ಶೇಕಡಾ 30 ರಷ್ಟು ಹೆಚ್ಚುತ್ತಿದೆ ಎಂದು ಹೇಳಿವೆ.

2015 ನೆಯ ಸಾಲಿನ ವೇಳೆಗೆ ಭಾರತದ ವಾರ್ಷಿಕ ಈ ವ್ಯಾಪಾರವು (ಹೂಡಿಕೆ ಹಾಗೂ ಮಾರಾಟ) ಒಂದೂವರೆ ಮಿಲಿಯನ್‌ಗಿಂತ ಹೆಚ್ಚಾಗುವ ನಿರೀಕ್ಷೆಯಿದೆ. ಭಾರತದ ಅಗ್ರ ಶ್ರೇಣಿಯಲ್ಲಿರುವ ಶೈಕ್ಷಣಿಕ ವ್ಯವಸ್ಥೆಯು ಕಂಪ್ಯೂಟರ್ ಪ್ರೋಗ್ರಾಮರುಗಳನ್ನು, ಇಂಜಿನಿಯರುಗಳನ್ನು ಹೊರ ತರುತ್ತಿದೆಯಲ್ಲದೆ, ಪ್ರತಿ ವರ್ಷವೂ 20,000 ದಿಂದ 30,000 ಶುಶ್ರೂಷಕಿಯರು (ನರ್ಸುಗಳು) ಮತ್ತು ವೈದ್ಯರನ್ನು ಹೊರತರುತ್ತಿದೆ. ಈಗಿನ ಮಾರುಕಟ್ಟೆ ವೃದ್ಧಿ–ಗತಿಯು ವಾರ್ಷಿಕವಾಗಿ ಸುಮಾರು ಶೇಕಡಾ 30ರಷ್ಟಿದೆ. ಈಗ ಈ ನಿಟ್ಟಿನಲ್ಲಿ ನಮ್ಮ ದೇಶವು ಸಿಂಗಾಪುರ ಮತ್ತು ಥೈಲಾಂಡ್ ದೇಶಗಳಂತಹ ಪ್ರಮುಖ ಪಾಲುದಾರರ ಮಟ್ಟವನ್ನು ಸಮೀಪಿಸುತ್ತಿದೆ.

ವೈದ್ಯಕೀಯ ಪ್ರವಾಸೋದ್ಯಮವು ಮುಂದಿನ ಕೆಲವೇ ವರ್ಷಗಳಲ್ಲಿ 40 ಮಿಲಿಯನ್ ಉದ್ಯೋಗವನ್ನು ಸೃಷ್ಟಿಸಲು ನೆರವಾಗಲಿದೆ ಎಂಬ ನಿರೀಕ್ಷೆಯಿದೆ.

### ಮುಂಬರುವ ವರ್ಷಗಳಲ್ಲಿ ಭಾರಿ ಅಭಿವೃದ್ಧಿಯನ್ನು ಕಾಣಲಿರುವ ಕ್ಷೇತ್ರಗಳು

**1. ಮಾರಾಟಗಾರಿಕೆ (ಮಾರ್ಕೆಟಿಂಗ್:** ಇಂಟರ್‌ನೆಟ್, ಆರೋಗ್ಯ ಕ್ಷೇತ್ರದ ಮಧ್ಯವರ್ತಿಗಳು ಮತ್ತು ಕೆಲವೊಮ್ಮೆ ರೋಗಿಗಳನ್ನು ವಿದೇಶದಲ್ಲಿ ಭೇಟಿ ಮಾಡುವುದರ ಮೂಲಕ ತಮ್ಮ ಸೇವೆಗಳ ಮಾರಾಟಗಾರಿಕೆಯನ್ನು ವೈದ್ಯಕೀಯ ಪ್ರವಾಸೋದ್ಯಮದ ಸೌಲಭ್ಯವನ್ನು ನೀಡುತ್ತಿರುವ ಆಸ್ಪತ್ರೆಗಳು ಮಾಡುತ್ತಿವೆ. ಇದಕ್ಕಾಗಿ ಸಮರ್ಥ ಮಾರಾಟ ಸಿಬ್ಬಂದಿಗಳ ಅಗತ್ಯವಿದೆ.

**2. ಭಾಷಾ ಸೇವೆಗಳು :** ಇಂಗ್ಲಿಷ್ ಬಾರದ ಯೂರೋಪು, ಆಫ್ರಿಕ ಮತ್ತು ಪಶ್ಚಿಮ ಏಷಿಯ ದೇಶಗಳಿಂದ ಬರುವ ರೋಗಿಗಳು ತಮ್ಮ ವೈದ್ಯಕೀಯ ಚಿಕಿತ್ಸೆಯ ನಿಯಮಾವಳಿಗಳನ್ನು ಅರ್ಥ ಮಾಡಿಕೊಳ್ಳಲು ಅನುವಾದಕರ ಅಗತ್ಯವಿದೆ.

**3. ಹಿನ್ನೆಲೆ ಕಚೇರಿ ಕಾರ್ಯಾಚರಣೆ (ಬ್ಯಾಕ್ ಆಫೀಸ್ ಆಪರೇಷನ್) :** ವೈದ್ಯಕೀಯ ಪ್ರವಾಸೋದ್ಯಮದಲ್ಲಿ ಹಿನ್ನೆಲೆ ಕಚೇರಿ ಕಾರ್ಯಾಚರಣೆಗಾಗಿ ಪ್ರತಿಭೆಯ ಅಗತ್ಯ ಹೆಚ್ಚು. ಈ ವಲಯದಲ್ಲಿ ಕೂಡ ಇತರೆ ಸೇವೆಗಳಲ್ಲಿದ್ದಂತೆ ಉತ್ತಮ ಸಂವಹನಾ ಕೌಶಲ್ಯ ಮತ್ತು ಅಂತರವೈಯಕ್ತಿಕ ಕೌಶಲ್ಯಗಳು ಪ್ರಮುಖ ಮೂಲ ಅವಶ್ಯಕತೆಗಳು.

**4. ವೈದ್ಯಕೀಯ ಹಾಗೂ ಸತ್ಕಾರ ವಲಯ ವೃತ್ತಿಪರರು :** ಅತ್ಯುನ್ನತ ಚಿಕಿತ್ಸಕ ಕೌಶಲ್ಯವು ಉತ್ತಮ ಆರೋಗ್ಯ ಆರೈಕೆಗೆ ತಳಹದಿಯಾಗಿದ್ದು ಸೇವೆ ಮತ್ತು ನಿರ್ವಹಣೆ ವಲಯದಲ್ಲಿ ಪ್ರತಿಭೆಗೆ ಅಪಾರ ಬೇಡಿಕೆಯಿದೆ.

ಇತರೆ ದೇಶಗಳಿಗಿಂತ ಇಲ್ಲಿರುವ ಆರೋಗ್ಯ ಆರೈಕೆ ಉದ್ದಿಮೆಯ ಅಂತರ್ಗತ ಅನುಕೂಲ ಪರಿಸ್ಥಿತಿಯಿಂದಾಗಿ ಮೆಚ್ಚಿನ ತಾಣವಾಗಲು ಪ್ರಮುಖ ಕಾರಣವಾಗಿದೆ. ಇಂದು ಭಾರತೀಯ ಆರೋಗ್ಯ ಆರೈಕೆಯನ್ನು ವಿಶ್ವಮಟ್ಟದ್ದೆಂದು ಪರಿಗಣಿಸಲಾಗಿದೆ. ಕೆಲವು ಅಗ್ರ ಶ್ರೇಣಿಯ ಭಾರತೀಯ ಆಸ್ಪತ್ರೆಗಳು ಮತ್ತು ವೈದ್ಯರು ಅಂತಾರಾಷ್ಟ್ರೀಯ ಖ್ಯಾತಿಯನ್ನು ಹೊಂದಿರುವುದನ್ನು ನಾವು ಕಾಣಬಹುದು. ಆದರೆ ಕಡಿಮೆ ಬೆಲೆಯ ವೈದ್ಯಕೀಯ ಚಿಕಿತ್ಸೆಯಿಂದಾಗಿ ಭಾರತವು ವೈದ್ಯಕೀಯ ಪ್ರವಾಸೋದ್ಯಮದ ಆಯ್ಕೆಯ ಸ್ಥಳವಾಗಿರಲು ಅತಿ ಮುಖ್ಯ ಕಾರಣವಾಗಿದೆ. ಭಾರತಕ್ಕೆ ಬರುವ ಬಹುತೇಕ ವಿದೇಶಿ ರೋಗಿಗಳು ಭಾರತದಲ್ಲಿ "ಮೊದಲ ಪ್ರಪಂಚದ ಸೇವೆ, ಆದರೆ ಮೂರನೆಯ ಪ್ರಪಂಚದ ಬೆಲೆ" ಎಂಬುದಕ್ಕಾಗಿಯೇ ಭಾರತವನ್ನು ಆರಿಸುತ್ತಾರೆ.

### ವೈದ್ಯಕೀಯ ಪ್ರವಾಸೋದ್ಯಮದ ಪ್ರಯೋಜನಗಳು

- ✧ ದೇಶದ ಆರ್ಥಿಕ ಸಂಪತ್ತನ್ನು ಹೆಚ್ಚಿಸುವ ವಿದೇಶಿ ವಿನಿಮಯದ ಗಳಿಕೆ.
- ✧ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಕಡಿಮೆ ಸುಂಕದ ಅನುಕೂಲ.
- ✧ ಸುಧಾರಿತ ಮಾಹಿತಿ ವಿನಿಮಯ.
- ✧ ರೋಗಿ ಆರೈಕೆ ಪ್ರಕ್ರಿಯೆಯಲ್ಲಿ ಸಾಮರ್ಥ್ಯ ಹೆಚ್ಚಿದೆ ಮತ್ತು ಚಿಕಿತ್ಸೆಯಲ್ಲಿ



ಎಲ್ಲಾ ರೀತಿಯಲ್ಲಿ ಉತ್ತಮ ಸಾಧನೆ ಮತ್ತು ಸ್ಪರ್ಧಾತ್ಮಕತೆ.
- ✧ ಆಸ್ಪತ್ರೆ ಪೂರೈಕೆ ಸರಣಿಯ ಸಾಮರ್ಥ್ಯದಲ್ಲಿ ಸುಧಾರಣೆ.
- ✧ ದೇಶದ ಹೊರಗೆ ಮತ್ತು ಒಳಗೆ ವ್ಯಾಪಾರ ಪಾಲುದಾರರ ಜೊತೆಗೆ ಕೌಶಲ್ಯ ತಂತ್ರ ಸಹಯೋಗ.
- ✧ ತಂತ್ರಜ್ಞಾನ ಮತ್ತು ಜ್ಞಾನ ವರ್ಗಾವಣೆ.
- ✧ ಆಂತರಿಕ ಮತ್ತು ಬಾಹ್ಯ ವಲಯಗಳಲ್ಲಿ ಉತ್ತಮ ವ್ಯವಸ್ಥಾಪನಾ ಕಾರ್ಯಾಚರಣೆ.
- ✧ ಉದ್ದಿಮೆಯಲ್ಲಿ ಉದ್ಯೋಗ ಅವಕಾಶಗಳ ಸೃಷ್ಟಿ.
- ✧ ಮೂಲಸಂರಚನೆ ಮತ್ತು ಕೌಶಲ್ಯ ಹೊಂದಿರುವ ವ್ಯಕ್ತಿಗಳ ಉತ್ತಮ ಬಳಕೆ.
- ✧ ಆರೋಗ್ಯ, ಪ್ರವಾಸೋದ್ಯಮ ಮತ್ತು ಪ್ರವಾಸಗಳ ಮೂಲ ಸಂರಚನೆಗಳಲ್ಲಿ ಅವಕಾಶಗಳು.
- ✧ ವಾರ್ಷಿಕಾ ತಲಾ ಸಂಪತ್ತಿನಲ್ಲಿ ಏರಿಕೆ.
- ✧ ಸಮಗ್ರ ವೈದ್ಯಕೀಯ ಪರಿಹಾರಗಳಿಗಾಗಿ ಸಂಶೋಧನೆ ಮತ್ತು ಅಭಿವೃದ್ಧಿಗಳಿಗೆ ಸದವಕಾಶ.
- ✧ ಒಂದು ವಿಶ್ವ ಮಟ್ಟದ ಆರೋಗ್ಯ ಆರೈಕೆ ನೀಡಬಲ್ಲ ದೇಶ ಎಂಬ ಅಂತರರಾಷ್ಟ್ರೀಯ ಮಟ್ಟದ ಮನ್ನಣೆ.
- ✧ ಸಾಮಾಜಿಕ ಮತ್ತು ವಿಭಿನ್ನ ಸಾಂಸ್ಕೃತಿಕ ಅನುಭವಗಳ ಹಂಚಿಕೊಳ್ಳುವಿಕೆ. ಅಂತಾರಾಷ್ಟ್ರೀಯ ಗ್ರಾಹಕ ಸಂಬಂಧಗಳು.
- ✧ ವಿಶ್ವ ಮಟ್ಟದಲ್ಲಿ ಮಾರಾಟಗಾರಿಕೆ ಮತ್ತು ವೈದ್ಯಕೀಯ ವ್ಯಾಪಾರ ಸಂಬಂಧಗಳು.
- ✧ ವಿಶ್ವದಲ್ಲಿ ಅತ್ಯುನ್ನತ ಮಟ್ಟದ ಆರೋಗ್ಯ ಆರೈಕೆ ತಾಣವಾಗಿ ದೇಶದ ಬ್ರಾಂಡ್ (ಹೆಗ್ಗಳಿಕೆ)ಇಮೇಜು.

- ಸ್ಪರ್ಧಾತ್ಮಕ ಮಟ್ಟದಲ್ಲಿ ಮೇಲುಗೈ.
- ಪಾಲುದಾರರ ನಡುವೆ ಉತ್ತಮ ಸಹಯೋಗ ಅಂದರೆ ಆಸ್ಪತ್ರೆ ಮತ್ತು ಸತ್ಕಾರ ಉದ್ದಿಮೆಗಳ ನಡುವೆ ಉತ್ತಮ ಸಹಯೋಜನೆ
- ಸಾರ್ವಜನಿಕ ಮತ್ತು ಖಾಸಗಿ ನಡುವೆ ಪಾಲುದಾರಿಕೆ
- ರೋಗಿ ಸಂತೃಪ್ತಿ

**ಕೊರತೆಗಳು ಮತ್ತು ಸವಾಲುಗಳು**

- ವೈದ್ಯಕೀಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಸರ್ಕಾರವು ಸಾಕಷ್ಟು ಮುತುವರ್ಜಿ ತೋರಿಸಿಲ್ಲ.
- ವಿಮಾನ ಉದ್ದಿಮೆದಾರರು, ಆಸ್ಪತ್ರೆಗಳು ಮತ್ತು ಹೊಟೆಲು ಉದ್ದಿಮೆದಾರರಂತಹ ಹಲವಾರು ಪಾಲುದಾರರ ನಡುವೆ ಸರಿಯಾದ ಸಹಯೋಜನೆ ಇಲ್ಲದಿರುವುದು.
- ಮುಖ್ಯವಾಗಿ ನಮ್ಮದು ನೈರ್ಮಲ್ಯದ ಕೊರತೆ.
- ಆಸ್ಪತ್ರೆಗಳಲ್ಲಿ ಸಮರೂಪಿ ದರ ನೀತಿ ಇಲ್ಲದಿರುವುದು
- ಥೈಲಾಂಡ್, ಮಲೇಷಿಯ ಮತ್ತು ಸಿಂಗಾಪೂರ್‌ಗಳಂತಹ ದೇಶಗಳಿಂದ ಬಲವಾದ ಸ್ಪರ್ಧೆ.
- ಅಂತಾರಾಷ್ಟ್ರೀಯ ಮನ್ನಣೆ ಇಲ್ಲದಿರುವುದು ಒಂದು ಪ್ರಮುಖ ಅಡ್ಡಿಯಾಗಿದೆ
- ಆರೋಗ್ಯ ಮೂಲರಚನೆಯಲ್ಲಿ ನ್ಯೂನ್ಯತಮ ಹೂಡಿಕೆ.
- ಈ ವಲಯದಲ್ಲಿ ಸೂಕ್ತ ವಿಮೆ ನೀತಿಗಳು ಇಲ್ಲದಿರುವುದು.
- ರೋಗಿಗಳನ್ನು ನಿರ್ವಹಿಸಲು ಸ್ವಲ್ಪ ಅಥವಾ ಏನೂ ತರಬೇತಿ ಹೊಂದಿರದ ಬಹಳಷ್ಟು ಮಧ್ಯವರ್ತಿಗಳಿದ್ದು ಈ ವಲಯದ ಬೆಳವಣಿಗೆಗೆ ಅಪಾರ ಹಾನಿ ಉಂಟುಮಾಡುತ್ತಿರುವುದು.

**ಮುಂದಿನ ಹಾದಿ**

- ಹಲವಾರು ಪಾಲುದಾರರು ಇರುವ ಈ ವಲಯದಲ್ಲಿ , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ಒಟ್ಟಿಗೆ ಜೊತೆಗೆ ಸೇರಿ ಒಂದು ಕಾರ್ಯಾಚರಣೆ ಪಡೆಯನ್ನು ರಚಿಸಬೇಕು.
- ಎಲ್ಲಾ ಕೊರತೆಗಳು ಮತ್ತು ಸವಾಲುಗಳತ್ತ ಗಮನ ಹರಿಸಲು ಮತ್ತು ಅವುಗಳನ್ನು ಪರಿಹರಿಸಲು ಎಲ್ಲಾ ಪ್ರಮುಖ ಅಧಿಕಾರಿಗಳ ಜೊತೆಗೆ ಒಂದು ಸಮಾಲೋಚನಾ (ಸಲಹಾ) ಸಭೆಯನ್ನು ಸಂಘಟಿಸಬೇಕು.
- ಉದ್ದಿಮೆಯಲ್ಲಿರುವ ಎಲ್ಲ ಅವಕಾಶಗಳನ್ನು ಕಾರ್ಯಾಚರಣೆ ಪಡೆಯು ಮೌಲ್ಯೀಕರಿಸಬೇಕು ಮತ್ತು ದೇಶದ ಆರೋಗ್ಯ ಆರೈಕೆ ಸಂಸ್ಥೆಗಳನ್ನು ಅಧಿಕೃತ(ಮನ್ನಣೆ) ಗೊಳಿಸಲು ಒಂದು ನೀತಿಯಲ್ಲಿ ರೂಪಿಸಬೇಕು.
- ಪ್ರಮಾಣೀಕೃತವಾದ ಕಾರ್ಯ ವಿಧಾನಗಳನ್ನು ಅಳವಡಿಸಬೇಕು ಮತ್ತು ಅತ್ಯುತ್ತಮ ಆಸ್ಪತ್ರೆಗಳನ್ನು ಆರಿಸಲು ವಿದೇಶಿ ರೋಗಿಗಳಿಗೆ ಅನುವು ಮಾಡಿಕೊಡಬೇಕು.
- ಈ ಉದ್ದಿಮೆಗೆ ಉತ್ತಮ ಭವಿಷ್ಯವನ್ನು ಒದಗಿಸಲು ಆಸ್ಪತ್ರೆಗಳು ಕೂಡ ಅಂತಾರಾಷ್ಟ್ರೀಯ ಮನ್ನಣೆ ಪಡೆಯಬೇಕು, ಸಾಂಪ್ರದಾಯಿಕ ಹಾಗೂ ಪ್ರಾಯೋಗಿಕ (ಕ್ಲಿನಿಕಲ್) ಚಿಕಿತ್ಸೆಗಳನ್ನು ಸಮಗ್ರೀಕರಿಸಬೇಕು ಮತ್ತು ಎಲ್ಲಾ ರೀತಿಯ ಸಂಪೂರ್ಣ ಮೌಲ್ಯಾಧಾರಿತ ಸೇವೆಗಳನ್ನು ಒದಗಿಸಬೇಕು.
- ಚಿಕಿತ್ಸೆಗಾಗಿ ಕಾಯುವ ಸಮಯವನ್ನು ಕಡಿಮೆ ಮಾಡುವ ಮೂಲಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು.
- ಸ್ವದೇಶದಲ್ಲಿ ಉತ್ತಮ ಸಂಪರ್ಕ ಜಾಲ ವ್ಯವಸ್ಥೆಯನ್ನು ಉಂಟುಮಾಡುವುದು.
- ಭಾರತೀಯ ವೈದ್ಯಕೀಯ ಪ್ರವಾಸೋದ್ಯಮದ ಎಲ್ಲಾ ಪ್ರದೇಶಗಳ ಮತ್ತು ವೈದ್ಯಕೀಯ ಪ್ರವಾಸಿಗಳ ಸೇವೆಯಲ್ಲಿ ತೊಡಗಿರುವ ಜಾಲದ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ಸವಿವರ ಪಟ್ಟಿಯನ್ನು ರಚಿಸುವುದು.
- ಭಾರತಕ್ಕೆ ಬರುವ ವೈದ್ಯಕೀಯ ಪ್ರವಾಸಿಗಳು ಎದುರಿಸುವ




ತೊಂದರೆಗಳು ಮತ್ತು ಸವಾಲುಗಳನ್ನು ಅರಿಯುವುದು.
- ಭಿನ್ನ ಸಾಂಸ್ಕೃತಿಕ ಸೂಕ್ಷ್ಮ ಭಾವನೆಗಳ ಕುರಿತಂತೆ ಸೇವೆ ನೀಡುಗರ ವೈದ್ಯೇತರ ಹಾಗೂ ಅನು ವೈದ್ಯ ಸಿಬ್ಬಂದಿಗಳಿಗೆ ತರಬೇತಿ ನೀಡಲು ಸಾಮರ್ಥ್ಯ ರಚನಾ ಕಾರ್ಯಕ್ರಮವನ್ನು ನಡೆಸಲು ಸರ್ಕಾರವು ಮುತುವರ್ಜಿ ವಹಿಸಬೇಕು.
- ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗಳು ಬರುವ ಆಯ್ದ ದೇಶಗಳಲ್ಲಿ ಭಾಷಾ ತರಬೇತಿಯತ್ತ ಗಮನಬೇಕು.

**ಕೊನೆ ಮಾತು**

ಅಂತಾರಾಷ್ಟ್ರೀಯವಾಗಿ ವೈದ್ಯಕೀಯ ಹಾಗೂ ಉಪಚಾರ, ವಿರಾಮ ಉದ್ದೇಶಗಳಿಗಾಗಿ ಪ್ರಯಾಣ ಮಾಡಬೇಕಾದ ಈ ಹೊಸ ಅಗತ್ಯವನ್ನು ವೈದ್ಯಕೀಯ/ ಆರೋಗ್ಯ ಪ್ರವಾಸೋದ್ಯಮ ಎಂದು ಹೆಸರಿಸಲಾಗಿದೆ. ಹೆಚ್ಚು ಹೆಚ್ಚು ಜನರು ತಾವು ಎದುರಿಸುತ್ತಿರುವ ರೋಗ/ ಖಾಯಿಲೆಗಳಿಗೆ ಚಿಕಿತ್ಸೆಯೆಂದು ತಮ್ಮ ಸ್ವದೇಶಗಳಿಂದ ಹೊರಗೆ ಪ್ರಯಾಣ ಮಾಡುತ್ತಿದ್ದಾರೆ. ಜನರು ಪ್ರಯಾಣವನ್ನು ಕೈಗೊಳ್ಳಲು ಸೌಂದರ್ಯ ವರ್ಧನೆ/ ಸೌಂದರ್ಯ ಪ್ರಜ್ಞೆಯ ಪ್ರಾಮುಖ್ಯತೆಯ ಆಧಾರಿತ ಶಸ್ತ್ರ ಚಿಕಿತ್ಸೆಗಳು ಒಂದು ಮುಖ್ಯ ಕಾರಣವಾಗಿದೆ. ಇವು ರೋಗ ಅಥವಾ ಅಸ್ವಾಸ್ಥತೆಯ ಪರಿಧಿಯಲ್ಲಿ ಬರದಿದ್ದರೂ ಕೂಡ ಇವುಗಳನ್ನು ವೈದ್ಯಕೀಯ/ ಆರೋಗ್ಯ ಪ್ರವಾಸೋದ್ಯಮದ ಅಡಿಯಲ್ಲಿ ತರಲಾಗಿದೆ.

ವಿವಿಧ ದೇಶಗಳಲ್ಲಿ ಚಿಕಿತ್ಸೆಯ ದರದ ಭಿನ್ನತೆ ಇದ್ಯಾಗ್ಯೂ ವೈದ್ಯಕೀಯ ಪ್ರವಾಸೋದ್ಯಮವು ಇಂದು ಡಾಲರ್‌ಗಳಲ್ಲಿ ಹಣ ಗಳಿಕೆಯ ದೊಡ್ಡ ಮೂಲವಾಗಿದೆ. ಚಿಕಿತ್ಸೆಯ ಜೊತೆಗೆ ಆರೋಗ್ಯ ಸೇವೆಯನ್ನು ಪಡೆಯುವ ಗ್ರಾಹಕರು ಹಲವು ಕಾಯಿಲೆಗಳಿಗೆ ಆಸ್ಪತ್ರೆಯ ಹೊರಗೆ ವಾಸಮಾಡಬೇಕಾಗುತ್ತದೆ. ಹೀಗಾಗಿ ಇದು

ಹೋಟೆಲ್ ಮತ್ತು ಆಹಾರ ಉದ್ದಿಮೆಗಳಿಗೆ ಭಾರಿ ನೆರವು ನೀಡುತ್ತದೆ. ತಮ್ಮ ಮನೆಗೆ ತೆರಳುವ ರೋಗಿಗಳು ಮತ್ತು ಅವರ ಸಂಗಡಿಗರು ಇಲ್ಲಿ ವ್ಯಾಪಾರ ಮಾಡಲು ಇಷ್ಟಪಡುತ್ತಾರೆ. ಹೀಗಾಗಿ ಆರ್ಥಿಕವಾಗಿ ನಮ್ಮ ದೇಶಕ್ಕೆ ಬಹಳ ಸಹಾಯವಾಗುತ್ತದೆ.



ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ವೈದ್ಯಕೀಯ ಪ್ರವಾಸೋದ್ಯಮವು ವಿದೇಶಿ ಹಣ ಗಳಿಕೆಯನ್ನು ಹೆಚ್ಚಿಸಲು ಸಹಾಯ ಮಾಡುವುದಲ್ಲದೆ ವಿವಿಧ ದೇಶಗಳ ನಾಗರಿಕರಿಗೆ ನಮ್ಮ ದೇಶದ ಮಾರುಕಟ್ಟೆಯನ್ನು ತೆರೆದಿಡಲು ಒಂದು ಭವ್ಯ ಸಾಧನವಾಗಲಿದೆ. ರೋಗಿಗಳು ಮತ್ತು ಅವರ ಸಂಗಡಿಗರಿಗೆ ನೀಡುವ ಒಟ್ಟಾರೆ ಸಂತೃಪ್ತಿಕರ ಅನುಭವವು ಆ ದೇಶದ ಇತರರು ಇಲ್ಲಿಗೆ ಪ್ರಯಾಣ ಕೈಗೊಳ್ಳುವಂತೆ ಆಹ್ವಾನಿಸುತ್ತದೆ ಮತ್ತು ಪ್ರೇರೇಪಿಸುತ್ತದೆ.

ಕಾಲಾಂತರದಲ್ಲಿ ಸಾಧ್ಯವಾದಷ್ಟು ಅತಿ ಕಡಿಮೆ ದರದಲ್ಲಿ ಅಂತಾರಾಷ್ಟ್ರೀಯ ಮಟ್ಟದ ವೈದ್ಯಕೀಯ ಸೇವೆಗಳನ್ನು ಒದಗಿಸುವ ಕಾರಣದಿಂದಾಗಿ ಭಾರತವು ಇಂದು ವೈದ್ಯಕೀಯ ಪ್ರವಾಸೋದ್ಯಮದಲ್ಲಿ ಒಂದು ಬಲವಾದ ಸ್ಥಾನವನ್ನು ಗಿಟ್ಟಿಸಿಕೊಂಡಿದೆ. ಭಾರತವು ದೊಡ್ಡ ಪ್ರಮಾಣದ ಪ್ರಾಪಂಚಿಕ ಮಟ್ಟದ ಆರೋಗ್ಯ ಆರೈಕೆ ಸೌಲಭ್ಯಗಳನ್ನು ಮತ್ತು ಅತ್ಯುತ್ತಮ ವೈದ್ಯಕೀಯ ವೃತ್ತಿಪರರನ್ನು ಹೊಂದಿದೆ. ಇಷ್ಟೇ ಅಲ್ಲದೆ ಅತ್ಯುತ್ತಮ ತರಬೇತಿ ಹೊಂದಿದ ಅನುಭೂತಿಯುಳ್ಳ ಬೆಂಬಲ ಸಿಬ್ಬಂದಿಗಳನ್ನೂ ಹೊಂದಿದೆ. ಯೂರೋಪು ಅಥವಾ ಅಮೆರಿಕಾದಲ್ಲಿ ಖರ್ಚು ಮಾಡುವುದಕ್ಕಿಂತ ಶೇಕಡಾ 25ರಷ್ಟು ಕಡಿಮೆ ದರದಲ್ಲಿ ಹಲವು ರೋಗಗಳಿಗೆ ಅತ್ಯುತ್ತಮ ಸೇವೆಯನ್ನು ನಮ್ಮ ದೇಶ ಒದಗಿಸುತ್ತಿದೆ. ಇಂದು ಕಾರ್ಪೊರೇಟ್ ವಲಯದ ಆಸ್ಪತ್ರೆಗಳು ಪ್ರತಿ ವರ್ಷ ತಾವು ಚಿಕಿತ್ಸೆ ನೀಡುವ ರೋಗಿಗಳ ಪೈಕಿ ಸರಾಸರಿ ಶೇಕಡಾ 15ರಷ್ಟು ವಿದೇಶಿ ರೋಗಿಗಳನ್ನು ಹೊಂದಿದ್ದಾರೆ. ಈ ಸಂಖ್ಯೆಯು ಸಾವಿರಾರು ಸಂಖ್ಯೆಯನ್ನು ಮೀರಿದ್ದು ಬಿಲಿಯನ್ ಡಾಲರ್‌ಗಳಷ್ಟು ಹಣವನ್ನು ಗಳಿಸುವ ಮೂಲಕ ದೇಶಕ್ಕೆ ಅಗತ್ಯವಿರುವ ಅಪಾರ ವಿದೇಶಿ ವಿನಿಮಯವನ್ನು ತರುತ್ತಿದೆ.

ವಿಶ್ವದ ಎಲ್ಲಡೆಯಿಂದ ರೋಗಿಗಳನ್ನು ಆಕರ್ಷಿಸಿ, ವಿಶ್ವದ ಯಾವುದೇ ದೇಶದ ಅತ್ಯುತ್ತಮ ಸೇವೆಗೆ ಸಮಾನವಾದ ಸೇವೆಯನ್ನು ಒದಗಿಸುತ್ತಾ ಅಪೊಲೊ, ಫೋರ್ಟಿಸ್, ಮ್ಯಾಕ್ಸ್, ನಾರಾಯಣ ಹೃದಯಾಲಯ, ಸೆವೆನ್ ಹಿಲ್ಸ್, ವೊಕಾರ್ಡ್, ಮೆದಂಟ, ಬಿಎಲ್ ಕೆ, ಪುಷ್ಪಾಂಜಲಿ ಕ್ರಾಸ್‌ಲೇ, ವಿಜಯ ಹಾಸ್ಪಿಟಲ್ಸ್, ಮಣಿಪಾಲ್, ಮಲ್ಯಾಗಳಂತಹ ಸರಣಿ ಆಸ್ಪತ್ರೆಗಳು ದೇಶಕ್ಕೆ ಅತಿ ದೊಡ್ಡ ಸೇವೆಯನ್ನು ಒದಗಿಸುತ್ತಿವೆ.

ಭಾರತದ ವೈದ್ಯಕೀಯ ಪ್ರವಾಸೋದ್ಯಮವು ತೀವ್ರ ಗತಿಯಲ್ಲಿ ಬೆಳೆಯುತ್ತಿದ್ದರೂ, ಇಂದು ರೋಗಿಗಳನ್ನು ವ್ಯಕ್ತಿಯಾಗಿ ನಿರ್ವಹಿಸಲು ಸ್ವಲ್ಪ ಅಥವಾ ಏನೂ ತಿಳಿವಳಿಕೆ ಇಲ್ಲದ ಬಹಳಷ್ಟು ಮಧ್ಯವರ್ತಿಗಳಿಂದಾಗಿ ಅಪಾರ ಹಾನಿಗೆ ಒಳಗಾಗುತ್ತಿರುವ ಬಹಳಷ್ಟು ಅಸಂಘಟಿತವಾಗಿರುವ ಒಂದು ವಲಯವಾಗಿ ಉಳಿದಿದೆ. ಬಹುತೇಕ ಮಧ್ಯವರ್ತಿಗಳು ರೋಗಿಗಳ ಮತ್ತು ಅವರ ಸಂಗಡಿಗರ ಬಳಿ ಅಗತ್ಯವಿರುವ ಪ್ರತಿಯೊಂದು ಸೇವೆಗೆ ಹಣ ಸುಲಿಗೆ ಮಾಡಿ ದಲ್ಲಾಳಿಗಳಂತೆ ವರ್ತಿಸುತ್ತಾ ಹಣಕಾಸಿನ ದೃಷ್ಟಿಯಲ್ಲಿ ಹಾಗೂ ಮಾನಸಿಕವಾಗಿ ಇಲ್ಲಿ ಬರುವ ಸಂದರ್ಶಕರಿಗೆ ಹಾನಿಯುಂಟು ಮಾಡುತ್ತಿದ್ದಾರೆ. ಇಲ್ಲಿನ ಆಸ್ಪತ್ರೆಗಳು ಅತ್ಯುತ್ತಮ ಚಿಕಿತ್ಸೆಯನ್ನು ನೀಡಿದರೂ ಸಹಾ ಬರುವ ಕೆಲವು ಭೇಟಿಗಾರರು ಒಟ್ಟಾರೆ ಒಳ್ಳೆಯ ಆರೋಗ್ಯ / ಸಕಾರಾತ್ಮಕ ಅನುಭವ ಹೊಂದುವುದಿಲ್ಲ, ಇಲ್ಲವೇ ಕಹಿ ಅನುಭವದಿಂದ ತಮ್ಮ ದೇಶಕ್ಕೆ ತೆರಳುತ್ತಾರೆ. ಈ ಪರಿಸ್ಥಿತಿಯನ್ನೂ ನಾವು ಇಂದು ಕಾಣುತ್ತಿದ್ದೇವೆ.

ಒಟ್ಟಾರೆ, ವೈದ್ಯಕೀಯ ಪ್ರವಾಸಕ್ಕೆಂದು ಭೇಟಿ ನೀಡುವವರಿಗೆ "ವಿಶ್ವಾಸಭರಿತ ಅನುಭವ"ವನ್ನು ನೀಡುವ ಗುರಿಯೊಂದಿಗೆ ಸೂಕ್ತ ಮಾರ್ಗದರ್ಶಿಯೊಂದಿಗೆ ಭಾರತದಲ್ಲಿ ವೈದ್ಯಕೀಯ ಪ್ರವಾಸೋದ್ಯಮವನ್ನು ಒಂದು 'ಉದ್ದಿಮೆ' ಎಂದು ಘೋಷಿಸುವುದು ಅತ್ಯಂತ ಜರೂರಾಗಿದೆ. ಇಲ್ಲದಿದ್ದಲ್ಲಿ, ನೇರ ಮತ್ತು ಪರೋಕ್ಷ ಹಣಕಾಸು ಸಂಪನ್ಮೂಲಗಳ ಉಂಟುಮಾಡುವುದಲ್ಲದೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ , ನಮ್ಮ ದೇಶದ ಕುರಿತು ಸದ್ಭಾವನೆಯನ್ನು ಪ್ರಚುರ ಪಡಿಸುವ ಅತ್ಯುತ್ತಮ ಸಾಧನವಾಗಲಿರುವ, 100 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಗಳಿಕೆಯ ಸಾಧ್ಯತೆಯಿರುವ ಈ "ಉದಯೋನ್ಮುಖ ಉದ್ದಿಮೆಯು" ಒಂದು "ಕಳೆದು ಹೋದ ಅವಕಾಶ"ವಾಗಿ ಹೋಗುತ್ತದೆ. ❑


# ಯೋಜನಾ

## ಜೂನ್ 2015 ಸಂಚಿಕೆ ವಿಷಯ

## ಪರ್ಯಾಯ ವೈದ್ಯೋಪಚಾರ

ಅನಿವಾರ್ಯ

# ಮೂಲಸೌಕರ್ಯ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿ

* ಮನೋಜ್ ದೀಕ್ಷಿತ್
ಕನ್ನಡಕ್ಕೆ : ಪದ್ಮನಾಭ ಕೆ. ವಿ.




ಪ್ರವಾಸಿ ತಾಣಗಳನ್ನು ತಲುಪುವುದು ಸುಲಭ ಸಾಧ್ಯವಲ್ಲದೇ ಹೋದರೆ ಎಲ್ಲ ಆಕರ್ಷಣೆಗಳೂ ಅರ್ಥಹೀನ. ರಸ್ತೆ ಮತ್ತು ರೈಲ್ವೆಗಳಿಂದ ಕೇವಲ ಪ್ರವಾಸಿಗರಿಗಷ್ಟೇ ಅನುಕೂಲವಲ್ಲ; ಇವು ಉತ್ತಮಗೊಂಡರೆ ಒಟ್ಟಾರೆ ಆರ್ಥಿಕತೆಯೂ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಬಹುದು.

ಪ್ರವಾಸೋದ್ಯಮ ಉತ್ಪನ್ನವು ಪ್ರವಾಸಿಗರು ಬಳಸುವ ವಿವಿಧ ಬಗೆಯ ಸೇವೆಗಳನ್ನೊಳಗೊಂಡಿರುವ (ಅಂದರೆ ಮಾಹಿತಿ, ತುಲನಾತ್ಮಕ ದರಗಳು, ಪ್ರಯಾಣ, ವಸತಿ ಹಾಗೂ ಆಕರ್ಷಣ ಸೇವೆಗಳ) ಪ್ರಕ್ರಿಯೆಯ ಫಲವಾಗಿರುವ ಒಂದು ಸಂಕೀರ್ಣ ಉಪಭೋಗದ ಅನುಭವ (ಗನ್, 1988). ಪ್ರವಾಸಿ ಅನುಭವಗಳು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿ ಮತ್ತು ರಾಚನಿಕ ಲಕ್ಷಣಗಳಿಂದಲೂ ರೂಪಿಸಲ್ಪಡುತ್ತವೆ ಮತ್ತು ಇವು ಪ್ರವಾಸಿ ತಾಣ ಉತ್ಪನ್ನದ ಸ್ವರೂಪವನ್ನು ವರ್ಧಿಸುತ್ತವೆ. ಮರ್ಫಿ ಮತ್ತಿತರರು ಈ ಬಗೆಯ ಉತ್ಪನ್ನವನ್ನು ಒಂದು ಪೂರೈಕೆ ಹಾಗೂ ಬೇಡಿಕೆಯ ವಿಶ್ಲೇಷಣೆಗೆ ಹೋಲಿಸುತ್ತಾರೆ ಮತ್ತು ಪ್ರವಾಸೀ ತಾಣದ ವಿವಿಧ ಅಂಶಗಳು ಹೇಗೆ ಪ್ರವಾಸದ ಸಂದರ್ಭದಲ್ಲಿ ಪ್ರವಾಸಿಗರಿಗೆ ಪೂರಕವಾಗಿರುತ್ತವೆ ಎಂದು ವಿವರಿಸುತ್ತಾರೆ.

ಉತ್ಪನ್ನ ಅನುಭವವನ್ನು ಸೃಜಿಸುವಲ್ಲಿ ಸೇವಾ ಮೂಲಸೌಕರ್ಯದ ಪಾತ್ರವನ್ನು ಮೊದಲಿಗೆ ಗುರುತಿಸಿದವರು ಸ್ಮಿತ್ (1994). "ಸೇವಾ ಮೂಲಸೌಕರ್ಯವು ವಿಸ್ತೃತ ಪರಿಕಲ್ಪನೆಯಾದ ಸ್ಥೂಲ-ಪರಿಸರ ಅಥವಾ ಪ್ರವಾಸಿ ತಾಣದ ಭೌತಿಕ ಸ್ವರೂಪದ ಒಂದು ಭಾಗ" ಎಂಬುದು ಅವರ ಅಭಿಪ್ರಾಯ ತಾಣವೊಂದರ ಮೂಲಸೌಕರ್ಯ ಮತ್ತು ತಂತ್ರಜ್ಞಾನದ ಮಟ್ಟ, ಬಳಕೆ, ಅಥವಾ ಇಲ್ಲದಿರುವಿಕೆಯು ಪ್ರವಾಸಿಗರ ಅನುಭವವನ್ನು ಹೆಚ್ಚಿಸುವ ಸ್ಪಷ್ಟ ಮತ್ತು ಮಹತ್ವದ ಅಂಶಗಳಾಗಿವೆ ಎಂದೂ ಅವರು ಒತ್ತಿ ಹೇಳುತ್ತಾರೆ. ಇವರ ಅಭಿಪ್ರಾಯಗಳನ್ನು ಬೆಂಬಲಿಸುವ ಚೋಯ್ (1992), ಬುಹಾರಿಸ್ (2000), ಹಾಗೂ ಕ್ರೌಚ್ ಮತ್ತು ರಿಚಿ (2000), ಪ್ರವಾಸಿಗರ ಒಟ್ಟಾರೆ ಅನುಭವವು ಪ್ರವಾಸಿತಾಣದ ಭೇಟಿಯ ಬಳಿಕ ತಾಣದ ಕುರಿತಾದ ಅಭಿಪ್ರಾಯವನ್ನು ವರ್ಧಿಸುತ್ತದೆ ಮತ್ತು ಮೂಲಸೌಕರ್ಯವು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎನ್ನುತ್ತಾರೆ.

ತುಲನಾತ್ಮಕ ಹಾಗೂ ಸ್ಪರ್ಧಾತ್ಮಕ ಅನುಕೂಲತೆಗಳ ಹಿನ್ನೆಲೆಯಲ್ಲಿಯೂ ಪ್ರವಾಸಿ ತಾಣ ಉತ್ಪನ್ನವನ್ನು ಇನ್ನೂ ಚೆನ್ನಾಗಿ ಅರ್ಥೈಸಿಕೊಳ್ಳಬಹುದು. ಕ್ರೌಚ್ ಮತ್ತು ರಿಚಿ (1999)ಯವರ ಕೃತಿಯಿಂದ ಅಳವಡಿಸಿಕೊಂಡಿರುವ ಚಿತ್ರ-1 ಪ್ರವಾಸಿ ತಾಣವೊಂದರ ಸ್ಪರ್ಧಾತ್ಮಕತೆಯ ಜಾಗತಿಕ ಚಿತ್ರಣದ ನಿರ್ಧಾರಕ ಅಂಶಗಳನ್ನು

**ಚಿತ್ರ-1: ಪ್ರವಾಸಿ ತಾಣ ಅನುಭವ**




* ನಿರ್ದೇಶಕರು, ಪ್ರವಾಸೋದ್ಯಮ ಅಧ್ಯಯನ ಸಂಸ್ಥೆ, ಲಕ್ನೊ ವಿಶ್ವವಿದ್ಯಾನಿಲಯ, ಲಕ್ನೊ, ಉತ್ತರಪ್ರದೇಶ. Email : manojdixit23@gmail.com

ಚಿತ್ರಿಸುತ್ತದೆ. ತಾಣ ಅನುಭವವನ್ನು ಪಡೆಯಲು ಪ್ರವಾಸಿಗರು ಸ್ಥಳಗಳಿಗೆ ಭೇಟಿನೀಡುವುದರಿಂದ ಅಲ್ಲಿನ ಒಟ್ಟಾರೆ ಪರಿಸ್ಥಿತಿಯು ಅದರ ಆಕರ್ಷಣೆಯನ್ನು ನಿರ್ಧರಿಸುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ಪ್ರತಿಯೊಂದು ಅಂಶವನ್ನು ಪ್ರಮುಖ ಆಕರ್ಷಣೆ ಹಾಗೂ ಪೂರಕ ಅಂಶಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಈ ವಿಭಾಗದಲ್ಲಿ ತಾಣದ ಸಾಮಾನ್ಯ ಮೂಲಸೌಕರ್ಯ ಸೇವೆಗಳು ನಿಜವಾಗಿಯೂ ಅತ್ಯಂತ ಪ್ರಮುಖ ಅಂಶಗಳಲ್ಲಿ ಒಂದಾಗಿವೆ. ಪ್ರವಾಸೋದ್ಯಮವು ಸಾರ್ವಜನಿಕ ಸವಲತ್ತು ಹಾಗೂ ಮೂಲಸೌಕರ್ಯಗಳ ಮೇಲೆ ಹೆಚ್ಚಾಗಿ ಅವಲಂಬಿತವಾಗಿದೆ. ರಸ್ತೆ, ವಿಮಾನ ನಿಲ್ದಾಣ, ಬಂದರು, ವಿದ್ಯುತ್, ಚರಂಡಿ ವ್ಯವಸ್ಥೆ ಹಾಗೂ ನೀರು ಇತ್ಯಾದಿಗಳಿಲ್ಲದೆ ಪ್ರವಾಸೋದ್ಯಮ ಯೋಜನೆ ಹಾಗೂ ಅಭಿವೃದ್ಧಿ ಸಾಧ್ಯವೇ ಇಲ್ಲ. ಹೀಗಾಗಿ ಮೂಲಸೌಕರ್ಯ ಆಯಾಮವು ಪ್ರವಾಸೋದ್ಯಮ ಅಭಿವೃದ್ಧಿಯ ಅವಶ್ಯಕ ಅಂಶವಾಗಿದೆ ಮತ್ತು ಈ ಎಲ್ಲ ಅಂಶಗಳು ತಾಣವೊಂದಕ್ಕೆ ಪ್ರವಾಸಿಗರನ್ನು ಆಕರ್ಷಿಸಲು ಬೇಕಾಗಿರುವ ಪ್ರಾಥಮಿಕ ವಿಷಯಗಳಾಗಿವೆ. ಸಾಮಾನ್ಯವಾಗಿ, ಮೂಲಸೌಕರ್ಯವನ್ನು ಪ್ರಾಯೋಗಿಕ ಕೆಲಸಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ ಏಕೆಂದರೆ ಪ್ರವಾಸಿ ತಾಣವೊಂದರಲ್ಲಿ ಇದು ಸಹಜವಾಗಿ ಇರಬೇಕಾದ್ದೆಂದು ನಿರೀಕ್ಷಿಸಲಾಗುತ್ತದೆ ಮತ್ತು ಇದನ್ನೊಂದು ಆಕರ್ಷಣೆಯ ಅಂಶವೆಂದು ಉತ್ತೇಜಿಸಲಾಗಿಲ್ಲ. ಸ್ಮಿತ್ (1994), ಕ್ರೌಚ್ ಮತ್ತು ರಿಚಿ (1999) ಪ್ರವಾಸೋದ್ಯಮ ಉತ್ಪನ್ನ ಅನುಭವವನ್ನು ಸೃಜಿಸುವಲ್ಲಿ ಸೇವಾ ಮೂಲಸೌಕರ್ಯದ ಪಾತ್ರವೇನೆಂಬ ಕುರಿತು ಉತ್ತಮ ಸೈದ್ಧಾಂತಿಕ ಹಿನ್ನೆಲೆಯನ್ನು ಒದಗಿಸುತ್ತಾರೆ.

## ಭಾರತೀಯ ಮೂಲಸೌಕರ್ಯ ಮತ್ತು ಪ್ರವಾಸೋದ್ಯಮ


ಪ್ರವಾಸೋದ್ಯಮ ಮೂಲಸೌಕರ್ಯವು ಸಾರಿಗೆ, ಸಾಮಾಜಿಕ ಹಾಗೂ ಪಾರಿಸರಿಕ ಮೂಲಸೌಕರ್ಯಗಳ ಪೂರೈಕೆ ಸರಪಳಿಯಾಗಿದ್ದು ಪ್ರಾದೇಶಿಕ ಹಂತದಲ್ಲಿ ಈ ಕೆಳಗಿನ ಮೂಲಸೌಕರ್ಯಗಳನ್ನು ಪ್ರವಾಸಿ ತಾಣದಲ್ಲಿ ಸೃಷ್ಟಿಸಲು ಪ್ರಯತ್ನಿಸುತ್ತದೆ:

- **ಸಾಗಾಣಿಕಾ ಮೂಲಸೌಕರ್ಯ:** ಅಂತಾರಾಷ್ಟ್ರೀಯ ಮತ್ತು ದೇಶೀಯ ಮೂಲ ಮಾರುಕಟ್ಟೆಗಳಿಂದ ತಾಣಗಳಿಗೆ ತಲುಪಲು ಪ್ರವಾಸಿಗರಿಗೆ ಅನುವು ಮಾಡಿಕೊಡುತ್ತದೆ; ಇದು ವಿಮಾನ ನಿಲ್ದಾಣ, ಪ್ರಮುಖ ರಸ್ತೆಗಳು ಹಾಗೂ ರೈಲ್ವೆಯನ್ನು ಒಳಗೊಳ್ಳುತ್ತದೆ.
- **ಸಾಮಾಜಿಕ ಮೂಲಸೌಕರ್ಯ:** ಪ್ರವಾಸಿಗರು ಉಳಿದುಕೊಳ್ಳಲು ವಸತಿ ವ್ಯವಸ್ಥೆ ಮತ್ತು ವಸ್ತುಪ್ರದರ್ಶನ, ಕಾರ್ಯಕ್ರಮಗಳು ಹಾಗೂ ಪ್ರವಾಸಿಗರನ್ನು ಆಕರ್ಷಿಸುವ ಸೇವೆಗಳಿಗೆ ಭೌತಿಕ ಸೌಲಭ್ಯಗಳನ್ನು ಒದಗಿಸುತ್ತದೆ. ತಾಣವೊಂದರಲ್ಲಿರುವ ಹೊಟೆಲುಗಳು, ಸಭಾಂಗಣ, ಮೈದಾನ, ಗ್ಯಾಲರಿ ಹಾಗೂ ಪ್ರವಾಸಿ ಪರಿಸರವನ್ನು ಇದು ಒಳಗೊಳ್ಳುತ್ತದೆ.
- **ಪಾರಿಸರಿಕ ಮೂಲಸೌಕರ್ಯ:** ರಾಷ್ಟ್ರೀಯ ಉದ್ಯಾನಗಳು, ಸಾಗರ ಉದ್ಯಾನಗಳು, ಅಣೆಕಟ್ಟುಗಳು ಹಾಗೂ ಪ್ರವಾಸಿ ಸೌಕರ್ಯಗಳನ್ನು ಒಳಗೊಳ್ಳುತ್ತದೆ.
- **ಸಹಭಾಗಿತ್ವದ ಮೂಲಸೌಕರ್ಯ:** ಇದು ಪ್ರಾದೇಶಿಕ, ರಾಜ್ಯ ಹಾಗೂ ರಾಷ್ಟ್ರೀಯ ಪ್ರವಾಸೋದ್ಯಮ ಸಂಘಟನೆಗಳ ಜಾಲವಾಗಿದ್ದು ಪ್ರವಾಸಿ ತಾಣಗಳನ್ನು ಪ್ರವರ್ತಿಸುತ್ತದೆ ಮತ್ತು ಪ್ರವಾಸೋದ್ಯಮ ಉತ್ಪನ್ನವನ್ನು ವಿತರಿಸುತ್ತದೆ.

ಪ್ರವಾಸಿ ಮೂಲಸೌಕರ್ಯ ಹಾಗೂ ಉತ್ಪನ್ನದ ಪೂರೈಕೆ ಸರಪಣಿಯನ್ನು ಚಿತ್ರ–1ರಲ್ಲಿ ವಿವರಿಸಲಾಗಿದೆ. ಈ ಪ್ರವಾಸೋದ್ಯಮ ಮೂಲಸೌಕರ್ಯವು ಪ್ರಾಥಮಿಕವಾಗಿ ಖಾಸಗಿ ಬಂಡವಾಳದೊಂದಿಗೆ ನಿರ್ಮಿಸಿದುದಾಗಿದೆ; ಒಟ್ಟಾರೆ ಪ್ರವಾಸೋದ್ಯಮ ಹೂಡಿಕೆಯ ಶೇ. 78 ಭಾಗ ಖಾಸಗಿ ವಲಯದ್ದೇ ಆಗಿದೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು ಹಾಗೂ ವಾಸ್ತವ್ಯದ ವ್ಯವಸ್ಥೆಗಳು ಖಾಸಗಿಯವರವೇ ಆಗಿವೆ. ರಸ್ತೆ, ರೈಲ್ವೆ ಹಾಗೂ ಬಂದರುಗಳು ಸಾಮಾನ್ಯವಾಗಿ ಸರ್ಕಾರದ್ದಾಗಿರುತ್ತವೆ. ಸಭಾಂಗಣ ಮತ್ತು ರಾಷ್ಟ್ರೀಯ ಉದ್ಯಾನಗಳು ಸಾರ್ವಜನಿಕ ಆಸ್ತಿಗಳಾಗಿವೆ. ಚಿತ್ರ – 3 ಪ್ರವಾಸೋದ್ಯಮ ಸಂಬಂಧಿ ಮೂಲಸೌಕರ್ಯ ಹಾಗೂ ಪ್ರವಾಸೋದ್ಯಮ ಉತ್ಪನ್ನದ ರಫ್ತು ಗಳಿಕೆಯನ್ನು ವಿವರಿಸುತ್ತದೆ.

ಬಹುಶಃ ವಿವಿಧ ಬಗೆಯ ಪ್ರವಾಸೋದ್ಯಮವನ್ನು ನೀಡುತ್ತಿರುವ ದೇಶ ಭಾರತವೊಂದೇ ಎನಿಸುತ್ತದೆ. ಇದು ಪರ್ವತ, ಅರಣ್ಯ, ಇತಿಹಾಸ, ಸಾಹಸ ಪ್ರವಾಸೋದ್ಯಮ, ವೈದ್ಯಕೀಯ ಪ್ರವಾಸೋದ್ಯಮ (ಆಯುರ್ವೇದ ಮತ್ತಿತರ ಭಾರತೀಯ ವೈದ್ಯ ಪದ್ಧತಿಗಳು ಸೇರಿದಂತೆ), ಆಧ್ಯಾತ್ಮಿಕ ಪ್ರವಾಸೋದ್ಯಮ, ಬೀಚ್ ಪ್ರವಾಸೋದ್ಯಮ (ಭಾರತವು ಪೂರ್ವದಲ್ಲಿ

**ಚಿತ್ರ–2 : ತಾಣ ಸ್ಪರ್ಧಾತ್ಮಕತೆ ಮತ್ತು ಸುಸ್ಥಿರತೆ**



ಅತಿ ಉದ್ದ ಕಡಲ ಕಿನಾರೆಯನ್ನು ಹೊಂದಿದೆ) ಇತ್ಯಾದಿಗಳನ್ನು ಒಳಗೊಂಡಿದೆ.

ಬೇರೆ ದೇಶಗಳಿಗಿಂತ ಭಾರತದ ಪ್ರವಾಸಿ ತಾಣಗಳು ಹೆಚ್ಚು ವೈವಿಧ್ಯಮಯವಾಗಿವೆ ಎಂದು ಹೇಳಲಾಗಿದೆ. ಭಾರತದ ಪ್ರತಿಯೊಂದು ಪ್ರದೇಶವೂ ವಿಶಿಷ್ಟವಾದ ಸಂಸ್ಕೃತಿ, ಹಬ್ಬಗಳು/ಉಡುಗೆ ತೊಡುಗೆ, ಪಾರಂಪರಿಕ ಸ್ಮಾರಕಗಳು ಹಾಗೂ ಭವ್ಯ ಕಟ್ಟಡಗಳನ್ನು ಹೊಂದಿದೆ.

1990ರ ಆರಂಭದಿಂದಲೂ ಭಾರತೀಯ ಪ್ರವಾಸೋದ್ಯಮ ಅಷ್ಟೊಂದು ಉತ್ತೇಜಕವಾಗಿರಲಿಲ್ಲ. ಭಾರತೀಯ ಅರ್ಥವ್ಯವಸ್ಥೆ ನಿಧಾನವಾಗಿ ಸಾಗುತ್ತಿರುವುದಾದರೂ ಅದು ಜಗತ್ತಿನ ಬೇರೆ ಭಾಗಗಳಿಗಿಂತ ವೇಗವಾಗಿಯೇ ಇದೆ. ಭಾರತೀಯ ಆರ್ಥಿಕತೆಯು ವಾರ್ಷಿಕವಾಗಿ ಸುಮಾರು ಶೇ.5ರ ಬೆಳವಣಿಗೆಯನ್ನು ಸಾಧಿಸುವುದರೊಂದಿಗೆ ಮತ್ತು ಭಾರತೀಯರ ವಿಲೇವಾರಿ ಆದಾಯದಲ್ಲಿ ಹೆಚ್ಚಳವಾಗುವುದರೊಂದಿಗೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ದೇಶದ ಒಳಗೆ ಹಾಗೂ ಹೊರಗೆ ರಜಾ ಪ್ರವಾಸವನ್ನು ಕೈಗೊಳ್ಳುತ್ತಿದ್ದಾರೆ. ಇದರಿಂದಾಗಿ ಪ್ರವಾಸೋದ್ಯಮಕ್ಕೆ ಹೊಸ ರೆಕ್ಕೆಗಳು ಮೂಡಿವೆ. ಪ್ರವಾಸಿಗರನ್ನು ಆಕರ್ಷಿಸುವ ಭಾರತದ ಸಾಮರ್ಥ್ಯವು ಅಪರಿಮಿತವಾಗಿದೆ ಹಾಗೂ ಪ್ರವಾಸೋದ್ಯಮವು ಮುಂಬರುವ ವರ್ಷಗಳಲ್ಲಿ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಲಾಭದಾಯಕ ಪಾತ್ರವನ್ನು ನಿರ್ವಹಿಸಬಲ್ಲುದಾಗಿದೆ.

**ಪಟ್ಟಿ–1 : ಭಾರತಕ್ಕೆ ಆಗಮಿಸುವ ವಿದೇಶಿ ಪ್ರವಾಸಿಗರ ಪ್ರಮಾಣ : 2001–13**

| ವರ್ಷ | ಭಾರತಕ್ಕೆ ಆಗಮಿಸುವ ವಿದೇಶಿ ಪ್ರವಾಸಿಗರು | ವಾರ್ಷಿಕ ಬೆಳವಣಿಗೆ (%) |
|---|---|---|
| 2001 | 2537282 | –4.2 |
| 2002 | 2384364 | –6.0 |
| 2003 | 2726214 | 14.3 |
| 2004 | 3457477 | 26.8 |
| 2005 | 3918610 | 13.3 |
| 2006 | 4447167 | 13.5 |
| 2007 | 5081504 | 14.3 |
| 2008 | 5282603 | 4.0 |
| 2009 | 5167699 | –2.2 |
| 2010 | 5775692 | 11.8 |
| 2011 | 6309222 | 9.2 |
| 2012 | 6577745 | 4.3 |
| 2013 | 6967601 | 5. 9 |

ಮೂಲ : ಭಾರತ ಸರ್ಕಾರದ ವಲಸೆ ಶಾಖೆ

ಅಸಂಖ್ಯ ಸಮಸ್ಯೆಗಳು ಇದ್ದಾಗ್ಯೂ ಪ್ರವಾಸೋದ್ಯಮ ರಂಗವು ಭಾರತದ ಎರಡನೇ ಅತಿದೊಡ್ಡ ವಿದೇಶಿ ವಿನಿಮಯ ಗಳಿಕೆಯ ಮೂಲವಾಗಿತ್ತು. ಪ್ರವಾಸೋದ್ಯಮವು ಭಾರತದ ಸಮಗ್ರ ಆಂತರಿಕ ಉತ್ಪನ್ನದ ಶೇ. 6.6 ಭಾಗವನ್ನು ತಂದುಕೊಡುತ್ತದೆ ಮತ್ತು 2012ರಲ್ಲಿ 39.5 ಮಿಲಿಯನ್ ಉದ್ಯೋಗಗಳನ್ನು ಸೃಷ್ಟಿಮಾಡಿದೆ. ಕಳೆದ ಐದು ವರ್ಷಗಳಲ್ಲಿ ಭಾರತಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಶೇ. 16ರಷ್ಟು ಹೆಚ್ಚಾಗಿದೆ ಮತ್ತು ಮುಂದಿನ ದಶಕದಲ್ಲಿ ಇದು ಶೇ. 12ರ ದರದಲ್ಲಿ ಬೆಳವಣಿಗೆ ಸಾಧಿಸಬಹುದೆಂದು ನಿರೀಕ್ಷಿಸಲಾಗಿದೆ. 2013ರಲ್ಲಿ ಪ್ರಯಾಣ ಮತ್ತು ಪ್ರವಾಸ ಉದ್ದಿಮೆಯು ಆರ್ಥಿಕತೆಗೆ ರೂ. 63,160 ಕೋಟಿ ಕೊಡುಗೆ ನೀಡಿದೆ. ಭಾರತದ ಅಂತಾರಾಷ್ಟ್ರೀಯ ಪ್ರವಾಸಿಗರ ಸಂಖ್ಯೆ 5 ಮಿಲಿಯನ್‌ಗಿಂತ ಸ್ವಲ್ಪ ಹೆಚ್ಚಿದ್ದರೆ, ದೇಶೀ ಪ್ರವಾಸಿಗರ ಪ್ರಮಾಣ 500 ಮಿಲಿಯನ್‌ಗಿಂತಲೂ ಹೆಚ್ಚಿದೆ.

ಭಾರತದ ಪ್ರವಾಸೋದ್ಯಮ ಪ್ರಗತಿಯು ಕೇವಲ ವಿದೇಶಿ ಪ್ರವಾಸಿಗರ ಆಗಮನದ ಮೇಲೆ ಅವಲಂಬಿತವಾಗಿಲ್ಲವೆಂದು ಒಟ್ಟಾರೆ ಬೆಳವಣಿಗೆಯ ವಿನ್ಯಾಸವು ತೋರಿಸಿಕೊಡುತ್ತದೆ. ಇದೊಂದು ಉತ್ತಮ ಅಂಶ ಏಕೆಂದರೆ ಜಾಗತಿಕ ಕಾರಣಗಳು ಮತ್ತು ಅಡಚಣೆಗಳಿಂದಾಗಿ ಪ್ರವಾಸೋದ್ಯಮ ಪ್ರಗತಿಗೆ ಹಿನ್ನಡೆಯಾಗುವುದು ಸಾಮಾನ್ಯ. ನಮ್ಮ ದೇಶಿ ಪ್ರವಾಸೋದ್ಯಮವು ಸ್ಥಿರವಾದ ಪ್ರಗತಿಯನ್ನು ದಾಖಲಿಸಿದೆ. ಭಾರತದಲ್ಲಿ ಉತ್ಸವ–ಮೇಳಗಳು ಒಂದು ನಿರಂತರ ವಿದ್ಯಮಾನ. ಉತ್ತರದ ಕುಂಭಮೇಳ, ದಕ್ಷಿಣದ ಓಣಂ, ಮಹಾಮಸ್ತಕಾಭಿಷೇಕಗಳು ಹೆಚ್ಚುಕಡಿಮೆ ಪ್ರತಿ ವರ್ಷವೂ ಪ್ರವಾಸಿಗರನ್ನು ಹೊತ್ತು ತರುವ ವಿಶೇಷ ಸಂದರ್ಭಗಳಾಗಿವೆ.


ಅಗಾಧ ಪ್ರಾಕೃತಿಕ ಸೌಂದರ್ಯದ ಹೊರತಾಗಿಯೂ ಈಶಾನ್ಯ ರಾಜ್ಯಗಳು, ಲಕ್ಷದ್ವೀಪದಂತಹ ಅನೇಕ ರಾಜ್ಯಗಳು ಪ್ರವಾಸಿಗರನ್ನು ಸೆಳೆಯುವಲ್ಲಿ ವಿಫಲವಾಗಿವೆ ಎಂದು ಪಟ್ಟಿ – 2 ರಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಪ್ರವಾಸೋದ್ಯಮ ಮೂಲಸೌಕರ್ಯದ ಕೊರತೆಯೇ ಹೊರತು ಬೇರೆ ಯಾವ ಕಾರಣವೂ ಇಲ್ಲ.

ಜಾಗತಿಕ ಪ್ರಯಾಣ ಮತ್ತು ಪ್ರವಾಸೋದ್ಯಮ ಪರಿಷತ್ತಿನ ವರದಿಯೊಂದರ ಪ್ರಕಾರ, ಪ್ರವಾಸೋದ್ಯಮದಿಂದ ದೇಶದ ಆರ್ಥಿಕತೆಗೆ ಬರುವ ಆದಾಯ 2014ರಲ್ಲಿ ಶೇ. 7.3ರ ದರದಲ್ಲಿ ಹೆಚ್ಚುವ ನಿರೀಕ್ಷೆಯಿದೆ. ಇದು ಸಾಮಾನ್ಯ ಅರ್ಥವ್ಯವಸ್ಥೆಯ ಬೆಳವಣಿಗೆಗಿಂತ ಶೇ. 2.5 ಅಂಶಗಳಷ್ಟು ಹೆಚ್ಚಾಗಿದೆ.

ಡಿಲಾಯಿಟ್ ಟಚ್ ಪ್ರಕಾರ, ಭಾರತೀಯ ಪ್ರವಾಸೋದ್ಯಮ ಕ್ಷೇತ್ರವು 2017ರ ವೇಳೆಗೆ ಸುಮಾರು 42.8 ಬಿಲಿಯನ್ ಡಾಲರ್ ಆದಾಯ ಸೃಜಿಸಲಿದೆ. ನಿಧಾನಗತಿಯ ಆರ್ಥಿಕತೆ, ಕುಸಿದ ಬೇಡಿಕೆ ಹಾಗೂ ಭದ್ರತಾ ಆತಂಕಗಳ ನಡುವೆಯೂ ದೇಶವು ಅವುಗಳ ವಿರುದ್ಧ ಸೆಣಸುತ್ತಲೇ ಪ್ರವಾಸೋದ್ಯಮದಲ್ಲಿ ಪ್ರಗತಿಯನ್ನು ಸಾಧಿಸುತ್ತಿದೆ. 'ಹೆಚ್ಚಾಗುತ್ತಿರುವ ಜಾಗತಿಕ ಆರ್ಥಿಕ ಕುಸಿತದ ಹೊರತಾಗಿಯೂ ಭಾರತದ ಅರ್ಥವ್ಯವಸ್ಥೆ ಸದೃಢವಾಗಿದೆ ಮತ್ತು ಜಗತ್ತಿನ ಬೇರೆಡೆಯ ಅಭಿವೃದ್ಧಿ ದರಕ್ಕಿಂತ ಹೆಚ್ಚು ಬಲಿಷ್ಠವಾಗಿದೆ' ಎಂದಿದೆ ಡಿಲಾಯಿಟ್ ವರದಿ.

ಇದು ತುಂಬ ಕ್ಷಿಪ್ರವಾಗಿ ಇಂದು ಪರಿಮಾಣದ ಆಟವಾಗಿ ಬದಲಾಗುತ್ತಿದೆ. ಇಲ್ಲಿ ನಿತ್ಯ ಬೆಳೆಯುತ್ತಿರುವ ಭಾಗೀದಾರರು

**ಚಿತ್ರ–3**




ಕಾಂಡ್ ನಾಸ್ಟ್ ಸಮೀಕ್ಷೆ ಪ್ರಕಾರ ಭಾರತವು ಟಾಪ್–10 ಪ್ರವಾಸಿ ತಾಣಗಳ ಪಟ್ಟಿಯಲ್ಲಿದೆ.

| ಪಟ್ಟಿ – 2 : ಭಾರತದಲ್ಲಿ ದೇಶಿ ಹಾಗೂ ವಿದೇಶಿ ಪ್ರವಾಸಿಗರು (2012–13) | | | | | | | |
|---|---|---|---|---|---|---|---|
| ಕ್ರ. ಸಂ. | ರಾಜ್ಯ/ ಕೇಂದ್ರಾಡಳಿತ ಪ್ರದೇಶ | 2012 | | 2013 | | ಬೆಳವಣಿಗೆಯ ದರ | |
| | | ದೇಶಿ | ವಿದೇಶಿ | ದೇಶಿ | ವಿದೇಶಿ | ದೇಶಿ | ವಿದೇಶಿ |
| 1. | ಅಂಡಮಾನ್ & ನಿಕೋಬಾರ್ ದ್ವೀಪಗಳು | 238669 | 17538 | 243703 | 14742 | 2.10 | –15.94 |
| 2. | ಆಂಧ್ರಪ್ರದೇಶ | 207217952 | 292822 | 152102150 | 223518 | –26.60 | –23.67 |
| 3. | ಅರುಣಾಚಲ ಪ್ರದೇಶ | 132243 | 5135 | 125461 | 10846 | –5.13 | 111.22 |
| 4. | ಅಸ್ಸಾಂ | 4511407 | 17543 | 4684527 | 17638 | 3.84 | 0.54 |
| 5. | ಬಿಹಾರ | 21447099 | 1096933 | 21588306 | 765835 | 0.66 | –30.18 |
| 6. | ಚಂಡೀಗಢ | 924589 | 34130 | 22801031 | 936922 | 1.33 | 17.56 |
| 7. | ಛತ್ತೀಸ್‌ಗಢ | 15036530 | 4172 | 22801031 | 3886 | 51.64 | –6.86 |
| 8. | ದಾದ್ರ & ನಗರ್ ಹವೇಲಿ | 469213 | 1234 | 481618 | 1582 | 2.64 | 28.20 |
| 9. | ದಾಮನ್ & ಡಿಯು | 803963 | 4607 | 819947 | 4814 | 1.99 | 4.49 |
| 10. | ದೆಹಲಿ | 18495139 | 2345980 | 20215187 | 2301395 | 9.30 | –1.90 |
| 11. | ಗೋವಾ | 2337499 | 450530 | 2629151 | 492322 | 12.48 | 9.28 |
| 12. | ಗುಜರಾತ್ | 24379023 | 174150 | 27412517 | 198773 | 12.44 | 14.14 |
| 13. | ಹರ್‍ಯಾಣ | 6799242 | 233002 | 7128027 | 228200 | 4.84 | –2.06 |
| 14. | ಹಿಮಾಚಲ ಪ್ರದೇಶ | 15646048 | 500284 | 14715586 | 414249 | –5.95 | –17.20 |
| 15. | ಜಮ್ಮು & ಕಾಶ್ಮೀರ | 12427122 | 78802 | 13642402 | 60845 | 9.78 | –22.79 |
| 16. | ಜಾರ್ಖಂಡ್ | 20421016 | 31909 | 20511160 | 45995 | 0.44 | 44.14 |
| 17. | ಕರ್ನಾಟಕ | 94052729 | 595359 | 98010140 | 636378 | 4.21 | 6.89 |
| 18. | ಕೇರಳ | 10076854 | 793696 | 10857811 | 858143 | 7.75 | 8.12 |
| 19. | ಲಕ್ಷದ್ವೀಪ | 4417 | 580 | 4784 | 371 | 8.31 | –36.03 |
| 20. | ಮಧ್ಯಪ್ರದೇಶ | 53197209 | 275930 | 63110709 | 280333 | 18.64 | 1.60 |
| 21. | ಮಹಾರಾಷ್ಟ್ರ | 74816051 | 2651889 | 82700556 | 4156343 | 10.54 | 56.73 |
| 22. | ಮಣಿಪುರ | 134541 | 749 | 140673 | 1908 | 4.56 | 154.74 |
| 23. | ಮೇಘಾಲಯ | 680254 | 5313 | 691269 | 6773 | 1.62 | 27.48 |
| 24. | ಮಿಝೋರಾಂ | 64249 | 744 | 63377 | 800 | –1.36 | 7.53 |
| 25. | ನಾಗಾಲ್ಯಾಂಡ್ | 35915 | 2489 | 35638 | 3304 | –0.77 | 32.74 |
| 26. | ಒಡಿಶಾ | 9052871 | 64719 | 9800135 | 66675 | 8.25 | 3.02 |
| 27. | ಪುದುಚೇರಿ | 981714 | 52931 | 1000277 | 42624 | 1.89 | –19.47 |
| 28. | ಪಂಜಾಬ್ | 19056143 | 143805 | 21340888 | 204074 | 11.99 | 41.91 |
| 29. | ರಾಜಸ್ಥಾನ | 28611831 | 1451370 | 30298150 | 1437162 | 5.89 | –0.98 |
| 30. | ಸಿಕ್ಕಿಂ | 558538 | 26489 | 576749 | 31698 | 3.26 | 19.66 |
| 31. | ತಮಿಳುನಾಡು | 184136840 | 3561740 | 244232487 | 3990490 | 32.64 | 12.04 |
| 32. | ತ್ರಿಪುರ | 361786 | 7840 | 359586 | 11853 | –0.61 | 51.19 |
| 33. | ಉತ್ತರ ಪ್ರದೇಶ | 168381276 | 1994495 | 226531091 | 2054420 | 34.53 | 3.00 |
| 34. | ಉತ್ತರಾಖಂಡ | 26827329 | 124555 | 19941128 | 97683 | –25.67 | –21.57 |
| 35. | ಪಶ್ಚಿಮ ಬಂಗಾಳ | 22730205 | 1219610 | 25547300 | 1245230 | 12.39 | 2.10 |
| | ಒಟ್ಟು | 1045047536 | 18263074 | 1145280443 | 19951026 | 9.59 | 9.24 |

ಮೂಲ : ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯ, ಪ್ರವಾಸೋದ್ಯಮ ಅಂಕಿಅಂಶಗಳು 2013

ಉದ್ಯಮ ರಂಗದ ಪ್ರತಿನಿಧಿಗಳ (ಅಂದರೆ ಹೋಟೆಲುಗಳು, ಪ್ರವಾಸ ಪ್ರತಿನಿಧಿಗಳು, ವಿಮಾನಯಾನ ಸಂಸ್ಥೆಗಳು, ಹಡಗು ಪ್ರಯಾಣ ಸಂಸ್ಥೆಗಳು) ಆದಾಯವನ್ನು ಹೆಚ್ಚಿಸುತ್ತಿದ್ದಾರೆ. ಇದು ದೇಶದಲ್ಲಿ ಹೆಚ್ಚು ವಸತಿ ಕೊಠಡಿಗಳ ಅನುಭೋಗ ಹಾಗೂ ಹೆಚ್ಚು ಸರಾಸರಿ ಕೊಠಡಿ ಆದಾಯ (ಎಆರ್‌ಆರ್)ಕ್ಕೆ ಕಾರಣವಾಗಬಲ್ಲುದು. ಸರಾಸರಿ ಕೊಠಡಿ ಆದಾಯ ಮತ್ತು ಕೊಠಡಿಗಳ ಅನುಭೋಗ ದರವೂ ಹೆಚ್ಚಾಗಿದೆ.

ಆದ್ದರಿಂದ ಪ್ರವಾಸೋದ್ಯಮ ರಂಗವು ಭವಿಷ್ಯದಲ್ಲಿ ಇನ್ನೂ ಹೆಚ್ಚು ಬೆಳೆಯುವ ನಿರೀಕ್ಷೆಯಿದೆ. ಅಲ್ಲದೆ ಪ್ರವಾಸೋದ್ಯಮ ಕ್ಷೇತ್ರವು ದೀರ್ಘಾವಧಿ ಹೂಡಿಕೆದಾರರಿಗೆ ಆಕರ್ಷಕ ಹೂಡಿಕೆಯ ಅವಕಾಶವನ್ನೂ ಒದಗಿಸುತ್ತಿದೆ. ಭಾರತದ ಸಂಭಾವ್ಯ ಸಾಮರ್ಥ್ಯವನ್ನು ಮನಗಂಡಿರುವ ಅಂತಾರಾಷ್ಟ್ರೀಯ ಹಾಗೂ ಸ್ವದೇಶಿ ಹೋಟೇಲ್ ಸರಪಣಿಗಳು ಅದನ್ನು ತಮ್ಮದಾಗಿಸಿಕೊಳ್ಳಲು ಶ್ರಮಿಸುತ್ತಿವೆ. ವೈದ್ಯಕೀಯ ಪ್ರವಾಸೋದ್ಯಮವು ಮುಂದಿನ ದಿನಗಳಲ್ಲಿ ಭಾರೀ ಪ್ರಗತಿಯನ್ನು ಸಾಧಿಸಲಿದ್ದು ಭಾರತವು ಈ ಬಹು–ಬಿಲಿಯನ್ ಡಾಲರ್ ಮಾರುಕಟ್ಟೆಗೆ ಗ್ರಾಹಕರನ್ನು ಆಕರ್ಷಿಸುವ ಉದ್ದೇಶದಿಂದ ಪ್ರಥಮ–ದರ್ಜೆಯ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಕಾರ್ಯನಿರತವಾಗಿದೆ.

ವಸತಿ, ಸಾರಿಗೆ ಹಾಗೂ ಮನರಂಜನಾ ಸೌಲಭ್ಯಗಳು ಒಂದು ಪ್ರವಾಸಿ ತಾಣದ ಪ್ರಮುಖ ಅಂಶಗಳು. ತಾಣವೊಂದಕ್ಕೆ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಅವು ಮೌಲ್ಯಯುತ ಆಸ್ತಿಗಳಾಗುತ್ತವೊ ಅಥವಾ ಅಡೆತಡೆಗಳಾಗುತ್ತವೊ ಎಂಬುದನ್ನು ಈ ಸೌಲಭ್ಯಗಳ ರಾಷ್ಟ್ರೀಯ ಇಲ್ಲವೇ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕತೆಗಳು ನಿರ್ಧರಿಸುತ್ತವೆ. ಅಂತಹ ಮೂಲಸೌಕರ್ಯಗಳ ಪ್ರಸಕ್ತ ಸ್ಥಿತಿಗತಿಯ ವಿವರವಾದ ಮಾಹಿತಿಯ ಆಧಾರದಲ್ಲಿ ಒಂದು ತಾಣದ ಒಟ್ಟಾರೆ ಆಕರ್ಷಣೆಯನ್ನು ಹೆಚ್ಚಿಸುವ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ.

ಭಾರತದಲ್ಲಿ ಪ್ರವಾಸೋದ್ಯಮದ ಕ್ಷಿಪ್ರ ಪ್ರಗತಿಯಿಂದಾಗಿ ಪ್ರವಾಸೋದ್ಯಮ ರಂಗದಲ್ಲಿ ಅದ್ಭುತ ಯಶಸ್ಸು ಕಾಣಿಸಿತು. ಈ ಬೆಳವಣಿಗೆಯನ್ನು ಹೇಗೆ ಸುಸ್ಥಿರಗೊಳಿಸುವುದೆಂದು ಪ್ರತಿಯೊಬ್ಬರೂ ಯೋಚಿಸುತ್ತಿದ್ದರು. ನಿಜವಾಗಿಯೂ, ಪ್ರವಾಸೋದ್ಯಮದ ಗಳಿಕೆ ತುಂಬ ದೊಡ್ಡ ಮಟ್ಟದ್ದು (ಅದೊಂದು ಟ್ರಿಲಿಯನ್ ಡಾಲರ್ ಉದ್ಯಮ). ಇದರಿಂದಾಗಿ ಭಾರತವು ಅತಿದೊಡ್ಡ ವಿದೇಶಿ ವಿನಿಮಯ ಗಳಿಕೆ ಹಾಗೂ ಉದ್ಯೋಗ ಸೃಷ್ಟಿಯ ದೇಶವಾಗಿ ಹೊರಹೊಮ್ಮಿದೆ.

ಭಾರತವು ಉತ್ತಮ ರಸ್ತೆಗಳನ್ನು ಹೊಂದಿಲ್ಲವೆಂಬುದು ಸುಸ್ಪಷ್ಟ. ಕೇವಲ 12% ಮಾತ್ರ ಜಾಗತಿಕ ಮಾನದಂಡಗಳನ್ನು ಪೂರೈಸುತ್ತವೆ. ಇದು ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವುದಕ್ಕೆ ತುಂಬ ಕಡಿಮೆಯಾಯಿತು. ಇಡೀ ಯುರೋಪ್ ಪ್ರವಾಸ ಉದ್ದೇಶಕ್ಕೆ ರಸ್ತೆಗಳ ಮೂಲಕವೇ ಪ್ರಯಾಣಿಸಲು ಇಚ್ಛಿಸುತ್ತದೆ; ಆದರೆ ಭಾರತೀಯರು ರಸ್ತೆ ಪ್ರಯಾಣಕ್ಕೆ ಮುನ್ನ ಅನೇಕ ಬಾರಿ ಯೋಚಿಸಬೇಕಿದೆ. ಅಲ್ಲದೆ ಅಶಿಸ್ತಿನ ಚಾಲನೆಯೂ ಹೆಚ್ಚು ಅಪಾಯಕಾರಿಯಾಗಿದೆ. ರಸ್ತೆ ಅಪಘಾತಗಳಲ್ಲಿ ಅತಿಹೆಚ್ಚಿನ ರ್‍ಯಾಂಕಿಂಗ್ ಹೊಂದಿರುವ ದೇಶಗಳ ಪೈಕಿ ಭಾರತವೂ ಒಂದು.

ಸುಮಾರು ಶೇ. 28 ರೈಲ್ವೆ ಮಾರ್ಗ, ಶೇ. 39 ಬಳಕೆಯಲ್ಲಿರುವ ಹಳಿ ಹಾಗೂ ಶೇ. 41 ಒಟ್ಟಾರೆ ಹಳಿ ವಿದ್ಯುದೀಕರಣಗೊಂಡಿದೆ.

**ಪಟ್ಟಿ – 3 : ಟಾಪ್–15 ಮಾರುಕಟ್ಟೆಗಳಿಂದ ವಿದೇಶಿ ಪ್ರವಾಸಿಗರ ಆಗಮನ (2013)**

(ಸಂಖ್ಯೆ ಮಿಲಿಯನ್‌ಗಳಲ್ಲಿ ಹಾಗೂ ಪ್ರಮಾಣ ಶೇಕಡಾದಲ್ಲಿ)

| ಕ್ರ. ಸಂ. | ವಿದೇಶಿ ಮೂಲ | ಸಂಖ್ಯೆ ಮತ್ತು ಪ್ರಮಾಣ |
|---|---|---|
| 1. | ಯುಎಸ್‌ಎ | 1.085 (15.58%) |
| 2. | ಇಂಗ್ಲೆಂಡ್ | 0.809 (11.62%) |
| 3. | ಬಾಂಗ್ಲಾದೇಶ | 0.525 (7.53%) |
| 4. | ಶ್ರೀಲಂಕಾ | 0.262 (3.77%) |
| 5. | ರಷ್ಯಾ ಒಕ್ಕೂಟ | 0.259 (3.72%) |
| 6. | ಕೆನಡಾ | 0.255 (3.66%) |
| 7. | ಜರ್ಮನಿ | 0.252 (3.62%) |
| 8. | ಫ್ರಾನ್ಸ್ | 0.248 (3.56%) |
| 9. | ಮಲೇಶಿಯಾ | 0.243 (3.48%) |
| 10. | ಜಪಾನ್ | 0.220 (3.16%) |
| 11. | ಆಸ್ಟ್ರೇಲಿಯಾ | 0.219 (3.14%) |
| 12. | ಚೀನಾ | 0.175 (2.51%) |
| 13. | ಸಿಂಗಪುರ | 0.143 (2.05%) |
| 14. | ಥೈಲ್ಯಾಂಡ್ | 0.117 (1.68%) |
| 15. | ನೇಪಾಳ | 0.114 (1.63%) |
| 16. | ಟಾಪ್–10 ದೇಶಗಳ ಪಾಲು | 4.160 (59.70%) |
| 17. | ಟಾಪ್–15 ದೇಶಗಳ ಪಾಲು | 4.927 (70.72%) |

ಮೂಲ : ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯ, ಪ್ರವಾಸೋದ್ಯಮ ಅಂಕಿಅಂಶಗಳು 2013

**ಪಟ್ಟಿ – 4 : ಪ್ರವಾಸೋದ್ಯಮ ಶುಲ್ಕಗಳು, ಮಿಲಿಯನ್ ರೂ.ಗಳಲ್ಲಿ**

| | ಶುಲ್ಕ ರೂ.ಗಳಲ್ಲಿ | | ಶುಲ್ಕ ಯುಎಸ್ ಡಾಲರ್‌ಗಳಲ್ಲಿ | |
|---|---|---|---|---|
| ವರ್ಷ | ಕೋಟಿ ರೂ.ಗಳಲ್ಲಿ | ಹಿಂದಿನ ವರ್ಷಕ್ಕಿಂತ ಶೇಕಡಾವಾರು ಬದಲಾವಣೆ | ಯುಎಸ್ ಮಿಲಿಯನ್ ಡಾಲರ್‌ಗಳಲ್ಲಿ | ಹಿಂದಿನ ವರ್ಷಕ್ಕಿಂತ ಶೇಕಡಾವಾರು ಬದಲಾವಣೆ |
| 2009 | 63700 | 4.5 | 11136 | –3.7 |
| 2010 | 64889 | 20.8 | 14193 | 27.6 |
| 2011 | 77591 | 19.6 | 16564 | 16.7 |
| 2012 | 94487 | 21.8 | 17737 | 7.1 |
| 2013 | 107671 | 14.0 | 18445 | 4.0 |

ಮೂಲ : ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯ, ಮಾರುಕಟ್ಟೆ ಸಂಶೋಧನಾ ವಿಭಾಗ, ಪ್ರವಾಸೋದ್ಯಮ ಅಂಕಿಅಂಶಗಳು 2013

### ಅಂತರ್ದೇಶೀಯ ಜಲಸಾರಿಗೆ

ಭಾರತವು ನದಿ, ಕಾಲುವೆ, ಹಿನ್ನೀರು, ಖಾರಿ ಇತ್ಯಾದಿಗಳನ್ನೊಳಗೊಂಡಂತೆ ಪ್ರಯಾಣಕ್ಕೆ ಲಭ್ಯವಿರುವ ಸುಮಾರು 14,500 ಕಿ.ಮೀ. ಉದ್ದದ ಜಲಮಾರ್ಗವನ್ನು ಹೊಂದಿದೆ. 2006–07ರಲ್ಲಿ ಸುಮಾರು 50 ಮಿಲಿಯನ್ ಟನ್‌ಗಳಷ್ಟು ಸರಕನ್ನು ಅಂತರ್ದೇಶೀಯ ಜಲ ಸಾರಿಗೆಯ ಮೂಲಕ ಸಾಗಿಸಲಾಯಿತು. ಪ್ರಸ್ತುತ ಇದರ ಚಟುವಟಿಕೆಗಳು ಗಂಗಾ–ಭಾಗೀರಥಿ–ಹೂಗ್ಲಿ ನದಿಗಳ ಕೆಲವು ಭಾಗಗಳು, ಬ್ರಹ್ಮಪುತ್ರ, ಬರಕ್ ನದಿ, ಗೋವಾದ ನದಿಗಳು ಕೇರಳದ ಹಿನ್ನೀರು ಪ್ರದೇಶ, ಮುಂಬೈಯ ಅಂತರ್ದೇಶೀಯ ಜಲಮಾರ್ಗಗಳು ಹಾಗೂ ಗೋದಾವರಿ–ಕೃಷ್ಣಾ ನದಿ ಮುಖಜಭೂಮಿ ಪ್ರದೇಶಗಳಿಗೆ ಸೀಮಿತವಾಗಿದೆ. ಅಲ್ಲದೆ ಯಾಂತ್ರೀಕೃತ ದೋಣಿಗಳು ಹಾಗೂ ವಿವಿಧ ಸಾಮರ್ಥ್ಯಗಳ ನಾಡದೋಣಿಗಳು ಹಲವು ನದಿ ಮತ್ತು ಕಾಲುವೆಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಅಸಂಘಟಿತ ಕ್ಷೇತ್ರದಲ್ಲಿನ (ಅಂದರೆ ನಾಡದೋಣಿ ಇತ್ಯಾದಿ) ಸರಕು ಹಾಗೂ ಪ್ರಯಾಣಿಕರ ಚಲನೆಯ ಅಂಕಿಅಂಶಗಳು ಲಭ್ಯವಿಲ್ಲ. ಆದರೆ ಅಸಂಘಟಿತ ಕ್ಷೇತ್ರದ ಮೂಲಕವೂ ಗಣನೀಯ ಪ್ರಮಾಣದ ಸರಕು ಹಾಗೂ ಪ್ರಯಾಣಿಕರ ಸಾಗಾಣಿಕೆ ಸಾಧ್ಯವಾಗಿರುವುದು ನಿಜ.

### ಭಾರತದಲ್ಲಿನ ವಿಮಾನ ನಿಲ್ದಾಣಗಳು

ಭಾರತದಲ್ಲಿ 46 ವಿಮಾನ ನಿಲ್ದಾಣಗಳಿವೆ; ಆದರೆ ದೇಶದ ಇತರ ಭಾಗಗಳನ್ನು ಸಂಪರ್ಕಿಸುವ ನಿಲ್ದಾಣಗಳ ಸಂಖ್ಯೆ ಕಡಿಮೆಯಿದೆ. ಇದರಿಂದಾಗಿ, ವಿಮಾನಯಾನಕ್ಕೆ ತಗಲುವ ಸಮಯವು ರೈಲ್ವೆ ಪ್ರಯಾಣದ ಸಮಯಕ್ಕಿಂತಲೂ ಅನೇಕ ಪಟ್ಟು ಹೆಚ್ಚಾಗಿದೆ. ಉದಾಹರಣೆಗೆ ಒಬ್ಬರು ಆಗ್ರಾದಿಂದ ವಾರಣಾಸಿ ಅಥವಾ ಜೈಪುರಕ್ಕೆ ವಿಮಾನದ ಮೂಲಕ ಪ್ರಯಾಣಿಸಬೇಕೆಂದಿದ್ದರೆ ಇನ್ನೊಂದು ವಿಮಾನವೇರುವ ಮುನ್ನ ಅವರು ದೆಹಲಿಗೆ ಹೋಗಲೇಬೇಕಾಗುತ್ತದೆ.

**ಪಟ್ಟಿ – 5 : ಭಾರತದಲ್ಲಿರುವ ಒಟ್ಟು ಹೊಟೆಲುಗಳು ಮತ್ತು ಹೊಟೆಲು ಕೊಠಡಿಗಳು (ಭಾರತ ಸರ್ಕಾರದ ಮಾನ್ಯತೆ ಪಡೆದವುಗಳು)**

**ಮಾನ್ಯತೆ ಪಡೆದ ಹೊಟೆಲುಗಳು ಮತ್ತು ಲಭ್ಯವಿರುವ ಹೊಟೆಲು ಕೊಠಡಿಗಳ ಸಂಖ್ಯೆ–2013**

| ಹೊಟೆಲ್ ವರ್ಗ | ಹೊಟೆಲುಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ |
|---|---|---|
| ಒನ್–ಸ್ಟಾರ್ | 82 | 2086 |
| ಟು–ಸ್ಟಾರ್ | 121 | 3154 |
| ತ್ರೀ–ಸ್ಟಾರ್ | 637 | 26617 |
| ಫೋರ್–ಸ್ಟಾರ್ | 111 | 7738 |
| ಪಂಚತಾರಾ | 85 | 10128 |
| ಪಂಚತಾರಾ ಡಿಲಕ್ಸ್ | 106 | 21820 |
| ಅಪಾರ್ಟ್‌ಮೆಂಟ್ ಹೊಟೇಲ್‌ಗಳು | 3 | 249 |
| ರೆಸಾರ್ಟ್‌ಗಳು | 1 | 31 |
| ಪಾರಂಪರಿಕ ಹೊಟೇಲುಗಳು | 46 | 1322 |
| ಕಿರು ವಸತಿಗೃಹಗಳು | 31 | 158 |
| ಅತಿಥಿಗೃಹಗಳು | 4 | 61 |
| ಅವರ್ಗೀಕೃತ | 30 | 1989 |

ಮೂಲ : ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯ, ಮಾರುಕಟ್ಟೆ ಸಂಶೋಧನಾ ವಿಭಾಗ, ಪ್ರವಾಸೋದ್ಯಮ ಅಂಕಿಅಂಶಗಳು 2013

ಭಾರತವು ಈ ಪ್ರವಾಸೋದ್ಯಮ ಕ್ರಾಂತಿಯ ಲಾಭ ಪಡೆದುಕೊಳ್ಳದೇ ಹೋದರೆ ಮುಂದೆ ತನ್ನನ್ನು ತಾನೇ ಹಳಿದುಕೊಳ್ಳಬೇಕಾದೀತಷ್ಟೆ. ಕೆಲವೇ ಕೆಲವು ಉಪಕ್ರಮಗಳಿಂದ ಭಾರತವು ಉದಯಿಸುತ್ತಿರುವ ಈ ರಂಗದಿಂದ ನಿಜವಾಗಿಯೂ ಲಾಭಗಳನ್ನು ಪಡೆದುಕೊಳ್ಳಬಹುದು. ವಿಮಾನ ನಿಲ್ದಾಣಗಳು, ರೈಲ್ವೆ, ಭೂಸಾರಿಗೆ, ವಸತಿ, ತರಬೇತಿ ಪಡೆದ ಮಾನವ ಸಂಪನ್ಮೂಲ, ಸುಲಭ ಶಾಪಿಂಗ್, ಪ್ರಯಾಣ, ವೈದ್ಯಕೀಯ ಪ್ರವಾಸೋದ್ಯಮ, ಪ್ರವಾಸೋದ್ಯಮ ಶಿಕ್ಷಣ, ಸುಸ್ಥಿರ ಅಭಿವೃದ್ಧಿ ನಿಯಮಗಳು ಇತ್ಯಾದಿ ಪ್ರವಾಸೋದ್ಯಮದ ಎಲ್ಲ ಆಯಾಮಗಳಲ್ಲೂ ಮೂಲಸೌಕರ್ಯದ ಕೊರತೆ ಎದ್ದು ಕಾಣಿಸುತ್ತಿದೆ.

ತೆರಿಗೆ, ಖಾಸಗಿ ವಲಯಕ್ಕೆ ಉತ್ತೇಜನ, ವಿದೇಶಿ ಹೂಡಿಕೆಗೆ ಏಕಗವಾಕ್ಷಿ ಪರವಾನಗಿಗಾಗಿ ವಿಶೇಷ ನಿಯಮಗಳು, ಜಮೀನಿನ ಒದಗಣೆ, ಬ್ಯಾಂಕ್ ಹಣಕಾಸು ನೆರವು ವಿಶೇಷತಃ ಕಡಿಮೆ ಬಡ್ಡಿ ದರದಲ್ಲಿ ದೀರ್ಘಾವಧಿ ಸಾಲ, ದೇಶದಲ್ಲಿ ವಿದೇಶಿ ವಿನಿಮಯದ ಸುಲಲಿತ ಹರಿವು, ವೃತ್ತಿಪರರನ್ನು ಬಳಸಿಕೊಳ್ಳುವುದು ಮತ್ತು ಅಧಿಕಾರಿಗಳ ಹಸ್ತಕ್ಷೇಪ ಇಲ್ಲದಿರುವಿಕೆ ಅಥವಾ ಅಧಿಕಾರಶಾಹಿಯಿಂದ ಮುಕ್ತಿ – ಇತ್ಯಾದಿಗಳಿಗೆ ಆದ್ಯತೆ ನೀಡುವ ಮೂಲಕ ಪ್ರವಾಸೋದ್ಯಮ ರಂಗವು ಮೂಲಸೌಕರ್ಯ ಅಭಿವೃದ್ಧಿಯತ್ತ ಹೆಜ್ಜೆಯಿಡಬಹುದು. ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ಇದುವೇ ಸರಿಯಾದ ಮತ್ತು ಏಕೈಕ ವಿಧಾನ.

ಭಾರತವನ್ನೊಂದು ಪರ್ಯಾಯ ಪ್ರವಾಸಿ ತಾಣವನ್ನಾಗಿ ಬಿಂಬಿಸುವ

**ಪಟ್ಟಿ – 6 : ಭಾರತೀಯ ರಸ್ತೆಗಳು**

| | |
|---|---|
| ರಾಷ್ಟ್ರೀಯ ಹೆದ್ದಾರಿಗಳು/ಎಕ್ಸ್‌ಪ್ರೆಸ್‌ವೇಗಳು | 65,590 ಕಿ.ಮೀ. |
| ರಾಜ್ಯ ಹೆದ್ದಾರಿಗಳು | 1,28,000 ಕಿ.ಮೀ. |
| ಪ್ರಧಾನ ಮತ್ತು ಇತರ ಜಿಲ್ಲಾ ರಸ್ತೆಗಳು | 4,70,000 ಕಿ.ಮೀ. |
| ಗ್ರಾಮೀಣ ರಸ್ತೆಗಳು | 26,50,000 ಕಿ.ಮೀ. |

ಮೂಲ : http://www.ibef.org/industry/roads-india.aspx

| ಪಟ್ಟಿ – 7 : ಭಾರತದಲ್ಲಿ ರೈಲ್ವೆ | | | |
|---|---|---|---|
| **ಗೇಜ್** | **ಮಾರ್ಗ ಕಿ.ಮೀ.ಗಳಲ್ಲಿ** | **ಬಳಕೆಯಾಗುವ ಹಳಿಯ ಉದ್ದ ಕಿ.ಮೀ.ಗಳಲ್ಲಿ** | **ಹಳಿಗಳ ಒಟ್ಟು ಉದ್ದ ಕಿ.ಮೀ.ಗಳಲ್ಲಿ** |
| ಬ್ರಾಡ್‌ಗೇಜ್ (1.676 ಮಿ. ಮೀ) | 49,820 | 71,015 | 93,386 |
| ಮೀಟರ್‌ಗೇಜ್ (1.000 ಮಿ. ಮೀ) | 10,621 | 11,487 | 13,412 |
| ನ್ಯಾರೋಗೇಜ್ (762 ಮಿ. ಮೀ ಮತ್ತು 610 ಮಿ. ಮೀ) | 2,886 | 2,888 | 3,198 |
| ಮೂಲ: http://www.ibef.org/industry/roads-india.aspx | | | |

ಪ್ರಯತ್ನ ಮಾಡಿದ ಬಹುನಿರೀಕ್ಷಿತ ಸರ್ಕಾರಿ ಪ್ರಾಯೋಜಿತ 'ಅತುಲ್ಯ ಭಾರತ' ಆಂದೋಲನದ ನಂತರವೂ ಖಂಡಗಾತ್ರದ ಈ ದೇಶದಲ್ಲಿ ಪ್ರವಾಸೋದ್ಯಮ ರಂಗವು ತನ್ನ ಹೆಜ್ಜೆಗುರುತುಗಳನ್ನು ಮೂಡಿಸಬೇಕಾಗಿದೆ. ನಮ್ಮಲ್ಲಿನ ಮೂಲಸೌಕರ್ಯ ಕೊರತೆಯನ್ನು ನೀಗಿಸಿಕೊಳ್ಳುವುದೇ ನಾವು ಅಭಿವೃದ್ಧಿ ಹೊಂದಬಹುದಾದ ಏಕೈಕ ಮಾರ್ಗ.

ನಾವು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವವರೆಗೆ ನಮ್ಮ ಪ್ರವಾಸಿಗರ ಸಂಖ್ಯೆ 5 ಅಥವಾ 6 ಮಿಲಿಯನ್‌ಗಳಲ್ಲೇ ಉಳಿದುಬಿಟ್ಟೀತು. ಎಲ್ಲ ರಾಜ್ಯಗಳೂ ಜಾಗತಿಕ ಗುಣಮಟ್ಟದ ಪ್ರವಾಸಿ ಮೂಲಸೌಕರ್ಯಗಳನ್ನು ಹೊಂದಲು ಅನುಕೂಲವಾಗುವಂತೆ ನಮ್ಮ ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ನಿಯಮಾವಳಿಗಳನ್ನು ಹೊರಡಿಸಿರುವುದು ಸಂತೋಷದ ಸಂಗತಿ. ಈ ನಿಯಮಾವಳಿಗಳ ರೂಪುರೇಖೆ ನಾವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದೇವೆಂದು ಸೂಚಿಸುತ್ತದೆ.

**ನಿಯಮಾವಳಿಗಳ ರೂಪುರೇಖೆ**

1. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಸಾಧ್ಯವಾದಷ್ಟು ಸಂರಕ್ಷಣಾ ಹಾಗೂ ಭೂ ವಾಸ್ತುಶಿಲ್ಪಿಗಳು ಸೇರಿದಂತೆ ಹೆಚ್ಚು ವಾಸ್ತುಶಿಲ್ಪಿಗಳನ್ನು ನಿಯಮಾನುಸಾರವಾಗಿ ನೇಮಿಸಿಕೊಳ್ಳಬೇಕು ಮತ್ತು ಈ ಉದ್ದೇಶಕ್ಕೆ ಅವರು ತಮ್ಮದೇ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು.
2. ಪ್ರವಾಸೋದ್ಯಮ ಸಂಬಂಧಿ ಯೋಜನೆಗಳಿಗೆ ಏಕಗವಾಕ್ಷಿ ಪರವಾನಗಿ ನೀಡಲು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಪ್ರಯತ್ನ ಮಾಡಬೇಕು.
3. ಬೃಹತ್ ತಾಣ ಯೋಜನೆಗಳು/ಪಥಗಳ ಅಡಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸುವಾಗ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಜೆಎನ್ಎನ್‌ಯುಆರ್‌ಎಂ ಜತೆಗೆ ಸಹಯೋಗ ಹೊಂದಲು ಪ್ರಯತ್ನಿಸಬೇಕು.

**ನಗರ ನಾಗರಿಕ ಸೌಲಭ್ಯಗಳು**

1. ರಾಜ್ಯಗಳು ಎಲ್ಲ ಬಳಕೆದಾರರಿಗೂ ಅನುಕೂಲವಾಗುವಂತೆ ಪ್ರವಾಸಿ ತಾಣಗಳ ಸುತ್ತಮುತ್ತ ಅಡೆತಡೆಗಳಿಲ್ಲದ ಪರಿಸರವೂ ಸೇರಿದಂತೆ ಸರ್ವಋತು ಸಂಪರ್ಕಜಾಲಗಳನ್ನು ಸೃಷ್ಟಿಸಬೇಕು.
2. ಈ ಮುಂದಿನವುಗಳಿಗೆ ಸೂಕ್ತ ಗಮನವನ್ನು ನೀಡಬೇಕು:
   - ✧ ವಿನ್ಯಾಸ ನಿಯಮಗಳು, ಸೌಂದರ್ಯಶಾಸ್ತ್ರ ಹಾಗೂ ಮಾನವಮಾಪನಶಾಸ್ತ್ರ, ವಸ್ತುಗಳ ಆಯ್ಕೆ, ನಿರ್ಮಾಣ, ಬಾಳಿಕೆ, ಹವಾ ಪರಿಣಾಮ ಮತ್ತು ನಿರ್ವಹಣೆ.
   - ✧ ಸೂಚನಾ ಫಲಕಗಳು: ಸಾಕಷ್ಟು ಮತ್ತು ಸರಿಯಾದ ಜಾಗಗಳಲ್ಲಿ.
   - ✧ ಕಸದ / ಮರುಬಳಕೆಯ ತೊಟ್ಟಿಗಳು
   - ✧ ಮಾಹಿತಿ / ಮಾರ್ಗದ ಸೂಚನೆಗಳು
   - ✧ ಸಾರ್ವಜನಿಕ ಶೌಚಾಲಯಗಳು
   - ✧ ದ್ವಿಚಕ್ರ ವಾಹನಗಳೂ ಸೇರಿದಂತೆ ಎಲ್ಲ ವಾಹನಗಳ ನಿಲುಗಡೆ ಹಾಗೂ ಅಂಗವಿಕಲರಿಗೆ ಪ್ರತ್ಯೇಕ ವಾಹನ ನಿಲುಗಡೆ ವ್ಯವಸ್ಥೆ
3. ಉನ್ನತ ಗುಣಮಟ್ಟದ ಪ್ರವಾಸಿ ನಕಾಶೆಗಳು, ಮಾರ್ಗದರ್ಶಿಕೆಗಳು, ಸಿಡಿಗಳು, ಭಿತ್ತಿಚಿತ್ರಗಳು, ಪ್ರವಾಸಿ ಕ್ಯಾಲೆಂಡರುಗಳು, ಮಡಚಿ ಒಯ್ಯಬಹುದಾದ ಭೂಪಟಗಳು ಮುಂತಾದವುಗಳನ್ನು ಆಗಾಗ್ಗೆ ಉಚಿತವಾಗಿ ವಿತರಿಸುವುದನ್ನು, ಅಲ್ಲದೆ ಭಾರತದ ರೋಮಾಂಚಕ ಹಾಗೂ ವೈವಿಧ್ಯಮಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಗ್ರಾಫಿಕ್ ಪ್ರದರ್ಶನವನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಉತ್ತೇಜಿಸಬೇಕು.
4. ಅನುಷ್ಠಾನಗೊಳಿಸುವ ಸಂಸ್ಥೆಗೆ ಜಮೀನು ಲಭ್ಯವಿದೆ ಎಂಬುದನ್ನು ವಿಸ್ತೃತ ಯೋಜನಾ ವರದಿಯು ಸ್ಪಷ್ಟಪಡಿಸಬೇಕು. ಸಚಿವಾಲಯದಿಂದ ಯೋಜನೆಯು ಮಂಜೂರಾಗಿ ಒಂದು ವರ್ಷವಾದರೂ ಜಮೀನಿನ ಅಲಭ್ಯತೆಯಿಂದಾಗಿ ಅದು ಆರಂಭವಾಗಿರದಿದ್ದರೆ ಅಂತಹ ಯೋಜನೆಯನ್ನು ಕೈಬಿಡಲಾಗುವುದು ಮತ್ತು ಅನುದಾನವನ್ನು ವಾಪಸುಪಡೆಯಲಾಗುವುದು ಇಲ್ಲವೇ ಹೊಂದಿಸಿಕೊಳ್ಳಲಾಗುವುದು.
5. ಪ್ರವಾಸಿ ತಾಣ/ಪಥಕ್ಕೆ ಹೋಗುವ ರಸ್ತೆಗಳಲ್ಲಿ ಪ್ರತೀ 50 ಕಿ.ಮೀ. ಗೊಮ್ಮೆ ರಸ್ತೆಬದಿಯ ಸೌಲಭ್ಯಗಳನ್ನು ಒದಗಿಸಿರಬೇಕು.
6. ಸೂಚನಾಫಲಕಗಳು ಸಾಧ್ಯವಾದಷ್ಟು ಅಂತಾರಾಷ್ಟ್ರೀಯ ನಿಯಮಾವಳಿಗಳಿಗೆ ಅನುಗುಣವಾಗಿರಬೇಕು (ಜಾಗತಿಕ ಪ್ರವಾಸೋದ್ಯಮ ಸಂಸ್ಥೆಯ ಜಾಲತಾಣ).
7. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಚಾಲ್ತಿಯಲ್ಲಿರುವ ಪ್ರವಾಸಿ ಸೌಲಭ್ಯಗಳನ್ನು ತಮ್ಮ ಪ್ರವಾಸಿ ನೀತಿಯ ಒಂದು ಭಾಗವಾಗಿ ತಮ್ಮದೇ ಸಂಪನ್ಮೂಲಗಳನ್ನು ಬಳಸಿ ಅಭಿವೃದ್ಧಿಪಡಿಸಿ, ಬಲಪಡಿಸಬೇಕು.
8. ರಾಜ್ಯಗಳು ಸಾಧ್ಯವಾದಷ್ಟು ಸಾಂಸ್ಥಿಕ ಯಂತ್ರದೊಂದಿಗೆ ಸೂಕ್ತ ಪ್ರಾತಿನಿಧಿಕ

| ಭಾರತದಲ್ಲಿರುವ ವಿಮಾನ ನಿಲ್ದಾಣಗಳ ಪಟ್ಟಿ | | | | |
|---|---|---|---|---|
| ಕ್ರ. ಸಂ. | ಪ್ರದೇಶ ಅಥವಾ ರಾಜ್ಯ | ವಿಮಾನ ನಿಲ್ದಾಣದ | ಯಾವ ನಗರಕ್ಕೆ ಹೆಸರು | ವರ್ಗ ಸೇವೆ |
| 1 | ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | ವೀರ ಸಾವರ್ಕರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಪೋರ್ಟ್‌ಬ್ಲೇರ್ | ಕಸ್ಟಮ್ಸ್ |
| 2 | ಆಂಧ್ರಪ್ರದೇಶ | ವಿಶಾಖಪಟ್ಟಣಂ ವಿಮಾನ ನಿಲ್ದಾಣ | ವಿಶಾಖಪಟ್ಟಂ | ಕಸ್ಟಮ್ಸ್ |
| 3 | ಅಸ್ಸಾಂ | ಲೋಕಪ್ರಿಯ ಗೋಪಿನಾಥ ಬಡೋರ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಗುವಾಹಟಿ | ಕಸ್ಟಮ್ಸ್ |
| 4 | ಬಿಹಾರ | ಜಯಪ್ರಕಾಶ್ ನಾರಾಯಣ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಪಾಟ್ನಾ | ಕಸ್ಟಮ್ಸ್ |
| 5 | | ಗಯಾ ವಿಮಾನ ನಿಲ್ದಾಣ | ಗಯಾ | ಕಸ್ಟಮ್ಸ್ |
| 6 | ಛತ್ತೀಸ್‌ಗಢ | ಸ್ವಾಮಿ ವಿವೇಕಾನಂದ ವಿಮಾನ ನಿಲ್ದಾಣ | ರಾಯ್‌ಪುರ | ದೇಶೀಯ |
| 7 | ದಾಮನ್ ಮತ್ತು ಡಿಯು | ಡಿಯು ವಿಮಾನ ನಿಲ್ದಾಣ | ಡಿಯು | ದೇಶೀಯ |
| 8 | ದೆಹಲಿ | ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ನವದೆಹಲಿ | ಅಂತಾರಾಷ್ಟ್ರೀಯ |
| 9 | ಗೋವಾ | ಡಾಬೋಲಿಮ್ ವಿಮಾನ ನಿಲ್ದಾಣ | ಇಡೀ ರಾಜ್ಯಕ್ಕೆ | ಅಂತಾರಾಷ್ಟ್ರೀಯ |
| 10 | ಗುಜರಾತ್ | ಸರ್ದಾರ್ ವಲ್ಲಭಬಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಅಹಮದಾಬಾದ್ | ಅಂತಾರಾಷ್ಟ್ರೀಯ |
| 11 | ಜಮ್ಮು ಮತ್ತು ಕಾಶ್ಮೀರ | ಶ್ರೀನಗರ ವಿಮಾನ ನಿಲ್ದಾಣ | ಶ್ರೀನಗರ | ಕಸ್ಟಮ್ಸ್ |
| 12 | | ಜಮ್ಮು ವಿಮಾನ ನಿಲ್ದಾಣ | ಜಮ್ಮು | ದೇಶೀಯ |
| 13 | ಜಾರ್ಖಂಡ್ | ಬಿರ್ಸಾ ಮುಂಡಾ ವಿಮಾನ ನಿಲ್ದಾಣ | ರಾಂಚಿ | ದೇಶೀಯ |
| 14 | ಕರ್ನಾಟಕ | ಮಂಗಳೂರು ವಿಮಾನ ನಿಲ್ದಾಣ | ಮಂಗಳೂರು | ಕಸ್ಟಮ್ಸ್ |
| 15 | | ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ) | ಬೆಂಗಳೂರು | ಅಂತಾರಾಷ್ಟ್ರೀಯ |
| 16 | ಕೇರಳ | ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ತಿರುವನಂತಪುರಂ | ಅಂತಾರಾಷ್ಟ್ರೀಯ |
| 17 | | ಕೊಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಕೊಚಿನ್ | ಅಂತಾರಾಷ್ಟ್ರೀಯ |
| 18 | | ಕ್ಯಾಲಿಕಟ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಕ್ಯಾಲಿಕಟ್ | ಅಂತಾರಾಷ್ಟ್ರೀಯ |
| 19 | ಲಕ್ಷದ್ವೀಪ | ಅಗಾಥಿ ಏರೋಡ್ರಮ್ | ಅಗಾಥಿ | ದೇಶೀಯ |
| 20 | ಮಧ್ಯಪ್ರದೇಶ | ರಾಜಾಭೋಜ್ ವಿಮಾನ ನಿಲ್ದಾಣ | ಭೋಪಾಲ್ | ಕಸ್ಟಮ್ಸ್ |
| 21 | | ದೇವಿ ಅಹಲ್ಯಾಬಾಯಿ ಹೋಳ್ಕರ್ ವಿಮಾನ ನಿಲ್ದಾಣ | ಇಂದೋರ್ | ದೇಶೀಯ |
| 22 | ಮಹಾರಾಷ್ಟ್ರ | ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಮುಂಬೈ | ಅಂತಾರಾಷ್ಟ್ರೀಯ |
| 23 | | ಪುಣೆ ವಿಮಾನ ನಿಲ್ದಾಣ | ಪೂನಾ | ಕಸ್ಟಮ್ಸ್ |
| 24 | | ನ್ಯೂ ಪುಣೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಪೂನಾ | ಫ್ಯೂಚರ್ |
| 25 | | ಶಿರ್ಡಿ ವಿಮಾನ ನಿಲ್ದಾಣ | ಶಿರ್ಡಿ | ಫ್ಯೂಚರ್ |
| 26 | | ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ನಾಗ್ಪುರ | ಕಸ್ಟಮ್ಸ್ |
| 27 | ಮಣಿಪುರ | ತುಲಿಹಾಲ್ ವಿಮಾನ ನಿಲ್ದಾಣ | ಇಂಫಾಲ | ದೇಶೀಯ |
| 28 | ಮೇಘಾಲಯ | ಶಿಲ್ಲಾಂಗ್ ವಿಮಾನ ನಿಲ್ದಾಣ | ಶಿಲ್ಲಾಂಗ್ | ದೇಶೀಯ |
| 29 | ಮಿಝೋರಾಂ | ಲೆಂಗ್‌ಪುಯಿ ವಿಮಾನ ನಿಲ್ದಾಣ | ಐಜ್ವಾಲ್ | ದೇಶೀಯ |

| | | | | |
|---|---|---|---|---|
| 30 | ನಾಗಾಲ್ಯಾಂಡ್ | ಧಿಮಾಪುರ್ ವಿಮಾನ ನಿಲ್ದಾಣ | ಧಿಮಾಪುರ್ | ದೇಶೀಯ |
| 31 | ಒಡಿಶಾ | ಪಟ್ನಾಯಿಕ್ ವಿಮಾನ ನಿಲ್ದಾಣ | ಭುವನೇಶ್ವರ | ದೇಶೀಯ |
| 32 | ಪಾಂಡಿಚೇರಿ | ಪಾಂಡಿಚೇರಿ ವಿಮಾನ ನಿಲ್ದಾಣ | ಪಾಂಡಿಚೇರಿ | ದೇಶೀಯ |
| 33 | ಪಂಜಾಬ್ | ಶ್ರೀ ಗುರು ರಾಮದಾಸ್‌ಜೀ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಅಮೃತಸರ | ಅಂತಾರಾಷ್ಟ್ರೀಯ |
| 34 | ರಾಜಸ್ಥಾನ | ಜೈಪುರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಜೈಪುರ | ಕಸ್ಟಮ್ಸ್ |
| 35 | ಸಿಕ್ಕಿಂ | ಪಕ್ಯೋಂಗ್ ವಿಮಾನ ನಿಲ್ದಾಣ | ಗ್ಯಾಂಗ್ಟಾಕ್ | ಫ್ಯೂಚರ್ |
| 36 | ತಮಿಳುನಾಡು | ಚೆನ್ನೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಚೆನ್ನೈ | ಅಂತಾರಾಷ್ಟ್ರೀಯ |
| 37 | | ತಿರುಚಿರಾಪಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ತಿರುಚಿರಾಪಳ್ಳಿ | ಕಸ್ಟಮ್ಸ್ |
| 38 | ತೆಲಂಗಾಣ | ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಹೈದರಾಬಾದ್ | ಅಂತಾರಾಷ್ಟ್ರೀಯ |
| 39 | ತ್ರಿಪುರ | ಅಗರ್ತಲ ವಿಮಾನ ನಿಲ್ದಾಣ | ಅಗರ್ತಲ | ದೇಶೀಯ |
| 40 | ಉತ್ತರಾಖಂಡ | ಜಾಲಿ ಗ್ರಾಂಟ್ ವಿಮಾನ ನಿಲ್ದಾಣ | ಡೆಹ್ರಾಡೂನ್ | ದೇಶೀಯ |
| 41 | ಉತ್ತರ ಪ್ರದೇಶ | ತಾಜ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಗ್ರೇಟರ್ ನೋಯ್ಡಾ | ಫ್ಯೂಚರ್ |
| 42 | | ವಾರಣಾಸಿ ವಿಮಾನ ನಿಲ್ದಾಣ | ವಾರಣಾಸಿ | ಕಸ್ಟಮ್ಸ್ |
| 43 | | ಅಮೌಸಿ ವಿಮಾನ ನಿಲ್ದಾಣ | ಲಕ್ನೊ | ಕಸ್ಟಮ್ಸ್ |
| 44 | | ಆಗ್ರಾ ವಾಯುನೆಲೆ | ಆಗ್ರಾ | ದೇಶೀಯ |
| 45 | ಪಶ್ಚಿಮ ಬಂಗಾಳ | ನೇತಾಜಿ ಸುಭಾಶ್ಚಂದ್ರಬೋಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಕೋಲ್ಕತ | ಅಂತಾರಾಷ್ಟ್ರೀಯ |
| 46 | | ಬಾಗ್ದೋಗ್ರಾ ವಿಮಾನ ನಿಲ್ದಾಣ | ಸಿಲಿಗುರಿ | ಕಸ್ಟಮ್ಸ್ |

ಮೂಲ: http://www.ibef.org/industry/roads-india.aspx

ಸಂಸ್ಥೆಗಳ ಮುಖಾಂತರ ಸಾರ್ವಜನಿಕ ಸೌಕರ್ಯಗಳ ನಿರ್ವಹಣಾ ವ್ಯವಸ್ಥೆಯನ್ನು ನಿಯಮಾವಳಿಗಳ ಅಡಿಯಲ್ಲಿ ನಡೆಸಿಕೊಂಡು ಹೋಗಬೇಕು.

**ನಿರ್ಮಿತ ಪರಂಪರೆ ಮತ್ತು ಸೂಚನಾಫಲಕಗಳು**

1. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಸಂಶೋಧನೆ, ದಾಖಲೀಕರಣ, ಮೌಲ್ಯ–ಮಹತ್ವ, ಹಾನಿ ಅಂದಾಜು, ಸಂರಕ್ಷಣೆ, ನಿರ್ವಹಣೆ, ಪ್ರವಾಸೋದ್ಯಮ ಮೂಲಸೌಕರ್ಯ, ಧಾರಣಾ ಸಾಮರ್ಥ್ಯ, ನಿವೇಶನ ವಿಶ್ಲೇಷಣೆ, ಭದ್ರತೆ/ಪ್ರಥಮ ಚಿಕಿತ್ಸೆ, ಸಾರ್ವಕಾಲಿಕ ತಲುಪುವಿಕೆ, ತ್ಯಾಜ್ಯ ನಿರ್ವಹಣೆ, ಸಮುದಾಯ ಸಮಾಲೋಚನೆ, ಯೋಜನಾ ಅನುಷ್ಠಾನ ವಿಧಾನ, ಉದ್ಯಮ ಯೋಜನೆ ಇತ್ಯಾದಿಗಳನ್ನೊಳಗೊಂಡ ಸಮಗ್ರ ಸಂರಕ್ಷಣಾ ಮಾಸ್ಟರ್ ಪ್ಲಾನ್‌ನ್ನು ರೂಪಿಸಬೇಕು.

2. ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ಅಂತಾರಾಷ್ಟ್ರೀಯ ಮಾರ್ಗಸೂಚಿಗಳನ್ನು / ವಿಶ್ವ ಪರಂಪರೆ ತಾಣಗಳ ಬಗೆಗಿನ ಯುನೆಸ್ಕೊ ನಿಯಮಾವಳಿಗಳನ್ನು ಅನುಸರಿಸಬೇಕು।

3. ಸೂಚನಾ ಫಲಕಗಳಿಗೆ ಯುಎನ್‌ಡಬ್ಲ್ಯೂಟಿಒ ನಿಯಮಾವಳಿಗಳನ್ನು ಹಾಗೂ ಎನ್‌ಎಚ್‌ಎಐ ನಿಯಮಾವಳಿಗಳನ್ನು ಅನುಸರಿಸಲು ಶಿಫಾರಸು ಮಾಡಿದೆ.

4. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂರಕ್ಷಣಾ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳು ಉತ್ತಮ ಹಣಕಾಸು ಮತ್ತು ನಿರ್ವಹಣಾ ಯೋಜನೆಗಳನ್ನು ಹೊಂದಿರಬೇಕು.

5. ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಮತ್ತು ಪೂರ್ಣಗೊಂಡ ನಂತರದ ನಿರ್ವಹಣಾ ಕೆಲಸಗಳನ್ನು ನಿರ್ವಹಿಸಲು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಸೂಕ್ತ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿರಬೇಕು.

6. ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮಾದರಿಯನ್ನು ಉತ್ತೇಜಿಸಬೇಕು.

**ಹವಾ ಪ್ರತಿಕ್ರಿಯಾಶೀಲ ಮತ್ತು ದೇಶೀಯ ವಾಸ್ತುಶಿಲ್ಪ**

1. ಹವಾ ಪ್ರತಿಕ್ರಿಯಾಶೀಲ ಹಾಗೂ ಸ್ಥಳಸೂಕ್ಷ್ಮ ಪ್ರವಾಸಿ ವಾಸ್ತುಶಿಲ್ಪವನ್ನು ವಿನ್ಯಾಸಗೊಳಿಸಲು ಪ್ರಯತ್ನ ಮಾಡಬೇಕು.

2. ಸ್ಥಳೀಯ ಸಾಮಗ್ರಿ ಹಾಗೂ ತಂತ್ರಜ್ಞಾನ, ದೇಶೀಯ ವಿನ್ಯಾಸ ತತ್ವಗಳನ್ನು ಬಳಸಿಕೊಳ್ಳಲು ಒತ್ತು ನೀಡಬೇಕು.

3. ಪ್ರವಾಸಿ ತಾಣಗಳ ಸ್ಥಳೀಯತೆ, ಪರಿಸರ ಹಾಗೂ ಸಾಂದರ್ಭಿಕ ಲಕ್ಷಣಗಳ ವಿಷಯದಲ್ಲಿ ಪ್ರವಾಸೋದ್ಯಮ ಉದ್ಯೋಗಿಗಳ ಸಾಮರ್ಥ್ಯ ವರ್ಧನೆ

ಮಾಡಲು ಪ್ರಯತ್ನಿಸಬೇಕು. ಪ್ರವಾಸೋದ್ಯಮ ಸಚಿವಾಲಯದ ಸಿಬಿಎಸ್‌ಪಿ ಯೋಜನೆಯಿಂದ ಇದಕ್ಕೆ ಅನುದಾನವನ್ನು ಪಡೆದುಕೊಳ್ಳಬಹುದು.

**ನಗರ ಭೂವಿನ್ಯಾಸ**

1. ಸ್ಥಳೀಯ ಸಾಮಗ್ರಿಗಳನ್ನು ಬಳಸುವ ಮೂಲಕ ಸ್ಥಳೀಯ ಪರಿಸರವು ಪ್ರತಿಬಿಂಬಿತವಾಗುವಂತೆ ಭೂವಿನ್ಯಾಸ ಮಾಡಬೇಕು.

2. ಗಿಡಗಳನ್ನು ನೆಡುವಾಗ ದೇಶೀಯ ತಳಿ/ಸ್ಥಳೀಯ ತಳಿಗಳ ಬಳಕೆಯನ್ನು ಉತ್ತೇಜಿಸಬೇಕು.

3. ಸೂಕ್ತವೆನಿಸಿದಲ್ಲಿ ನಿರ್ಮಾಣ ಕಾರ್ಯಗಳಲ್ಲಿ ಸಾಂಪ್ರದಾಯಿಕ ವಿಧಾನಗಳ ಬಳಕೆಯ ಸಾಧ್ಯತೆಯನ್ನು ಅನ್ವೇಷಿಸಬೇಕು ಮತ್ತು ಉತ್ತೇಜಿಸಬೇಕು.

4. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಈ ಕೆಳಗಿನವುಗಳಿಗೆ ಗಮನ ನೀಡಬೇಕು–

   - ✧ ಕನಿಷ್ಠ ಮಣ್ಣಿನ ಕೆಲಸಗಳನ್ನು ಅವಲಂಬಿಸಬೇಕು ಮತ್ತು ಸಾಧ್ಯವಾದಷ್ಟು ಭೂಮೇಲ್ಮೈಯನ್ನು ಯಥಾ ಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು.
   - ✧ ಮಳೆನೀರು ಕೊಯ್ಲು, ಜಲಮರುಪೂರಣ ಹಾಗೂ ಶೂನ್ಯ ತ್ಯಾಜ್ಯ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು.
   - ✧ ಸೌಂದರ್ಯ ಕಲ್ಪನೆ, ಭದ್ರತೆ ಹಾಗೂ ಖರ್ಚುವೆಚ್ಚವನ್ನು ಗಮನದಲ್ಲಿರಿಸಿಕೊಂಡು ಗಡಿ ನಿರ್ಮಾಣದ ವಿನ್ಯಾಸ ಮಾಡಬೇಕು. ಒಂದು ನಿರ್ದಿಷ್ಟ ಯೋಜನೆಯ ನಿಯೋಜಿತ ಹಣಕಾಸಿನ ಶೇ. 20ನ್ನು ಈ ಖರ್ಚು ಮೀರಬಾರದು.
   - ✧ ಸೌರಶಕ್ತಿ ಹಾಗೂ ನವೀಕರಿಸ ಬಹುದಾದ ಇಂಧನಗಳ ಬಳಕೆಯನ್ನು ಉತ್ತೇಜಿಸಬೇಕು.
   - ✧ ಮಾನವನಿರ್ಮಿತ ಸಾಮಗ್ರಿಗಳ ಕನಿಷ್ಠ ಬಳಕೆ.

5. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು–

   - ✧ ನೀರಿನ ಕೊರತೆಯಿರುವ ಪ್ರದೇಶಗಳಲ್ಲಿ ಕಾರಂಜಿ ಮತ್ತಿತರ ಜಲಾಧಾರಿತ ಘಟಕ ಗಳನ್ನು ನಿರುತ್ತೇಜಿಸಬೇಕು.
   - ✧ ವಿದ್ಯುತ್ತಿನ ಕೊರತೆಯಿರುವ ಪ್ರದೇಶಗಳಲ್ಲಿ, ಭದ್ರತೆಗೆ ತೊಂದರೆಯಾಗದಂತೆ, ದೊಡ್ಡಮಟ್ಟದ ವಿದ್ಯುದ್ದೀಪ ಗಳನ್ನು ಅಳವಡಿಸುವುದನ್ನು ನಿರುತ್ತೇಜಿಸಬೇಕು.
   - ✧ ಯೋಜನೆಯೊಂದನ್ನು ಆರಂಭಿಸುವ ಮುನ್ನ ನೀರಿನ ಮೂಲ, ಸಾಕಷ್ಟು ನೀರಿನ ಲಭ್ಯತೆ, ಹಾಗೂ ನೀರಾವರಿ ವ್ಯವಸ್ಥೆಯ ಇರುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು.
   - ✧ ಸುಲಭಸಾಧ್ಯ ಮೂಲ ಸೌಕರ್ಯಗಳನ್ನು ಉತ್ತೇಜಿಸ ಬೇಕು.
   - ✧ ಯೋಜನೆಗಳ ಸುಸ್ಥಿರತೆಯನ್ನು ಖಚಿತಪಡಿಸಲು ಐದು ವರ್ಷಗಳ ನಿರ್ವಹಣಾ ಯೋಜನೆ ಮತ್ತು ನಿರ್ವಹಣಾ ಮುಂಗಡಪತ್ರವನ್ನು ತಯಾರಿಸ ಬೇಕು ಮತ್ತು ಮಂಡಿಸಬೇಕು. ಇದಕ್ಕೆ ಅಗತ್ಯವಿರುವ ಹಣಕಾಸನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಅಥವಾ ಸರ್ಕಾರಿ–ಖಾಸಗಿ ಸಹಭಾಗಿತ್ವದಿಂದ ಹೊಂದಿಸಿಕೊಳ್ಳಬೇಕು.

ಫುಡ್ ಕ್ರಾಫ್ಟ್ ಸಂಸ್ಥೆಗಳು ಮತ್ತು ಹೊಟೇಲ್ ನಿರ್ವಹಣಾ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿಹೊಂದಿದ ಜಮೀನಿನಲ್ಲಿ ಸ್ಥಾಪನೆಗೊಂಡಿರಬೇಕು.

1. ಭವಿಷ್ಯದ ವಿಸ್ತರಣಾ ಪ್ರದೇಶವನ್ನು ಗುರುತಿಸಿಕೊಳ್ಳಬೇಕು ಆದರೆ ಸಭಾಂಗಣಗಳನ್ನು ನಿರ್ಮಿಸಬಾರದು.
2. ಇಡೀ ಸಂಕೀರ್ಣದ ಸಮಗ್ರ ಯೋಜನೆ ಯನ್ನು ತಯಾರಿಸಿಕೊಳ್ಳಬೇಕು.
3. ಯೋಜನೆಯ ಅತ್ಯವಶ್ಯಕ ಉದ್ದೇಶ ಗಳಿಗೆ ಮಾತ್ರ ಭೂಮೇಲ್ಮೈಯನ್ನು ಬಳಸಿ ಕೊಳ್ಳಬೇಕು.



ಭಾರತದ ಪ್ರವಾಸೋದ್ಯಮವು ಒಂದು ಮಹಾನ್ ನೆಗೆತದ ಹೊಸಿಲಲ್ಲಿದೆ. ಆದರೆ ಇನ್ಯಾವ ದೇಶವೂ ತನಗಾಗಿ ಕಾದುಕುಳಿತುಕೊಳ್ಳಲಾರದು ಎಂಬುದನ್ನು ಅದು ಅರ್ಥಮಾಡಿಕೊಳ್ಳಬೇಕು. ಪ್ರವಾಸೋದ್ಯಮ ರಂಗದಲ್ಲಿ ಎಲ್ಲ ಅಭಿವೃದ್ಧಿಶೀಲ ದೇಶಗಳೂ ತೀವ್ರ ಸ್ಪರ್ಧೆಗೆ ಬಿದ್ದಿವೆ ಏಕೆಂದರೆ ಇದು ಅವರ ಅರ್ಥವ್ಯವಸ್ಥೆಯ ಬೆನ್ನೆಲುಬು. ಚಿ

ೀನಾ, ಥೈಲ್ಯಾಂಡ್, ಮಲೇಶಿಯಾ ಮತ್ತು ಇಂಡೋನೇಷ್ಯಾದಂತಹ ದೇಶಗಳು ಪ್ರವಾಸೋದ್ಯಮ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಆ ಮೂಲಕ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ದೊಡ್ಡಮೊತ್ತವನ್ನು ವ್ಯಯಿಸುತ್ತಿವೆ. ಅವರು ಈ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ ಕೂಡಾ. ಆದರೆ ಭಾರತ ಇನ್ನೂ ತನ್ನ ಆದ್ಯತೆಗಳನ್ನು ರೂಪಿಸಿಕೊಳ್ಳುತ್ತಿದೆಯಷ್ಟೇ. ಯಾಕೋ ಪ್ರವಾಸೋದ್ಯಮವು ಈ ಯೋಜನೆಗಳೊಳಗೆ ಸರಿಹೊಂದುತ್ತಿಲ್ಲ. ಹೆಚ್ಚು ಹೆಚ್ಚು ಜನಪ್ರಿಯ ಯೋಜನೆಗಳು ಹೊರಬರುತ್ತಿವೆ.

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಗುಜರಾತಿನ ಮುಖ್ಯಮಂತ್ರಿ ಗಳಾಗಿದ್ದಾಗ ಮೂಲಸೌಕರ್ಯಕ್ಕಾಗಿ ಸಾಕಷ್ಟು ಹೂಡಿಕೆ ಮಾಡಿದ್ದರು ಮತ್ತು ನಾವೀಗ ಅದರ ಫಲಗಳನ್ನು ನೋಡಬಹುದಾಗಿದೆ. ಅಂತಿಮವಾಗಿ ನಾನು ಹೇಳಬಯಸುವುದಿಷ್ಟೇ: ಪ್ರವಾಸಿ ತಾಣಗಳನ್ನು ತಲುಪುವುದು ಸುಲಭಸಾಧ್ಯವಲ್ಲದೇ ಹೋದರೆ ಎಲ್ಲ ಆಕರ್ಷಣೆಗಳೂ ಅರ್ಥಹೀನ. ಭಾರತೀಯ ಯೋಜಕರು ಇದನ್ನು ಎಷ್ಟು ಬೇಗ ಅರ್ಥಮಾಡಿಕೊಳ್ಳುತ್ತಾರೋ ಅಷ್ಟು ಒಳ್ಳೆಯದು. ರಸ್ತೆ ಮತ್ತು ರೈಲ್ವೆಗಳಿಂದ ಕೇವಲ ಪ್ರವಾಸಿಗರಿಗಷ್ಟೇ ಅನುಕೂಲವಲ್ಲ; ಇವು ಉತ್ತಮಗೊಂಡರೆ ಭಾರತೀಯ ಆರ್ಥಿಕತೆಯೂ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಬಹುದು. ❑

# ಭಾರತೀಯ ಪ್ರವಾಸೋದ್ಯಮದ ಉತ್ಕೃಷ್ಟ ಆರಂಭ

* ರತ್ನದೀಪ್ ಬ್ಯಾನರ್ಜಿ
ಕನ್ನಡಕ್ಕೆ : ನಾಗರತ್ನ ಚಂದ್ರಕಾಂತಗ್ಯಾಲ್



**ಪ್ರವಾಸೋದ್ಯಮ ಸಚಿವಾಲಯ, ಸಾಂಸ್ಕೃತಿಕ ಸಚಿವಾಲಯ ಮತ್ತು ಇತರೇ ಸಂಬಂಧಿತ ಸಚಿವಾಲಯಗಳ ಸಕ್ರಿಯ ಸಹಯೋಗದೊಂದಿಗೆ, ಪ್ರವಾಸೋದ್ಯಮದಲ್ಲಿನ ಉತ್ಪನ್ನಗಳನ್ನು, ನಿಗದಿತ ಸೇವೆಗಳನ್ನು ಗುರುತಿಸಿ, ಪರಂಪರೆಯನ್ನು ಚಾಲಕ ಶಕ್ತಿಯಾಗಿ ಉಪಯೋಗಿಸಿ ದೇಶದ ಪ್ರವಾಸೋದ್ಯಮದ ಪ್ರಗತಿ ಮತ್ತು ವಿಕಾಸಕ್ಕಾಗಿ ಯೋಜನೆಗಳನ್ನು ರೂಪಿಸುವುದು ಅನಿವಾರ್ಯವಾಗಿದೆ.**

**ಭಾ**ರತದ ವೈವಿಧ್ಯಮಯ ಶ್ರೀಮಂತ ಸಂಸ್ಕೃತಿ ಜಗತ್ತಿನ ಗೌರವಾದರಗಳಿಗೆ ಪಾತ್ರವಾಗಿದೆ. ಭಾರತದ ಆರ್ಥಿಕ ಪ್ರಗತಿ ಮತ್ತು ಜನರ ಆದಾಯದಲ್ಲಿನ ಹೆಚ್ಚಳ ಪ್ರವಾಸೋದ್ಯಮದ ಬೆಳವಣಿಗೆಗೆ ಪೋಷಕವಾಗಿದೆ. ವಿಶ್ವ ಆರ್ಥಿಕ ವೇದಿಕೆಯು 2013ರಲ್ಲಿ ನೀಡಿದ ವರದಿಯಲ್ಲಿ ಪ್ರವಾಸೋದ್ಯಮದಲ್ಲಿ ಏಶಿಯಾ ಪೆಸಿಫಿಕ್ ಭಾಗದಲ್ಲಿ ಭಾರತಕ್ಕೆ ಸಾಂಸ್ಕೃತಿಕ ಪರಂಪರೆಯಲ್ಲಿ ಹನ್ನೊಂದನೇ ಸ್ಥಾನ, ನೈಸರ್ಗಿಕ ಸಂಪನ್ಮೂಲದಲ್ಲಿ 9ನೇ ಸ್ಥಾನ. ಸಾಂಸ್ಕೃತಿಕ ಸಂಪನ್ಮೂಲದಲ್ಲಿ 24ನೇ ಸ್ಥಾನ ಒಟ್ಟಾರೆಯಾಗಿ 65ನೇ ಸ್ಥಾನವನ್ನು ನೀಡಲಾಗಿದೆ.

ಪ್ರವಾಸೋದ್ಯಮದ ಅಂತಃಸತ್ವ, ಒಳಕಸುವುಗಳನ್ನು ಬಳಸಿಕೊಂಡು ಒಳ್ಳೆಯ ಮಧ್ಯಸ್ಥಗಾರರು ಭಾಗಿದಾರರೊಂದಿಗೆ ಪ್ರವಾಸೋದ್ಯಮವನ್ನು ಫಲದಾಯಿ ಉದ್ಯಮವನ್ನಾಗಿಸುವ ಎಲ್ಲಾ ಸಂಭಾವ್ಯತೆಗಳು ಮತ್ತು ಸಾಧ್ಯತೆಗಳ ಬಗ್ಗೆ ಯೋಚಿಸುವುದು ಅತ್ಯಾವಶ್ಯಕವಾಗಿದೆ.

2012–2013ರಲ್ಲಿ ಮಂಡಿಸಿರುವ ಭಾರತೀಯ ಆರ್ಥಿಕ ಸಮೀಕ್ಷೆಯ ಅಹವಾಲಿನಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ ದೇಶದ ಒಟ್ಟು ಆರ್ಥಿಕ ಉತ್ಪನ್ನದಲ್ಲಿನ 3.7 ಪ್ರತಿಶತದಷ್ಟು ಆದಾಯ ಪ್ರತ್ಯಕ್ಷವಾಗಿ ಪ್ರವಾಸೋದ್ಯಮದಿಂದ ಲಭ್ಯವಾಗಿದ್ದು ಪರೋಕ್ಷವಾಗಿ 3.1 ಪ್ರತಿಶತದಷ್ಟು ಮತ್ತು ಒಟ್ಟು 6.8 ಪ್ರತಿಶತದಷ್ಟು ಆದಾಯ ಪ್ರವಾಸೋದ್ಯಮದಿಂದ ಲಭ್ಯವಾಗಿರುವುದು ಕಂಡುಬರುತ್ತದೆ. ಪ್ರವಾಸೋದ್ಯಮದಿಂದ ಜನರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಿ ಲಭ್ಯವಾಗಿರುತ್ತವೆ. ಪ್ರವಾಸೋದ್ಯಮ ಸಚಿವಾಲಯದ ಮಾಹಿತಿಯ ಪ್ರಕಾರ ಭಾರತದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡುವ ಪ್ರತಿದಶಲಕ್ಷರೂ.ಗಳ ಬಂಡವಾಳದಿಂದ ಅಂದಾಜು 78 ಉದ್ಯೋಗಗಳು ನಿರ್ಮಾಣವಾಗುತ್ತವೆ. ಪ್ರವಾಸೋದ್ಯಮ ಆದಾಯಗಳಿಸುವುದರೊಂದಿಗೆ ಕೌಶಲ್ಯ ರಹಿತರಿಗೆ, ಮಹಿಳೆಯರಿಗೆ ಮತ್ತು ನಿಪುಣರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಿಕೊಡುತ್ತದೆ. ಉತ್ಪಾದನಾ ಕ್ಷೇತ್ರದಲ್ಲಿ ಇಷ್ಟೇ ಬಂಡವಾಳ ಹೂಡಿಕೆಯಿಂದ 45 ಜನಕ್ಕಷ್ಟೆ ಉದ್ಯೋಗ ಅವಕಾಶಗಳು ಲಭ್ಯವಾಗುತ್ತವೆ.

2012ರಲ್ಲಿ ಭಾರತದರ್ಶನಕ್ಕೆ ಬಂದ ವಿದೇಶಿಗರ ಸಂಖ್ಯೆ 6.58 ದಶಲಕ್ಷವಿದ್ದರೆ 2013ರಲ್ಲಿ ಈ ಸಂಖ್ಯೆ 6.97 ದಶಲಕ್ಷಕ್ಕೆ ಏರಿರುವುದು ಕಂಡುಬರುತ್ತದೆ. 2012ರಲ್ಲಿ ಭಾರತಕ್ಕೆ ಬಂದ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಆದ ಹೆಚ್ಚಳದ ದರ 4.3% ಆದರೆ ಈ ಸಂಖ್ಯೆಯಲ್ಲಿ 2013ರಲ್ಲಿ 5.9 ಪ್ರತಿಶತದಷ್ಟು ಹೆಚ್ಚಳವಾಗಿರುವುದನ್ನು ಕಾಣುತ್ತೇವೆ. 2013ರಲ್ಲಿ ಆದ 5.9 ಪ್ರತಿಶತದಷ್ಟು ಹೆಚ್ಚಳ ಅಂತಾರಾಷ್ಟ್ರೀಯ ಸ್ತರದಲ್ಲಿನ ಪ್ರವಾಸಿಗಳ ಆಗಮನದ ಪ್ರಮಾಣಕ್ಕಿಂತ ಹೆಚ್ಚಿರುವುದನ್ನು ಕಾಣುತ್ತೇವೆ. ಅಂತಾರಾಷ್ಟ್ರೀಯ ಪ್ರವಾಸಿಗರ ಪ್ರಮಾಣ 5 ಪ್ರತಿಶತದಷ್ಟಿದೆ. 91.0 ಪ್ರತಿಶತದಷ್ಟು ವಿದೇಶಿ ಪ್ರವಾಸಿಗರು ವಾಯು ಮಾರ್ಗವಾಗಿ ಭಾರತಕ್ಕೆ ಬಂದರೆ 0.5 ಪ್ರತಿಶತದಷ್ಟು ಪ್ರವಾಸಿಗರು ಸಮುದ್ರಮಾರ್ಗವಾಗಿ ಇನ್ನುಳಿದವರು ಭೂಮಾರ್ಗವಾಗಿ ಭಾರತಕ್ಕೆ ಆಗಮಿಸಿದ್ದಾರೆ.

* ಮಾಧ್ಯಮ ತಜ್ಞರು. Email : ratnadeepbanerji@gmail.com



| ವಿಶ್ವದಲ್ಲಿ ಭಾರತದ ಸ್ಥಾನ | | |
|---|---|---|
| 1 | ವಿದೇಶಿ ಪ್ರವಾಸಿಗರ ಆಗಮನ ಸಂಖ್ಯೆಯಲ್ಲಿ ಭಾರತದ ಪಾಲು | 0.64% |
| 2 | ವಿಶ್ವದಲ್ಲಿನ ವಿದೇಶಿ ಪ್ರವಾಸಿಗರ ಆಗಮನ ಸಂಖ್ಯೆಯಲ್ಲಿ ಭಾರತದ ಸ್ಥಾನ | 42 |
| 3 | ಅಂತರರಾಷ್ಟ್ರೀಯ ಪ್ರವಾಸೋದ್ಯಮದ ಆದಾಯದಲ್ಲಿ ಭಾರತದ ಪಾಲು | 1.54% |
| 4 | ವಿಶ್ವ ಪ್ರವಾಸೋದ್ಯಮದ ಒಟ್ಟು ಆದಾಯ ಗಳಿಕೆಯಲ್ಲಿ ಭಾರತದ ಸ್ಥಾನ | 16 |
| **ಏಶಿಯಾ ಪೆಸಿಫಿಕ್ ಪ್ರದೇಶದಲ್ಲಿ ಭಾರತದ ಸ್ಥಾನ** | | |
| 1 | ವಿದೇಶಿ ಪ್ರವಾಸಿಗರ ಆಗಮನ ಸಂಖ್ಯೆಯಲ್ಲಿ ಭಾರತದ ಪಾಲು | 28% |
| 2 | ವಿದೇಶಿ ಪ್ರವಾಸಿಗರ ಆಗಮನ ಸಂಖ್ಯೆಯಲ್ಲಿ ಭಾರತದ ಸ್ಥಾನ | 12 |
| 3 | ಪ್ರವಾಸೋದ್ಯಮದಲ್ಲಿ ಭಾರತ ಗಳಿಸುತ್ತಿರುವ ಆದಾಯ | 5.14% ಅಮೇರಿಕಾ ಡಾಲರುಗಳು |
| 4 | ಪ್ರವಾಸೋದ್ಯಮದ ಆದಾಯ ಗಳಿಕೆಯಲ್ಲಿ ಭಾರತದ ಸ್ಥಾನ | 8 |

12–13ರಲ್ಲಿ 52.8 ಪ್ರತಿಶತದಷ್ಟು ವಿದೇಶಿ ಪ್ರವಾಸಿಗರು ದೆಹಲಿ ಮತ್ತು ಮುಂಬೈ ವಿಮಾನತಾಣಗಳಲ್ಲಿ ಇಳಿದಿದ್ದಾರೆ. 2013ರಲ್ಲಿ ಭಾರತಕ್ಕೆ ಬಂದ ವಿದೇಶಿಗರು ಮುಖ್ಯವಾಗಿ ಅಮೆರಿಕ, ಬ್ರಿಟನ್, ಬಾಂಗ್ಲಾದೇಶ, ಶ್ರೀಲಂಕಾ, ರಶಿಯಾ, ಕೆನಡಾ, ಜರ್ಮನಿ, ಫ್ರಾನ್ಸ್, ಮಲೇಶಿಯಾ, ಜಪಾನ್, ಆಸ್ಟ್ರೇಲಿಯಾ, ಚೈನಾ, ಸಿಂಗಾಪೂರ್, ಥೈಲ್ಯಾಂಡ್ ಮತ್ತು ನೇಪಾಳದ ಮೂಲದವರಾಗಿದ್ದಾರೆ. ಭಾರತಕ್ಕೆ ಭೇಟಿಯಿತ್ತ ಪ್ರವಾಸಿಗರಲ್ಲಿ 70.72 ಪ್ರತಿಶತದಷ್ಟು ಪ್ರವಾಸಿಗರು ಈ 15 ದೇಶಗಳವರಾಗಿದ್ದಾರೆ. ವಿಶ್ವಸಂಸ್ಥೆಯ ಜಾಗತಿಕ ಸಂಘದ ಅಂದಾಜಿನ ಪ್ರಕಾರ ಭಾರತದಲ್ಲಿನ ಪ್ರವಾಸೋದ್ಯಮದಲ್ಲಿ 2016ರ ಹೊತ್ತಿಗೆ 8 ಪ್ರತಿಶತದಷ್ಟು ಹೆಚ್ಚಳವಾಗಲಿದೆ.

2013ರಲ್ಲಿ ದೇಶಿ ಪ್ರವಾಸಿಗರ ಸಂಖ್ಯೆ 1045.05 ದಶಲಕ್ಷವಿದ್ದು ಆ ಸಂಖ್ಯೆ 2013ರಲ್ಲಿ 1145.28 ದಶಲಕ್ಷಕ್ಕೇರಿದ್ದು 9.6 ಪ್ರತಿಶತದಷ್ಟು ಅಭಿವೃದ್ಧಿಯಾಗಿರುವುದನ್ನು ಸೂಚಿಸುತ್ತದೆ.

ವಿದೇಶಿ ವಿನಿಮಯದ ಗಳಿಕೆಯಲ್ಲಿ ಪ್ರವಾಸೋದ್ಯಮ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. 2012ರಲ್ಲಿ ವಿದೇಶಿ ವಿನಿಮಯದ ಗಳಿಕೆ 17.74 ಬಿಲಿಯನ್ ಡಾಲರ್‌ಗಳಿದ್ದರೆ 2013ರಲ್ಲಿ ಈ ಗಳಿಕೆ 18.45 ಬಿಲಿಯನ್ ಡಾಲರುಗಳಿಗೆ ಏರಿ 4 ಪ್ರತಿಶತದಷ್ಟು ಅಭಿವೃದ್ಧಿ ದರವನ್ನು ಮುಟ್ಟಿರುವುದನ್ನು ಕಾಣುತ್ತೇವೆ. 2016ರಲ್ಲಿ ಭಾರತಕ್ಕೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆ 11.24 ದಶಲಕ್ಷ ಮತ್ತು ದೇಶಿ ಪ್ರವಾಸಿಗರ ಸಂಖ್ಯೆ 1451.46 ದಶಲಕ್ಷವನ್ನು ಮುಟ್ಟಬಹುದೆಂದು ಅಂದಾಜು ಮಾಡಲಾಗಿದೆ. ವಿದೇಶಿ ವಿನಿಮಯದ ಗಳಿಕೆ 30.3 ಬಿಲಿಯನ್ ಅಮೆರಿಕನ್ ಡಾಲರುಗಳನ್ನು ಮುಟ್ಟಲಿದ್ದು 24.5 ದಶಲಕ್ಷ ಜನಗಳಿಗೆ ಉದ್ಯೋಗ ಅವಕಾಶಗಳು ದೊರಕುವ ಸಾಧ್ಯತೆಗಳಿವೆ.

**ಸಾಮರ್ಥ್ಯ ನಿರ್ಮಿತಿ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಕ್ರಮಗಳು**

ದೇಶದಲ್ಲಿನ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮಾನವಸಂಪನ್ಮೂಲದ ಕೊರತೆಯಿರುವುದನ್ನು ಕಾಣುತ್ತೇವೆ. ಮಾನವ ಸಂಪನ್ಮೂಲದ ಸಾಮರ್ಥ್ಯ ಸುಧಾರಣೆ ಮತ್ತು ಸಾಮರ್ಥ್ಯ ನಿರ್ಮಿತಿಗಾಗಿ ತರಬೇತಿ ಮತ್ತು ಮೂಲಭೂತ ಸೌಕರ್ಯಗಳನ್ನೊದಗಿಸುವುದು, ಸಾಮರ್ಥ್ಯವನ್ನು ಪ್ರಮಾಣೀಕರಿಸುವುದು ಅತ್ಯಾವಶ್ಯಕವಾಗಿದೆ. ಇದಕ್ಕಾಗಿ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್‌ನಂತಹ ಸಂಸ್ಥೆಗಳನ್ನು ಸ್ಥಾಪಿಸುವುದು ಅನಿವಾರ್ಯವಾಗಿದೆ. ಜುಲೈ 31, 2011ರಲ್ಲಿ 16 ರಾಜ್ಯಗಳಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು 13 ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್‌ಗಳನ್ನು ಆರಂಭಿಸಲು ಮಂಜೂರಾತಿ ನೀಡಲಾಯಿತು.

ಸದ್ಯದಲ್ಲಿ ಕಾರ್ಯನಿರತರಾಗಿರುವ ಈ ಕ್ಷೇತ್ರದಲ್ಲಿನ ಕಾರ್ಯನಿರ್ವಾಹಕರ ಅನುಕೂಲಕ್ಕಾಗಿ ಕೌಶಲ್ಯ ಪರೀಕ್ಷೆ ಮತ್ತು ಪ್ರಮಾಣೀಕರಣದ ಕಾರ್ಯವನ್ನು 15 ಸಂಸ್ಥೆಗಳಲ್ಲಿ ನಿರ್ವಹಿಸಲಾಗುತ್ತಿದೆ. ಪ್ರವಾಸೋದ್ಯಮ ಸಚಿವಾಲಯ ನೀಡಿರುವ ಮಾಹಿತಿಯ ಪ್ರಕಾರ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸೇವಾನಿರತರಾಗಿರುವವರನ್ನು ಪ್ರಮಾಣೀಕರಿಸುವ ಪ್ರಯತ್ನದಲ್ಲಿ 2011–2012ರಲ್ಲಿ 9869 ಸೇವಾನಿರತರನ್ನು ಪ್ರಮಾಣೀಕರಣಗೊಳಿಸಲಾಯಿತು. 5500ರಷ್ಟು ಸೇವಾನಿರತರನ್ನು ಪ್ರಮಾಣೀಕರಣಗೊಳಿಸುವ ಗುರಿಯನ್ನು 2011–2012ರಲ್ಲಿ ದಾಟಲಾಯಿತು.

ಭಾರತ ಸರ್ಕಾರ 'ಹೊನಾರ್ ಸೆ ರೋಜಗಾರ್' ಎನ್ನುವ ಪ್ರಮುಖ ಯೋಜನೆಯಲ್ಲಿ 8ನೇ ತರಗತಿಯವರೆಗೆ ಓದಿದ 28 ವರ್ಷದವರೆಗಿನ ಅಭ್ಯರ್ಥಿಗಳಿಗೆ ಆಹಾರ ಮತ್ತು ಪಾನೀಯ ತಯಾರಿಸುವ ತರಬೇತಿಯನ್ನು ನೀಡುವ ಗುರಿಯನ್ನಿಟ್ಟುಕೊಂಡಿದೆ. ಈ ತರಬೇತಿಯನ್ನು ಕೆಲವೇ ಆಯ್ದ ಪಂಚತಾರಾ ಹೋಟೆಲ್‌ಗಳಲ್ಲಿ, ಪ್ರವಾಸೋದ್ಯಮ ಇಲಾಖೆಯಿಂದ ಪ್ರಾಯೋಜಿತವಾದ ರಾಜ್ಯಸರ್ಕಾರದ ಕೆಲವೇ ಆಯ್ದ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಆಹಾರ ಕಲೆ ಸಂಸ್ಥೆಗಳಲ್ಲಿ ನೀಡಲಾಗುತ್ತಿದೆ. ಇಲ್ಲಿ 6981 ತರುಣರು ತರಬೇತಿಯನ್ನು ಪಡೆದಿದ್ದಾರೆ. ಇದು 2010–2011ರಲ್ಲಿ 5500 ತರುಣರಿಗೆ ತರಬೇತಿ ನೀಡಬೇಕೆಂದು ನಿಶ್ಚಯಿಸಿದ ಸಂಖ್ಯೆಗಿಂತ ಹೆಚ್ಚಾಗಿದೆ. 11ನೇ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲೇ ತರಬೇತಿಗಾಗಿ ಮೀಸಲಿರಿಸಿದ 350 ಕೋಟಿಗಳ 100 ಪ್ರತಿಶತ ಹಣವನ್ನು ಉಪಯೋಗಿಸಲಾಯಿತು. 12ನೆಯ ಯೋಜನೆಯಲ್ಲಿ ತೀರ್ಥಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು.

12ನೇ ಯೋಜನೆ ಬಡ ಜನರ ಪರ ನಿಲುವು ಹೊಂದಿದ್ದು ಪ್ರವಾಸೋದ್ಯಮದ ಎಲ್ಲಾ ಪ್ರಯೋಜನಗಳು ಬಡವರಿಗೆ ದೊರಕಬೇಕು ಮತ್ತು ಪ್ರವಾಸೋದ್ಯಮ

ಬಡತನ ನಿರ್ಮೂಲನದ ಸಾಧನವಾಗಬೇಕು ಎನ್ನುವ ಧೋರಣೆಯನ್ನಿಟ್ಟುಕೊಂಡಿದೆ.

### ಸಹಕಾರಿ ಪ್ರವಾಸೋದ್ಯಮ

ಸಹಕಾರಿ ಪ್ರವಾಸೋದ್ಯಮ ಕಲ್ಪನೆಯ ಮೂಲ ಉದ್ದೇಶ ಸ್ಥಾನಿಕ ನಿಸರ್ಗ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಒಳ ಕಸುವುಗಳನ್ನು ಸ್ಥಳೀಯ ಸಮುದಾಯಗಳ ಸಕ್ರಿಯ ಸಹಕಾರದೊಂದಿಗೆ ಉಪಯೋಗಿಸಿಕೊಂಡು ಪ್ರವಾಸೋದ್ಯಮವನ್ನು ಗಟ್ಟಿಗೊಳಿಸಿ ಆದಾಯವನ್ನು ಹೆಚ್ಚಿಸಬೇಕು. ಈ ಪ್ರಯತ್ನದಲ್ಲಿ ಸ್ಥಳೀಯ ಕಲೆ, ಸಂಸ್ಕೃತಿ, ಪರಂಪರಾಗತ ವಾಸ್ತುಶೈಲಿ, ವಾಸ್ತು ಶಿಲ್ಪ, ಪಾರಂಪರಿಕ ಅಡುಗೆಗಳು, ವಸ್ತ್ರ ವಿನ್ಯಾಸಗಳು ಜತನವಾಗುವದರೊಂದಿಗೆ ಸ್ಥಾನಿಕರಿಗೆ ಪೂರಕ ಆದಾಯವೂ ಸಿಗುತ್ತದೆ.

ದುರ್ದೈವವಶಾತ್ ಪ್ರಸಿದ್ಧ ತಾಣಗಳಲ್ಲಿನ ಪ್ರವಾಸೋದ್ಯಮ ಮತ್ತು ಅದರಿಂದ ದೊರಕುವ ಆರ್ಥಿಕ ಲಾಭಗಳು ಕೆಲವೇ ಕೆಲವು ಖಾಸಗಿ ವ್ಯಕ್ತಿ, ಸಂಸ್ಥೆಗಳ ಬಿಗಿಮುಷ್ಟಿಯಲ್ಲಿದ್ದು ಪ್ರವಾಸೋದ್ಯಮದ ಲಾಭ, ಆದಾಯಗಳಿಂದ ಸ್ಥಳೀಯ ಸಮುದಾಯಗಳು ವಂಚಿತವಾಗಿವೆ. ಇದಕ್ಕೆ ಪರಿಹಾರವೆಂದರೆ ಪ್ರವಾಸೋದ್ಯಮವನ್ನು ಸಹಕಾರಿ ತತ್ವದ ಮೇಲೆ ಕಟ್ಟುವುದು. ಸಹಕಾರಿ ಪ್ರವಾಸೋದ್ಯಮ ಸಮಾಜದ ಎಲ್ಲಾ ಘಟಕಗಳನ್ನು ಮತ್ತು ಪ್ರವಾಸೋದ್ಯಮದಲ್ಲಿನ ಎಲ್ಲಾ ಆಯಾಮಗಳನ್ನು ಒಂದು ಪರಿಧಿಯಲ್ಲಿ ತಂದು ಪ್ರವಾಸೋದ್ಯಮಕ್ಕೆ ಹೊಸ ವ್ಯಾಪಕತೆಯನ್ನು ನೀಡುತ್ತದೆ.

ಯೆಸ್ ಬ್ಯಾಂಕ್ ಭಾರತದಲ್ಲಿ ಸ್ವೀಡಿಶ್ ಸರ್ಕಾರದ ವತಿಯಿಂದ ಸಹಕಾರಿ ಪ್ರವಾಸೋದ್ಯಮದ ಬೆಳವಣಿಗೆಗಾಗಿ ನೀಡಲ್ಪಟ್ಟಿರುವ ಅಂತಾರಾಷ್ಟ್ರೀಯ ವಿಕಾಸ ನಿಧಿಯ ವ್ಯವಸ್ಥಾಪಕ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ. ಈ ನಿಧಿಯಿಂದ ಸಹಕಾರಿ ಪ್ರವಾಸೋದ್ಯಮವನ್ನು ವಿಕಸಿತಗೊಳಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಭಾಗಗಳಲ್ಲಿನ ಸ್ಥಳೀಯ ಸಮುದಾಯಗಳನ್ವಯ ಸಹಕಾರಿ ಪ್ರವಾಸೋದ್ಯಮದಲ್ಲಿ ಸಕ್ರಿಯ ಸಹಭಾಗಿಗಳಾಗುವಂತೆ ಮನವೊಲಿಸುವುದು ಮತ್ತು ನಿಸರ್ಗ, ಪರಂಪರೆಯನ್ನು ಪ್ರವಾಸೋದ್ಯಮದ ಶಕ್ತಿಯಾಗಿರಿಸಿಕೊಂಡು ಗುರಿ ವ್ಯವಸ್ಥಾಪನೆ ಸಂಘಟನೆಯ ಮಾದರಿಯನ್ನು ಅನುಸರಿಸಿ ದಾರಿದ್ರ್ಯನಿವಾರಣೆಗೆ ಪ್ರಯತ್ನಿಸುವ ಉದ್ದೇಶವಿದೆ. ಈ ಯೋಜನೆಯನ್ನು ಉತ್ತರಕಾಂಡ ಮತ್ತು ಪಶ್ಚಿಮಬಂಗಾಲಗಳಲ್ಲಿ ಕಾರ್ಯರೂಪಕ್ಕೆ ತರಲಾಗಿದೆ. ಈ ತರಹದ ಸಹಕಾರಿ ತತ್ವದ ಕಾರ್ಯಜಾಲಗಳನ್ನು ದೇಶದಾದ್ಯಂತ ಸೃಷ್ಟಿಸಿ, ಸಹಕಾರಿ ಪ್ರವಾಸೋದ್ಯಮಕ್ಕೆ ಅವಶ್ಯಕವಾದ ಕೌಶಲ್ಯಗಳನ್ನು ಗುರುತಿಸಿ ಈ ಕುಶಲಕಾರ್ಯ ನಿರ್ವಹಣೆಯ ತಂತ್ರಗಳನ್ನು ಎಲ್ಲೆಡೆಗೆ ಉಪಯೋಗಿಸುವುದು ಅವಶ್ಯಕವಾಗಿದೆ.

### ಮೂಲಭೂತ ಸೌಕರ್ಯಗಳಿಗಾಗಿ ಉಪಕ್ರಮಗಳು

ಉತ್ತಮ ಮೂಲಭೂತ ಸೌಕರ್ಯಗಳ ಲಭ್ಯತೆ ಪ್ರವಾಸೋದ್ಯಮದ ಅಭಿವೃದ್ಧಿಯ ಅಡಿಗಲ್ಲು. ಆದ್ದರಿಂದ ಪ್ರವಾಸೋದ್ಯಮ ಸಚಿವಾಲಯ ಉತ್ತಮ ಮೂಲಭೂತ ಸೌಕರ್ಯಗಳನ್ನು ಯಾನದ ತಾಣಗಳಲ್ಲಿ ನಿರ್ಮಿಸುವಲ್ಲಿ ಪ್ರಯತ್ನಶೀಲವಾಗಿದೆ. ದೊಡ್ಡದೊಡ್ಡ ಯೋಜನೆಗಳ ಮುಖಾಂತರ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ತರಗಳಲ್ಲಿ ಉತ್ತಮ ಪ್ರವಾಸಿ ತಾಣಗಳನ್ನು ವಿಕಸಿತಗೊಳಿಸುವ ಪ್ರಯತ್ನದಲ್ಲಿ ಸರ್ಕಾರ ಮಗ್ನವಾಗಿದೆ. ಪ್ರವಾಸೋದ್ಯಮ ಸಚಿವಾಲಯ ಈ ಉದ್ಯಮದ ಬೆಳವಣಿಗೆಗಾಗಿ ಅದರೊಂದಿಗೆ ಸಂಬಂಧಿತ ಇತರ ಇಲಾಖೆಗಳಾದ ವಾಯು ಸಂಚಾರ ಸಚಿವಾಲಯ, ರಸ್ತೆ ಸಾರಿಗೆ ಮತ್ತು ಮಹಾಮಾರ್ಗ, ಆಹಾರ ಪ್ರಕ್ರಿಯೆ ನಗರ ವಿಕಾಸ ಸಚಿವಾಲಯ ಮತ್ತು ರಾಜ್ಯಸರಕಾರಗಳೊಂದಿಗೆ ಸೇರಿ ಶ್ರಮಿಸುತ್ತಿದೆ. ಇಲ್ಲಿಯವರೆಗೂ 53 ಯೋಜನೆಗಳನ್ನು ನಿಶ್ಚಯಿಸಲಾಗಿದ್ದು ಅದರಲ್ಲಿ 35 ಯೋಜನೆಗಳು ಮಂಜೂರಾಗಿವೆ. ಈ ದೊಡ್ಡ ಯೋಜನೆಗಳು ಸಂಸ್ಕೃತಿ, ಪರಂಪರೆ, ಅಧ್ಯಾತ್ಮ ಮತ್ತು ಪರಿಸರ ಪ್ರವಾಸೋದ್ಯಮದ ಸುಂದರ ಸಮನ್ವಯವಾಗಿ ಪ್ರವಾಸಿಗರಿಗೆ ತಾಣದ ಸಮಗ್ರದರ್ಶನ ಮಾಡಿಸುತ್ತವೆ.

### ಪರಂಪರೆಯ ದರ್ಶನದ ಪ್ರವಾಸೋದ್ಯಮ

ಪರಂಪರೆಯ ಪ್ರವಾಸೋದ್ಯಮ ಭಾರತೀಯ ಪರಂಪರೆಯ ವೈಭವದ ಸೂಕ್ಷ್ಮ ಮುದ್ರೆಗಳನ್ನು ನಿಸರ್ಗ, ಸಂಸ್ಕೃತಿ, ಐತಿಹಾಸಿಕ ಪರಂಪರೆಯಲ್ಲಿ ದರ್ಶಿಸುವ ಪ್ರಯತ್ನ



ಮಾಡುತ್ತದೆ. ಭಾರತೀಯ ಸಮಾಜದ ಸರ್ವಸ್ತರಗಳಲ್ಲಿ ಪರಂಪರೆಯ ಪ್ರಸುತ್ತತೆ ಹೊರಹೊಮ್ಮಬೇಕಾಗಿದೆ. ಭವ್ಯವಾದ ಕಟ್ಟಡಗಳು, ವ್ಯಕ್ತಿಗತ ಅಭಿರುಚಿಗಳು, ಧಾರ್ಮಿಕ ಆಯ್ಕೆಗಳು ಪ್ರವಾಸಿಗರನ್ನು ಈ ಯಾನದ ಕಡೆ ಆಕರ್ಷಿಸುತ್ತವೆ. ಪರಂಪರೆಯ ವಾಸ್ತವ ಅನುಭವಕ್ಕಾಗಿ, ಹೊಸ ಗ್ರಹಿಕೆ, ಆಕಾಂಕ್ಷೆಗಳಿಗಾಗಿ ಭಾರತದಲ್ಲಿ 28 ವಿಶ್ವ ಪರಂಪರೆ ತಾಣಗಳನ್ನು ಆಯ್ದು ನಿಶ್ಚಿತಗೊಳಿಸಲಾಗಿದೆ. ಪರಂಪರೆಯ ಜಾಡು ಹಿಡದು ಹೋಗುವುದು ಮನದಲ್ಲಿ ಭದ್ರವಾಗಿ ನೆಲೆಯೂರುವ ಅನುಭವ. ಇಂತಹ ಅನುಭವಗಳು ಪ್ರವಾಸಿಗರಿಗೆ ಮತ್ತು ಮಕ್ಕಳಿಗೆ ಮಹತ್ವವಾದವು. ಇದರಲ್ಲಿ ಸಮಾಜದ ಪರಿಸರ ಪುನರ್‌ನಿರ್ಮಿತವಾಗುತ್ತದೆ. ಈ ಪುನರ್‌ನಿರ್ಮಿತ ಸುಲಭವಾದುದ್ದಲ್ಲ. ಇದಕ್ಕಾಗಿ ವಿದ್ವಾಂಸರು, ವಿನ್ಯಾಸಕಾರರು, ವಿಜ್ಞಾನಿಗಳು, ತಂತ್ರಜ್ಞಾನಿಗಳು ಒಟ್ಟಿಗೆ ಕೆಲಸಮಾಡಬೇಕು. ಪಾಂಡಿತ್ಯಪೂರ್ಣ ಒಳನೋಟಗಳು ಬೇಕು ಮತ್ತು ವಿಷಯದೊಂದಿಗೆ ಸಮರಸವಾಗುವ ಸಾಮರ್ಥ್ಯವಿರಬೇಕು. ಪ್ರವಾಸಿಗರನ್ನು ಆಕರ್ಷಿಸುವುದರಲ್ಲಿ ಸಂಗೀತ, ನೃತ್ಯ, ಸಾಹಿತ್ಯ ಉತ್ಸಾಹಗಳು ಮಹತ್ತರ ಪಾತ್ರವಹಿಸುತ್ತವೆ. ಸುಮಾರು 300ಕ್ಕಿಂತ ಹೆಚ್ಚು ಉತ್ಸವಗಳು, ಜಾತ್ರೆಗಳು ದೇಶದಲ್ಲಿ ನಡೆಯುತ್ತವೆ. ಪಾರಂಪರಿಕ ಆಟಗಳಾದ ಮಣಿಪುರದಲ್ಲಿನ ಪೋಲೊ, ಎತ್ತಿನಗಾಡಿ, ರಥಗಳ ಪಂದ್ಯ, ದೋಣಿವಿಹಾರ ಮತ್ತು ದೋಣಿಗಳ ಪಂದ್ಯಗಳು ಪ್ರವಾಸಿಗರನ್ನು ಆಕರ್ಷಿಸಿ ಅವರ ಮನ ತಣಿಸುವುದರಲ್ಲಿ ಸಂಶಯವಿಲ್ಲ.

**ವಿಶ್ವಸಂಸ್ಥೆಯ ವಿಶ್ವ ಪ್ರವಾಸೋದ್ಯಮ ಸಂಘಟನೆಯ ಪ್ರಕಾರ** ಸ್ಥಾನಿಕ ಸಮುದಾಯಗಳ ಸಕ್ರಿಯ ಸಹಭಾಗದೊಂದಿಗೆ ಪರಂಪರೆಯ ವ್ಯವಸ್ಥಾಪಕ ಕ್ಷೇತ್ರಕ್ಕೆ ಸಂಬಂಧಪಟ್ಟವರು, ಶಿಕ್ಷಣ ಸಂಸ್ಥೆಗಳು ಸಾಂಸ್ಕೃತಿಕ ಪರಂಪರೆಯಲ್ಲಿ

ನಷ್ಟವಾಗುತ್ತಿರುವ ಅಥವ ಬದಲಾವಣೆಗೆ ಒಳಪಡುತ್ತಿರುವ ಅಗ್ರಾಹ್ಯ, ಅಮೂರ್ತ ಹೊಳಹುಗಳನ್ನು ದಾಖಲಿಸುವಂತೆ ಯೋಜನೆಗಳನ್ನು ರೂಪಿಸಬೇಕು.

ಸಾಂಸ್ಕೃತಿಕ ಮೌಲ್ಯಗಳಿಗೆ ಯಾವುದೇ ಅನಾದರ ವ್ಯಕ್ತಪಡಿಸದೇ ಸ್ಥಾನಿಕ ಸಂಸ್ಕೃತಿಯ ಲೇಪವಿರುವ, ಅದರ ಬಗ್ಗೆ ಉಪಯುಕ್ತ ಮಾಹಿತಿ ನೀಡುವ ಚಟುವಟಿಕೆಗಳನ್ನು, ಕಲೆಗಳನ್ನು ಪ್ರೋತ್ಸಾಹಿಸಬೇಕು.

ಸಂಸ್ಕೃತಿಯ ಅಚ್ಚುಗಳಿರುವ ಬೌದ್ಧಿಕ ಸಂಪತ್ತಿನ ಮೇಲಿನ ಅಧಿಕಾರದ ಹಕ್ಕುಗಳನ್ನು ಸಂರಕ್ಷಿಸಬೇಕು. ಉದಾಹರಣೆಗೆ ಸಂಪ್ರದಾಯಿಕ ಸಂಗೀತದ ಧ್ವನಿ ಸುರುಳಿಗಳು, ಸೌಂದರ್ಯ ಸಾಧನೆಗಳು, ಔಷಧಗಳು, ಪಾಕಕೃತಿಗಳು.

ಸಂಬಂಧಿತ ಭಾಗಿದಾರರೊಂದಿಗೆ ಸಾಂಸ್ಕೃತಿಕ, ಪಾರಂಪರಿಕ ವಸ್ತುಗಳನ್ನು ತಯಾರಿಸುವುದರ ಬಗ್ಗೆ ಪ್ರವಾಸೋದ್ಯಮದಲ್ಲಿ ಹೊಸತನ ತರುವುದರ ಬಗ್ಗೆ, ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವುದರ ತಂತ್ರ, ನೀತಿಗಳನ್ನು ರೂಪಿಸಬೇಕು.

### ಗ್ರಾಮೀಣ ಪ್ರವಾಸೋದ್ಯಮ

ದೇಶಿಯ ಮತ್ತು ವಿದೇಶಿಯ ಪ್ರವಾಸಿಗರನ್ನು ಆಕರ್ಷಿಸುವ ಶಕ್ತಿ ಗ್ರಾಮೀಣ ಪ್ರವಾಸೋದ್ಯಮಕ್ಕಿದೆ. ಇಲ್ಲಿಯ ಪ್ರವಾಸೋದ್ಯಮದ ಕೇಂದ್ರಬಿಂದುವಾಗಿ ಕಲೆ, ಕರಕುಶಲತೆ, ವಸ್ತ್ರೋದ್ಯಮ, ಕೈಮಗ್ಗದ ವಸ್ತ್ರಗಳು ಮತ್ತಿತರ ವಿಷಯಗಳು ಸೇರಿಸಬಹುದು. ಗ್ರಾಮೀಣ ಮತ್ತು ಪ್ರವಾಸಿಗರ ನಡುವಿನ ಸಂವಾದ ಇಬ್ಬರಿಗೂ ಮರೆಯಲಾಗದ ಅನುಭವವಾಗಬಹುದು, ಗ್ರಾಮೀಣ ಸಂಸ್ಕೃತಿಯನ್ನು ಸಂರಕ್ಷಿಸುವ ಮತ್ತು ಪರಿಚಯಿಸುವ ಕೆಲಸವಾಗಬೇಕಾಗಿದೆ. ಕೇರಳ ಮತ್ತು ಹಿಮಾಚಲ ಪ್ರದೇಶದಲ್ಲಿ ಇಂತಹ ಸುತ್ಯ ಪ್ರಯತ್ನವಾಗಿದೆ. ಗುಜರಾತಿನಲ್ಲಿ 16



ಕಸೂತಿಯ ಪ್ರಕಾರಗಳನ್ನು ಪ್ರವಾಸಿಗರಿಗೆ ಪರಿಚಯಿಸಲಾಗಿದೆ. ಪ್ರತಿಭಾವಂತರಿಗೆ ಬೇಕಾದ ತರಬೇತಿಯನ್ನು ಹಳ್ಳಿಯಲ್ಲಿನ ಸಮಿತಿಗಳು, ಸರ್ಕಾರಿ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ನೀಡುತ್ತಿವೆ. ಅತಿಥಿ ಮತ್ತು ಅತಿಥೇಯರಿಬ್ಬರಿಗೂ ಜಾನಪದದ ಅರಿವಿರಬೇಕು. ಹಳ್ಳಿಯ ಜನರಿಗೆ ಇತಿಹಾಸದ ಬಗ್ಗೆ ಮಾಹಿತಿ ನೀಡಿ ಮಾರ್ಗದರ್ಶನ ಮಾಡಿದರೆ ಅವರು ಅದನ್ನು ಪ್ರವಾಸಿ ಅತಿಥಿಗಳೊಂದಿಗೆ ಹಂಚಿಕೊಳ್ಳುತ್ತಾರೆ. ಪ್ರವಾಸಿಗರಿಗೆ ಮನೆ ತಂಗುದಾಣವಾದರೆ ಆತಿಥೇಯರು ಕೆಲವು ನಿಯಮಗಳನ್ನು ತಪ್ಪದೇ ಪಾಲಿಸಬೇಕು.

ಗ್ರಾಮೀಣ ಪ್ರವಾಸೋದ್ಯಮ ನಗರಗಳಿಗೆ ಹಳ್ಳಿಗರ ವಲಸೆಯನ್ನು ತಡೆದು ಅವರ ಸಾಮಾಜಿಕ ಮತ್ತು ಆರ್ಥಿಕ ಮುನ್ನಡೆಗೆ ಪೂರಕವಾಗಿದೆ. ಪ್ರವಾಸೋದ್ಯಮ ಸಚಿವಾಲಯವು ಇಲ್ಲಿಯವರೆಗೆ 153 ಗ್ರಾಮೀಣ ಪ್ರವಾಸೋದ್ಯಮ ಯೋಜನೆಗಳನ್ನು 28 ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಾರಂಭಿಸಲು ಮುಂಜೂರಾತಿ ನೀಡಿದೆ, ಇದರಲ್ಲಿ ಯುಎನ್‌ಡಿಪಿಯ ಬೆಂಬಲದಿಂದ ಆರಂಭಗೊಂಡಿರುವ 36 ಗ್ರಾಮಾಂತರ ಕೇಂದ್ರಗಳು ಸೇರ್ಪಡೆಯಾಗಿವೆ. ಭಾರತದ ಮೂಲವಾಸಿ ಸಹಕಾರಿ ಮಾರುಕಟ್ಟೆ ವಿಕಾಸ ಒಕ್ಕೂಟ ಲಿಮಿಟೆಡ್ ಮತ್ತು ಹಸ್ತಕಲಾ ಏಳಿಗೆ ಮತ್ತು ರಫ್ತು ಸಮಿತಿಗಳು ಗ್ರಾಮೀಣ ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವಹಿಸಬಹುದು.

### ಸಾಹಸ ಪ್ರವಾಸೋದ್ಯಮ

1992ರ ನಂತರ ಆಗಿರುವ ಆರ್ಥಿಕ ಏಳಿಗೆ ಸಾಹಸ ಪ್ರವಾಸೋದ್ಯಮಕ್ಕೆ ಸಂಜೀವಿನಿಯಾಗಿದೆ. ಸರ್ಕಾರ ಸಾಹಸ ಪ್ರವಾಸೋದ್ಯಮದ ಮುನ್ನಡೆಯ ಅಂತಃಸತ್ವವನ್ನು ಅರಿತು ಸಾಹಸ ಪ್ರವಾಸೋದ್ಯಮವನ್ನು ಗಟ್ಟಿಯಾಗಿ ನೆಲೆಯೂರಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಸಾಹಸ ಪ್ರವಾಸೋದ್ಯಮ ಸ್ಥಳೀಯ ಕೆಲಸಗಾರರ ಸಹಭಾಗವಿಲ್ಲದೇ ಯಶಸ್ವಿಯಾಗಲಾರದು. ಸಾಹಸ ಪ್ರವಾಸೋದ್ಯಮದ ಪರಿಣಾಮ ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ, ನೈಸರ್ಗಿಕ ವಾತಾವರಣ, ಸಂಪನ್ಮೂಲಗಳ ಅತಿಕಮ್ಮಿ ಪ್ರಮಾಣದಲ್ಲಿದೆ.



ಸಾಹಸ ಪ್ರವಾಸೋದ್ಯಮ ಪ್ರವಾಸೋದ್ಯಮದಲ್ಲಿ ವಿವಿಧತೆಯನ್ನು ತರುವ ಪ್ರಯತ್ನದಲ್ಲಿ ಒಂದು ಮೈಲುಗಲ್ಲಾಗಿದೆ. ಪ್ರವಾಸೋದ್ಯಮ ಸಚಿವಾಲಯ ಸಾಹಸ ಪ್ರವಾಸದ ನಿರ್ವಾಹಕರಿಗೆ ಕೆಲವು ಮಾರ್ಗಸೂಚಿಗಳನ್ನು ನೀಡಿದೆ. ಮೂಲಭೂತ ಸೌಕರ್ಯಗಳ ಮತ್ತು ಸಾಹಸ ಪ್ರವಾಸೋದ್ಯಮದ ಬೆಳವಣಿಗೆಗಾಗಿ ವಿವಿಧ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಆರ್ಥಿಕ ಸಹಾಯವನ್ನು ನೀಡಿದೆ. ಪ್ರವಾಸೋದ್ಯಮ ಸಚಿವಾಲಯವು ತಾನು ತಯಾರಿಸಿರುವ ತಾಳಿಕೆಯ ಮಾನದಂಡಗಳನ್ನು ಜಾಗತಿಕ ತಾಳಬಲ್ಲ ಪ್ರವಾಸೋದ್ಯಮದ ಮಾನದಂಡಗಳೊಂದಿಗೆ ಜೋಡಿಸಿ ಒಂದಾಗಿಸಿದೆ. ಪ್ರವಾಸೋದ್ಯಮದ ಮಾರುಕಟ್ಟೆಗಾಗಿ ಉಪಯೋಗಿಸಲಾಗಿರುವ ಅದ್ಭುತ ಭಾರತದ ಪ್ರಚಾರದಲ್ಲಿ ಪ್ರವಾಸೋದ್ಯಮದ ಅಂಗಗಳಾದ ಸಾಹಸತಾಣ ಮತ್ತು ನಿಸರ್ಗತಾಣಗಳನ್ನು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಂತಹ ಮಾರುಕಟ್ಟೆಗಳನ್ನು ಆಕರ್ಷಿಸಲು ಉಪಯೋಗಿಸಲಾಗಿದೆ.

ಪ್ರವಾಸೋದ್ಯಮ ನೀತಿಯನ್ನು ರೂಪಿಸುವಾಗ ಪ್ರವಾಸೋದ್ಯಮ ಸಚಿವಾಲಯ ಪ್ರವಾಸಿಗರ ಸುರಕ್ಷತೆಗೆ, ಪರಿಸರ ಸಂರಕ್ಷಣೆಗೆ, ಸೇವಾ ಲಭ್ಯತೆಗೆ ಜಾಸ್ತಿ ಒತ್ತುಕೊಟ್ಟಿದೆ. ಪ್ರವಾಸ ನಿಯೋಜಕರು ಮತ್ತು ನಿರ್ವಾಹಕರ ಬಗೆಗಿನ ಮಾಹಿತಿಯನ್ನು ಜನಗಳಿಗೆ ಒದಗಿಸಲಾಗಿದೆ. ಮನವಿ ಮತ್ತು ಮಂಜೂರಾತಿ ಪ್ರಕ್ರಿಯೆಯನ್ನು ಸುಲಭ ಮತ್ತು ಸರಳಗೊಳಿಸಲಾಗಿದೆ. 'ಹೊನಾರ್ ಸೆ ರೋಜಾಗರ್' ಯೋಜನೆಯ ಅಂತರ್ಗತವಾಗಿ ಪ್ರವಾಸೋದ್ಯಮ ಸಚಿವಾಲಯವು ಪ್ರವಾಸೋದ್ಯಮದಲ್ಲಿ ಸೇವೆಗಳನ್ನು ಒದಗಿಸುವವರಿಗೆಂದು ಸಾಮರ್ಥ್ಯ ನಿರ್ಮಾಣ ಯೋಜನೆಯನ್ನು ಜಾರಿಗೆ ತರುತ್ತದೆ. ಈ ಯೋಜನೆಯಡಿಯಲ್ಲಿ


ಮಾನವೀಯ ಸಂಪನ್ಮೂಲಗಳನ್ನು ಸಾಹಸ ಪ್ರವಾಸೋದ್ಯಮಕ್ಕಾಗಿ ಉಪಯೋಗಿಸುವ ಬಗ್ಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕಲ್ಪನೆಯು ವಿಚಾರಾಧೀನವಾಗಿದೆ. 2009ರಲ್ಲಿ ಸಂರಕ್ಷಣಾ ಸಚಿವಾಲಯವು ಲೇಹ್, ಜಮ್ಮು ಮತ್ತು ಕಾಶ್ಮೀರ್ ರಾಜ್ಯದಲ್ಲಿನ 104 ಶಿಖರಗಳನ್ನು ಸಾಹಸ ಪ್ರವಾಸೋದ್ಯಮ ಯಾನದ ತಾಣಗಳಾಗಿ ಸಂದರ್ಶಿಸಲು ಅನುಮತಿ ನೀಡಿತು. 2012ರಲ್ಲಿ ಹಿಮಾಚಲ್ ಪ್ರದೇಶಕ್ಕೆ ಅತ್ಯುತ್ತಮ ಸಾಹಸ ಪ್ರವಾಸೋಸ್ಯಮ ತಾಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ದೊರೆತಿರುವ 482.22 ಕೋಟಿರೂಪಾಯಿಗಳನ್ನು ಸರ್ಕಾರ ವಿವಿಧೆಡೆಗಳಲ್ಲಿ ವಿಕಾಸ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಉಪಯೋಗಿಸಲಾಗುತ್ತಿದೆ. ಈ ಯೋಜನೆಗಳ ಮುಖ್ಯ ಉದ್ದಿಶ್ಯ ಭಾರತದಲ್ಲಿನ ಸಾಹಸ ಪ್ರವಾಸೋದ್ಯಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಒಯ್ಯುವುದಾಗಿದೆ. ದಿ ಗ್ರೇಟ್ ಹಿಮಾಲಯಸ್ ನ್ಯಾಶನಲ್ ಪಾರಖಸ್‌ಗೆ ವಿಶ್ವಪರಂಪರೆಯ ಕೇಂದ್ರದ ಸ್ಥಾನಮಾನವನ್ನು ನೀಡಲಾಗಿದೆ.

### ಚಲನಚಿತ್ರ ಪ್ರವಾಸೋದ್ಯಮ

ಚಲನಚಿತ್ರ ಪ್ರವಾಸೋದ್ಯಮ ಚಲನಚಿತ್ರ ನಿರ್ಮಾಣ, ಛಾಯಾ ಚಿತ್ರೀಕರಣ ಹಾಗೂ ಚಿತ್ರಜಗತ್ತಿನ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನೊಳಗೊಂಡಿವೆ. ಚಲನಚಿತ್ರ ನಿರ್ಮಾಣಕ್ಕೆ ತಗಲುವ ಸಮಯ ಪ್ರಕ್ರಿಯೆಯಲ್ಲಿ ಭಾಗಿಯಾಗುವವರ ಸಂಖ್ಯೆ ಆಗಾಧವಾಗಿರುತ್ತದೆ. ಈ ಅಂಶಗಳನ್ನು ಚಲನಚಿತ್ರ ಅಭಿವದ್ಧಿ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಕೆಲಸ ಮಾಡುವವರು ಗಮನದಲ್ಲಿಟ್ಟುಕೊಳ್ಳಬೇಕು. ಶ್ರೀಮಂತ ರಾಷ್ಟ್ರಗಳಾದ ಅಮೆರಿಕ ಮತ್ತು ಯೂರೋಪಿನಲ್ಲಿ ಚಲನಚಿತ್ರ ನಿರ್ಮಾಣದ ವೇಳೆಯಲ್ಲಿ ಸಮಯ ಮತ್ತು ಹಣದ ಅಪವ್ಯಯವಾಗದಂತೆ ಗಮ್ಯಸ್ಥಾನ ನಿರ್ವಹಣೆಯ ಸಂಘಟನೆಗಳು ಎಚ್ಚರವಹಿಸುತ್ತವೆ. ಅಂತಾರಾಷ್ಟ್ರೀಯ ಚಲನಚಿತ್ರ ಉತ್ಸವಗಳು ಆಯಾ ದೇಶಗಳಲ್ಲಿನ ಶಿಸ್ತು, ಆಡಳಿತ, ಸಾಮಾಜಿಕ ಮೂಲಭೂತ ಸೌಕರ್ಯಗಳಿಗೆ ಕನ್ನಡಿ ಹಿಡಿಯುತ್ತವೆ. ಈ ಚಲನಚಿತ್ರ ಉತ್ಸವಗಳನ್ನು ದೇಶದ ನಿಸರ್ಗ ಸಂಪತ್ತನ್ನು ಪ್ರದರ್ಶಿಸಲು ಸಾಧನವಾಗಿ ಬಳಸಿಕೊಳ್ಳಲಾಗುತ್ತದೆ.

### ಚಲನಚಿತ್ರ ಸಹನಿರ್ಮಿತ

ಎರಡು ದೇಶಗಳ ನಡುವಿನ ಚಲನಚಿತ್ರ ಸಹ ನಿರ್ಮಿತಿಯನ್ನು ದೇಶದ ಸಂಪನ್ಮೂಲ ಎಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಈ ಸಹನಿರ್ಮಿತಿಯಲ್ಲಿ ನಿರ್ಮಾಣಗೊಂಡ ಚಿತ್ರಗಳಿಗೆ ಎಲ್ಲಾ ತರದ ರಿಯಾಯಿತಿ ಕರಮುಕ್ತಿ ಮುಂತಾದ ಸೌಲಭ್ಯಗಳು ದೊರಕುತ್ತವೆ. ಭಾರತವು ಜರ್ಮನಿ, ಇಟಲಿ, ನ್ಯೂಜಿಲೆಂಡ್, ಬ್ರೆಜಿಲ್ ಮತ್ತು ಫ್ರಾನ್ಸ್ ದೇಶಗಳೊಂದಿಗೆ ಚಲನಚಿತ್ರ ಸಹನಿರ್ಮಿತಿಯ ಒಪ್ಪಂದವನ್ನು ಮಾಡಿಕೊಂಡಿದೆ. ಈಗ ಕತೆಯೊಂದಿಗೆ ಇಲ್ಲಿಗೆ ಬಂದವರು ಚಲನಚಿತ್ರದೊಂದಿಗೆ ದೇಶಕ್ಕೆ ಹಿಂದಿರುಗಬಹುದು. ಮೂರು ವಾರಗಳ ಅವಧಿಯಲ್ಲಿ ಚಲನಚಿತ್ರ ತಯಾರಿಕೆಗೆ ಅನುಮತಿ ದೊರೆಯುತ್ತದೆ. ಅತ್ಯುತ್ತಮ ಮೂಲಭೂತ ಸೌಕರ್ಯಗಳ ಲಭ್ಯತೆ, ಹತ್ತಕ್ಕಿಂತ ಹೆಚ್ಚು ಚಲಚಿತ್ರ ನಿರ್ಮಿತಿಗೆ ಬೇಕಾದ ಆಧುನಿಕ ತಂತ್ರಜ್ಞಾನ ಭರಿತ ಪ್ರಯೋಗಶಾಲೆಗಳು, ಇಂಗ್ಲಿಷ್ ಭಾಷೆ ಬಲ್ಲ ತಾಂತ್ರಿಕವರ್ಗದಿಂದ ಭಾರತ ಚಲನಚಿತ್ರ ನಿರ್ಮಿತಿಗಾಗಿ ಅತ್ಯಂತ ಬೇಡಿಕೆಯಲ್ಲಿರುವ ತಾಣವಾಗಿದೆ. ಭಾರತದಲ್ಲಿ ಅತ್ಯಂತ ಕಮ್ಮಿ ಖರ್ಚಿನಲ್ಲಿ ಚಲನಚಿತ್ರ ನಿರ್ಮಿಸಬಹುದಾಗಿದೆ. ಅತ್ಯಂತ ಪ್ರತಿಭಾವಂತ ಕಲಾವಿದರು ತಾಂತ್ರಿಕವರ್ಗ, ಛಾಯಾಚಿತ್ರಕಾರರು,





ಚಿತ್ರನಿರ್ದೇಶಕರು ಇಲ್ಲಿದ್ದಾರೆ. ಕೇಂದ್ರಿಯ ಆರ್ಥಿಕ ಸಹಾಯ ಯೋಜನೆಯಡಿಯಲ್ಲಿ ಪ್ರವಾಸೋದ್ಯಮ ಸಚಿವಾಲಯ ಮತ್ತು ಕೇಂದ್ರಾಡಳಿತ ಪ್ರದೇಶದ ಆಡಳಿತಾಂಗಗಳು ಚಲನಚಿತ್ರ ಪ್ರವಾಸೋದ್ಯಮದ ಏಳಿಗೆಗಾಗಿ ಪ್ರಯತ್ನಪಡುತ್ತಿವೆ. ಕೇರಳ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ, ಚೆನ್ನೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ, ಕೊಲ್ಕತ್ತಾ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ, ಮುಂಬೈನ ಚಲನಚಿತ್ರೋತ್ಸವಗಳು ಚಲನಚಿತ್ರ ಯೋಜನೆಗಳನ್ನು ಯಶಸ್ವಿಗೊಳಿಸುವ ಸಾಧನೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ.

2016ರಲ್ಲಿ 11.24 ದಶಲಕ್ಷವಿದೇಶಿ ಪ್ರವಾಸಿಗರು ಭಾರತಕ್ಕೆ ಆಗಮಿಸುವ ಸಾಧ್ಯತೆಗಳಿವೆ ಮತ್ತು ದೇಶೀಯ ಪ್ರವಾಸಿಗಳ ಸಂಖ್ಯೆ 1451.46 ದಶಲಕ್ಷವನ್ನು ಮುಟ್ಟುವ ಸಾಧ್ಯತೆಗಳಿವೆ. 330.3 ಬಿಲಿಯನ್ ಅಮೇರಿಕನ್ ಡಾಲರಷ್ಟು ವಿದೇಶಿ ವಿನಿಮಯವನ್ನು ಗಳಿಸುವ ಮತ್ತು 24.5 ದಶಲಕ್ಷ ಜನರಿಗೆ ಉದ್ಯೋಗ ಅವಕಾಶಗಳು ಲಭ್ಯವಾಗುವ ನಿರೀಕ್ಷೆಯಿದೆ. ಪ್ರವಾಸೋದ್ಯಮ ಸಚಿವಾಲಯ, ಸಾಂಸ್ಕೃತಿಕ ಸಚಿವಾಲಯ ಮತ್ತು ಇತರೇ ಸಂಬಂಧಿತ ಸಚಿವಾಲಯಗಳ ಸಹಯೋಗದೊಂದಿಗೆ, ಬಹು ಸಂಸ್ಥೆಗಳ ಸಕ್ರಿಯ ಸಹಭಾಗದಲ್ಲಿ ಪ್ರವಾಸೋದ್ಯಮದಲ್ಲಿನ ಉತ್ಪನ್ನಗಳನ್ನು, ನಿಗದಿತ ಸೇವೆಗಳನ್ನು ಗುರುತಿಸಿ, ಪರಂಪರೆಯನ್ನು ಚಾಲಕ ಶಕ್ತಿಯಾಗಿ ಉಪಯೋಗಿಸಿ ದೇಶದ ಪ್ರವಾಸೋದ್ಯಮದ ಪ್ರಗತಿ ಮತ್ತು ವಿಕಾಸಕ್ಕಾಗಿ ಯೋಜನೆಗಳನ್ನು ರೂಪಿಸುವುದು ಅನಿವಾರ್ಯವಾಗಿದೆ. ❑

# ಆರ್ಥಿಕ ಬೆಳವಣಿಗೆಯಲ್ಲಿ ಪ್ರವಾಸೋದ್ಯಮ

* ಪ್ರೇಮ್ ಸುಬ್ರಹ್ಮಣ್ಯಂ
ಕನ್ನಡಕ್ಕೆ : ಅವಿನಾಶ್



**ಪ್ರವಾಸೋದ್ಯಮದ ಪ್ರಯೋಜನ ಏನೆಂದರೆ, ಇದರಿಂದಾಗಿ ಹಳ್ಳಿಗಳಲ್ಲಿಯೂ ಬಹಳ ಕಡಿಮೆ ವೆಚ್ಚದ ವ್ಯವಸ್ಥೆಗಳೊಂದಿಗೆ ಆರ್ಥಿಕ ಚಟುವಟಿಕೆಗಳನ್ನು ನಡೆಸಬಹುದು. ಅಲ್ಲಿಯ ಜನರ ವಿವಿಧ ಕುಶಲತೆಗಳನ್ನು ಬಳಸಿಕೊಂಡು ಸ್ಥಳೀಯ ಉದ್ಯೋಗಾವಕಾಶಗಳನ್ನು ಸೃಷ್ಟಿಸಬಹುದು.**

**ಭಾ**ರತವು ತನ್ನ ಪ್ರವಾಸೋದ್ಯಮ ಕ್ಷೇತ್ರದಲ್ಲಿರುವ ಅಗಾಧ ಸಾಧ್ಯತೆಗಳನ್ನು ದುಡಿಸಿಕೊಳ್ಳುವಲ್ಲಿ ಹಾಗೂ ಈ ಕ್ಷೇತ್ರವನ್ನು ಆರ್ಥಿಕ ಅಭಿವೃದ್ಧಿ, ಸರ್ವೋದಯಗಳಿಗೆ ಬಳಸಿಕೊಳ್ಳುವಲ್ಲಿ ಹೆಚ್ಚಿನ ಯಶಸ್ಸನ್ನೇನೂ ಸಾಧಿಸಿಲ್ಲ. 12ನೆಯ ಪಂಚವಾರ್ಷಿಕ ಯೋಜನೆಯು ಈ ನಿಟ್ಟಿನಲ್ಲಿ ಗಮನಹರಿಸಿದೆ. ಇಲ್ಲಿಯವರೆಗೂ ಮುಖ್ಯವಾಗಿದ್ದ ವಿದೇಶಿ ಪ್ರವಾಸಿಗರು ಮತ್ತು ವಿದೇಶಿ ವಿನಿಮಯ ಕೇಂದ್ರಿತ ಪ್ರವಾಸೋದ್ಯಮಕ್ಕಿಂತ ಭಿನ್ನವಾದ ಹೆಜ್ಜೆಯನ್ನಿಡಲು ಅದು ಯೋಜಿಸುತ್ತದೆ. ವಿಶ್ವಸಂಸ್ಥೆಯ ವಿಶ್ವಪ್ರವಾಸೋದ್ಯಮ ಕೇಂದ್ರದ ಪರಿಕಲ್ಪನೆಯ ಅನುಸಾರ ಸಹಸ್ರಮಾನದ ಅಭಿವೃದ್ಧಿ ಗುರಿಗಳು ಹಾಗೂ ಸುಸ್ಥಿರ ಅಭಿವೃದ್ಧಿ ಗುರಿಗಳ ನೆರಳಿನಲ್ಲಿ ಪ್ರವಾಸೋದ್ಯಮದ ಪಾತ್ರವನ್ನು ಸಂಯೋಜಿಸಲು ಯೋಜನೆಯು ಬಯಸುತ್ತದೆ.

ಹನ್ನೆರಡನೇ ಯೋಜನೆಯ ಪ್ರಕಾರ, "ಪ್ರವಾಸೋದ್ಯಮವು ಈ ಯೋಜನೆಯ ಆಶಯವಾದ ತ್ವರಿತ, ಸಮಗ್ರ ಹಾಗೂ ಸುಸ್ಥಿರ ಅಭಿವೃದ್ಧಿಗಳನ್ನು ಸಾಧಿಸುವ ಸಾಮರ್ಥ್ಯವನ್ನು ಹೊಂದಿದೆ. ಮುಖ್ಯವಾಗಿ ಇದು ಬಡತನ ನಿವಾರಣೆಗೆ ಪ್ರತ್ಯುಪಾಯವೂ ಆಗಿದೆ. ಗ್ರಾಹಕರನ್ನು ಮನೆಬಾಗಿಲಿಗೆ ತರುವ ಮೂಲಕ ಬಡಜನರ ಉತ್ಪನ್ನ ಹಾಗೂ ಸೇವೆಗಳಿಗೆ ಸುಲಭವಾಗಿರದ ಮಾರುಕಟ್ಟೆ ಪ್ರವೇಶವನ್ನು ಇದು ಲಭ್ಯವಾಗಿಸುತ್ತದೆ. ಮಧ್ಯವರ್ತಿಗಳ ಹಾವಳಿಯನ್ನೂ ಇದು ತಪ್ಪಿಸುತ್ತದೆ. ಎಂತಿದ್ದರೂ, ಈ ಸಾಧ್ಯತೆಯನ್ನು ಭಾರತದ ಪ್ರವಾಸೋದ್ಯಮ ಕ್ಷೇತ್ರವು ಅಂತರಾಷ್ಟ್ರೀಯ ಗುಣಮಟ್ಟದ ಸ್ಪರ್ಧಾತ್ಮಕತೆಯನ್ನು ರೂಢಿಸಿಕೊಳ್ಳುವ ಮೂಲಕ ಮತ್ತು ಬೇಡಿಕೆ–ಪೂರೈಕೆಗಳ ನಡುವಿರುವ ಅಂತರವನ್ನು ಇಲ್ಲವಾಗಿಸುವ ಮೂಲಕ ಮಾತ್ರವೇ ಸಾಕಾರಗೊಳಿಸಿ ಕೊಳ್ಳಬಹುದಾಗಿದೆ. ಅಂತಾರಾಷ್ಟ್ರೀಯ ಪ್ರವಾಸಿಗರನ್ನೂ ಒಳಗೊಂಡಂತೆ, ಭಾರತವು ದೇಶಿಯ ಪ್ರವಾಸೋದ್ಯಮ ಮಾರುಕಟ್ಟೆಯೂ ವಿಸ್ತಾರವಾದುದಾಗಿದೆ.

ಭಾರತದ ದೇಶಿಯ ಪ್ರವಾಸೋದ್ಯಮದ ಬೆಳವಣಿಗೆಗಾಗಿ ಉತ್ಪನ್ನ ಹಾಗೂ ದರವೈವಿಧ್ಯಗಳು ಅತ್ಯಗತ್ಯ. ಭಾರತಕ್ಕೆ ವಿದೇಶಿ ಪ್ರವಾಸಿಗರು ಅನೇಕ ಬಗೆಯ ಕಾರಣಗಳಿಗಾಗಿ, ಅಂದರೆ, ಐಷಾರಾಮಿಯಿಂದ ಹಿಡಿದು ಸರಳ ಆಧ್ಯಾತ್ಮಿಕ ಜೀವನಾನುಭವಗಳಿಗೋಸ್ಕರ ಆಗಮಿಸುತ್ತಾರೆ. ಹಾಗಾಗಿ ಒಂದೇ ತೆರನಾದ ಅಂತಾರಾಷ್ಟ್ರೀಯ ಉತ್ಪನ್ನಗಳ ಮಾರಾಟ ಸ್ಥಳೀಯ ಉದ್ಯಮಶೀಲತೆಗೆ ಸಹಕಾರಿಯಾಗುವುದಿಲ್ಲ. ಆದ್ದರಿಂದಲೇ ಉತ್ಪನ್ನಗಳಲ್ಲಿ ನಾವಿನ್ಯ ಅಗತ್ಯ. ಪೂರೈಕೆಯ ದೃಷ್ಟಿಯಿಂದ ಹೊಸ ಉತ್ಪನ್ನಗಳನ್ನೂ, ಅವುಗಳಿಗೆ ಹೊಸ ಮಾರಾಟಜಾಲವನ್ನೂ ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆಯ ಮೂಲಕ ಒಂದು ಸಮಗ್ರ ಆರ್ಥಿಕ ಮತ್ತು ಕ್ರಿಯಾತ್ಮಕ ಯೋಜನೆಯನ್ನು ರೂಪಿಸುವುದು ಅವಶ್ಯಕ.

ಅಂತೆಯೇ, ಬೇಡಿಕೆಯ ದೃಷ್ಟಿಯಿಂದ ಪರಿಣಾಮಕಾರಿಯಾದ ಬಹುಮುಖಿ ಪ್ರವಾಸಿ ಮಾರುಕಟ್ಟೆಯನ್ನು ನಿರ್ಮಿಸುವ ಮೂಲಕ ಈಗಿರುವ ಮಾಹಿತಿ ಹಂಚಿಕೆಯಲ್ಲಿರುವ ಅಸಮಾನತೆ ತೊಡೆದು ಭಾರತದ ಬ್ರಾಂಡ್‌ಗಳನ್ನು ಪ್ರಸಿದ್ಧಗೊಳಿಸಬಹುದು.

* ಮೂಲ ಸೌಕರ್ಯ ಸಲಹಾಕಾರರು. Email : premsubramaniam@yahoo.com

ಅಂತಾರಾಷ್ಟ್ರೀಯ ಪ್ರವಾಸಕ್ಕೆ ಸ್ಥಳಗಳನ್ನು ಆಯ್ಕೆಮಾಡಿಕೊಳ್ಳುವಾಗ ಅಲ್ಲಿನ ಬೆಲೆಗಳು ಬಹುಮುಖ್ಯವಾಗುತ್ತವೆ. ಪ್ರವಾಸಿಗರ ಮೇಲೆ ಅನಗತ್ಯ ಹಾಗೂ ಹೆಚ್ಚಿನ ತೆರಿಗೆಗಳನ್ನು ಹೇರಲಾಗದು. ಆದ್ದರಿಂದ ಪ್ರವಾಸೋದ್ಯಮ ತೆರಿಗೆಗಳನ್ನು ಅಂತಾರಾಷ್ಟ್ರೀಯ ರೀತಿಗಳಿಗನುಸಾರವಾಗಿ ನಿಗದಿಪಡಿಸಬೇಕು. ಭಾರತದ ಬ್ರಾಂಡ್ ಅನ್ನು ಹಾಗೂ ಪ್ರವಾಸಿ ಜಾಲದ ಸಮಗ್ರ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಸರ್ಕಾರದ ಅನೇಕ ಅಂಗಗಳು ಲಂಬವಾಗಿ ಇದ್ದು, ಖಾಸಗಿ ಹಾಗೂ ಸಾರ್ವಜನಿಕ ವಲಯಗಳು ಅಡ್ಡವಾಗಿ ಇವೆ. ಆದ್ದರಿಂದ, ಪಾರದರ್ಶಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆ ಮತ್ತು ನಿಯಂತ್ರಣ ಚೌಕಟ್ಟುಗಳನ್ನು ನಿರ್ಮಿಸಬೇಕಾಗಿದೆ. ಜೊತೆಗೇ, ಸರಿಯಾದ ಉತ್ತೇಜನ ಮತ್ತು ಸಾಂಸ್ಥಿಕ ಸಂಬಂಧ ವ್ಯವಸ್ಥೆಗಳು ವಿವಿಧ ಪಾಲುದಾರರ ಕ್ರಿಯಾಶಕ್ತಿಯನ್ನು ಉದ್ದೀಪಿಸಲು ಅಗತ್ಯವಾಗಿದೆ. 2012–17 ರ ಸಾಲಿನ ಹನ್ನೆರಡನೇ ಪಂಚವಾರ್ಷಿಕ ಯೋಜನೆಗೋಸ್ಕರ ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ತೆಗೆದಿರಿಸಿರುವ ಒಟ್ಟು ಮೊತ್ತ 15.190 ಕೋಟಿಗಳು."

ಈವರೆಗಿನ ನಮ್ಮ ಯೋಜನಾ ಪ್ರಕ್ರಿಯೆಗಳ ಕ್ಷಮತೆಯು ಅಂತಾರಾಷ್ಟ್ರೀಯ ಗುಣಮಟ್ಟದ್ದಾಗಿದ್ದರೂ, ಅದನ್ನು ಕಾರ್ಯಗತಗೊಳಿಸುವಲ್ಲಿ ನಾವು ಸಫಲರಾಗಿಲ್ಲ. ಇಡೀ ವಿಶ್ವವೇ ಒಪ್ಪಿರುವ ಸಕ್ಷಮ ಆಡಳಿತದ ಮಂತ್ರವೇನೆಂದರೆ ದೃಢವಾದ ಮಾಪನ ಮತ್ತು ಮೌಲ್ಯ ಮಾಪನವ್ಯವಸ್ಥೆಯೊಂದನ್ನು ಹೊಂದಿರುವುದು. ಆದರೆ "ಅಳೆಯಲಾಗದ್ದನ್ನು ಆಳಲಾಗದು" ಎಂಬಈ ಯಶಸ್ಸಿನ ತತ್ವವನ್ನು ನಾವಿನ್ನೂ ಮೈಗೂಡಿಸಿಕೊಂಡಿಲ್ಲ. ಉದಾಹರಣೆಗೆ ಅಧಿಕೃತ ವಸತಿ ಹೋಟೇಲುಗಳ ವ್ಯವಹಾರವನ್ನು, ಪ್ರವಾಸೋದ್ಯಮ ಸಚಿವಾಲಯದ ಅಂಕಿ – ಅಂಶಗಳೊಂದಿಗೆ ಸಮಾಂತರವಾಗಿಟ್ಟು ನೋಡೋಣ. ಈವರೆಗಿನ ನಮ್ಮ ಯೋಜನಾ ಪ್ರಕ್ರಿಯೆಗಳ ಕ್ಷಮತೆಯು ಅಂತಾರಾಷ್ಟ್ರೀಯ ಗುಣಮಟ್ಟದ್ದಾಗಿದ್ದರೂ, ಅದನ್ನು ಕಾರ್ಯಗತಗೊಳಿಸುವಲ್ಲಿ ನಾವು ಸಫಲರಾಗಿಲ್ಲ. ಇಡೀ ವಿಶ್ವವೇ ಒಪ್ಪಿರುವ ಸಕ್ಷಮ ಆಡಳಿತದ ಮಂತ್ರವೇನೆಂದರೆ ದೃಢವಾದ ಮಾಪನ ಮತ್ತು ಮೌಲ್ಯಮಾಪನ ವ್ಯವಸ್ಥೆಯೊಂದನ್ನು ಹೊಂದಿರುವುದು. ಆದರೆ "ಅಳೆಯಲಾಗದ್ದನ್ನು ಆಳಲಾಗದು" ಎಂಬ ಈ ಯಶಸ್ಸಿನ ತತ್ವವನ್ನು ನಾವಿನ್ನೂ ಮೈಗೂಡಿಸಿಕೊಂಡಿಲ್ಲ. ಉದಾಹರಣೆಗೆ ಅಧಿಕೃತ ವಸತಿ ಹೋಟೇಲುಗಳ ವ್ಯವಹಾರವನ್ನು, ಪ್ರವಾಸೋದ್ಯಮ ಸಚಿವಾಲಯದ ಅಂಕಿ – ಅಂಶಗಳೊಂದಿಗೆ ಸಮಾಂತರವಾಗಿಟ್ಟು ನೋಡೋಣ. ಭಾರತದಲ್ಲಿ 2013 ಅ ಕೊನೆಯ ಹೊತ್ತಿಗೆ 1242 ಹೊಟೆಲುಗಳಲ್ಲಿ. ಅಧಿಕೃತವಾಗಿ ಇದ್ದ ಒಟ್ಟು ಹೊಟೆಲ್ ರೂಮುಗಳ ಸಂಖ್ಯೆ 76,858. ವರ್ಷಪೂರ್ತಿಯ ಲೆಕ್ಕ ಮಾಡಹೊರಟರೆ (76,858 X 365) ಒಟ್ಟು 28 ಮಿಲಿಯನ್ ಆಗುತ್ತದೆ. ಅದಿರಲಿ. ಅಂಕಿ– ಅಂಶಗಳ ಪ್ರಕಾರ ನಾವು 7 ಮಿಲಿಯನ್ ವಿದೇಶಿ ಪ್ರವಾಸಿಗರನ್ನು ಮತ್ತು 1147 ದೇಶಿ ಪ್ರವಾಸಿಗರನ್ನು ಸ್ವಾಗತಿಸಿದ್ದೇವೆ. ವಿದೇಶಿ ಪ್ರವಾಸಿಗರ ಒಟ್ಟು ವೆಚ್ಚ 51,587 ಕೋಟಿಗಳು. ಅಂದರೆ ಒಬ್ಬರ ವೆಚ್ಚ ತಲಾ 73,700 ರೂ. ಗಳು. (ಭಾರತ ಪ್ರವಾಸೋದ್ಯಮ ಅಂಕಿ– ಅಂಶ– ಒಂದು ಕಿರುನೋಟ–2013).

ಈ ದತ್ತಾಂಶವನ್ನು ವಾರ್ಷಿಕ ಸರ್ವೆಯ ಜೊತೆಗಿಟ್ಟು ನೋಡಿದಾಗ ಕಂಡುಬರುವುದೇನೆಂದರೆ, ಈ ವ್ಯವಸ್ಥಿತ ಹೊಟೆಲ್ ವಲಯವು ಒಟ್ಟು ಅಂತಾರಾಷ್ಟ್ರೀಯ ಒಳಹರಿವಿನ ಕೇವಲ 20 ಪ್ರತಿಶತ ಮತ್ತು ದೇಸಿ ಮಾರುಕಟ್ಟೆಯ 0.05 ಪ್ರತಿಶತವನ್ನಷ್ಟನ್ನೇ ನಿರ್ವಹಿಸುತ್ತದೆ.

ಈ ಅಂಶಗಳು ಸರಿಯೆಂದಾದಲ್ಲಿ ಅವ್ಯವಸ್ಥಿತವಾದ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವುದೇ ಪ್ರವಾಸೋದ್ಯಮ ಅಭಿವೃದ್ಧಿಯ ಬಹುಮುಖ್ಯ ಅಂಗ. ಇತರೆ ದೇಶಗಳಿಗೆ ಹೋಲಿಸಿದಲ್ಲಿ, ನಾವು ಇನ್ನೂ ಹೆಚ್ಚಿನ ದೂರವನ್ನು ಕ್ರಮಿಸಬೇಕಾಗಿದೆ. ವಿದೇಶಿ ಪ್ರವಾಸೋದ್ಯಮದ ಮಾಹಿತಿಗಳನ್ನು ಒಪ್ಪವಾಗಿ ಕಲೆಹಾಕುವಲ್ಲಿ ನಾವು ಸುಧಾರಿಸಿದ್ದೇವೆ, ಬೇರೆ ಬೇರೆ ವಲಯಗಳಿಂದ ಮಾಹಿತಿಯನ್ನು ಕಲೆಹಾಕುತ್ತೇವಾದರೂ, ಇಡೀ ಪ್ರವಾಸೋದ್ಯಮದ ಸಂಪೂರ್ಣ ಚಿತ್ರ ಕೊಡುವಂತೆ ಅದನ್ನು ಕ್ರಮಬದ್ಧಗೊಳಿಸಿಲ್ಲ. ನಾವು ಮಾಹಿತಿಯನ್ನು ತೆರೆದ ತೋರುವುದಕ್ಕಿಂತ, ಮರೆಮಾಚುವುದು ಹೆಚ್ಚು.

2012 ರ ದತ್ತಾಂಶದ ಪ್ರಕಾರ ಎಎಸ್ಐ ವ್ಯಾಪ್ತಿಗೆ ಒಳಪಟ್ಟಿರುವ 120 ಸ್ಮಾರಕಗಳಿಗೆ



ಹರಿದು ಬರುವ ವಿದೇಶಿ ಪ್ರವಾಸಿಗರ ಸಂಖ್ಯೆ ಸುಮಾರು 3 ಮಿಲಿಯನ್‌ನಷ್ಟು ಹಾಗೂ ಸ್ಥಳೀಯ/ದೇಶೀಯ ಪ್ರವಾಸಿಗರ ಸಂಖ್ಯೆ 46 ಮಿಲಿಯನ್. ಅದರಲ್ಲೂ ಅತಿ ಹೆಚ್ಚು ಪ್ರವಾಸಿಗರನ್ನು ಹೊಂದಿರುವ 10 ಸ್ಮಾರಕಗಳ ಪೈಕಿ, ಏಳು ಸ್ಮಾರಕಗಳು ದಿಲ್ಲಿ ಮತ್ತು ಆಗ್ರಾದಲ್ಲಿಯೇ ಇವೆ, ಅಲ್ಲದೇ ಒಟ್ಟು ಟಿಕೇಟುಗಳ 65 ಪ್ರತಿಶತ ಇವೇ ಒಳಗೊಳ್ಳುತ್ತವೆ. ದಿಲ್ಲಿ ಮತ್ತು ಆಗ್ರಾಕ್ಕೆ ಮೊದಲ ಬಾರಿಗೆ ಭೇಟಿ ಕೊಡುವ ಪ್ರವಾಸಿಗರು ಈ ಏಳರಲ್ಲಿ ಐದನ್ನು ವೀಕ್ಷಿಸಬಹುದೆಂದುಕೊಂಡರೂ, ಇದನ್ನು ತಾಜ್‌ನಂತಹ ಒಂದು ಸ್ಮಾರಕಕ್ಕೆ ಅನ್ವಯಿಸಹೊರಟರೆ ಲೆಕ್ಕಾಚಾರ ಈ ರೀತಿಯಲ್ಲಿರುತ್ತದೆ. ಅಜಮಾಸು ಒಂದು ಮಿಲಿಯದಷ್ಟು ವಿದೇಶಿ ಒಳಹರಿವಿರುವ ಈ ಸ್ಮಾರಕಕ್ಕೆ ಪ್ರವಾಸಕ್ಕಾಗಿ ಬರುವವರು ಬರಿ 0.4 ಮಿಲಿಯದಷ್ಟು, ಉಳಿದ 0.3 ಮಿಲಿಯ ಇತರೆ ಔದ್ಯೋಗಿಕ ಅಥವಾ ವ್ಯಾವಹಾರಿಕ ಕಾರಣಗಳಿಗಾಗಿ ಭೇಟಿ ನೀಡುವವರು. ಮುಖ್ಯ ಆಕರ್ಷಣೆಯೇ ಐತಿಹಾಸಿಕ ಸ್ಮಾರಕಗಳಾಗಿರುವಲ್ಲಿ, ಪ್ರವಾಸಿಗಳ ಒಳಹರಿವು ಯಾಕಿಷ್ಟು ಬಡವಾಗಿದೆಯೆಂಬುದೇ ಯೋಚಿಸಬೇಕಾದ ಸಂಗತಿ.

ಉತ್ತರ ಹುಡುಕ ಹೊರಟರೆ, ನಾವು ನಮ್ಮ ಸ್ಮಾರಕಗಳನ್ನು ಸರಿಯಾಗಿ ಪ್ರದರ್ಶಿಸುವುದರಲ್ಲಿ ಸೋಲುತ್ತಿದ್ದೇವೆಯೆಂಬುದೆ ಸರಿ. ಇಂತಹ ಸ್ಥಳಗಳಲ್ಲಿ ಒಳ್ಳೆಯ ವ್ಯವಹಾರವನ್ನು ತರಬಹುದಾದ ಉತ್ತಮ ಉಪಹಾರ ಮಂದಿರಗಳು, ಕೊಳ್ಳುತಾಣಗಳು, ಇತರೆ ಮೋಜಿನ ಜಾಗಗಳ ವ್ಯವಸ್ಥೆಯೇ ಇಲ್ಲ. ಅಂಗಡಿ ಮಾಲಿಕರು ದಳ್ಳಾಳಿಗಳು ಲೋಭಿಗಳಾಗಿ, ಪ್ರವಾಸಿಗರಿಗೆ ಕೆಟ್ಟ ಅನುಭವವನ್ನು ಕೊಡುತ್ತಾರೆ. ಭಾರತೀಯ ಪುರಾತತ್ವ ಇಲಾಖೆಯ ನಿಯಂತ್ರಣದಲ್ಲಿರುವ ಈ ಸ್ಮಾರಕಗಳನ್ನು, ಅದು ನೂರಾರು ವರ್ಷ ಹಳೆಯ ನಿಯಮಗಳ ಅನುಸಾರ ಆಯಾ ಜಾಗದ ಅನನ್ಯತೆಯನ್ನೂ ಲೆಕ್ಕಿಸದೇ ಎಲ್ಲೆಡೆ



ಹಸಿರು ಹುಲ್ಲುಹಾಸುಗಳನ್ನು ನಿರ್ಮಿಸುವ ಅತಾರ್ಕಿಕ ಯೋಜನೆಗಳನ್ನು ಮಾಡುತ್ತಾ ಬಂದಿದೆ.

ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಂದಾಗಿಯೂ ನಮ್ಮ ಸಂಗ್ರಹಾಗಾರಗಳು ಮತ್ತು ಅವುಗಳ ಅಭಿವ್ಯಕ್ತಿ ಕ್ರಮದಲ್ಲಿ ಏನೂ ಬದಲಾವಣೆಯಾದಂತಿಲ್ಲ. ದಿಲ್ಲಿಯ ನ್ಯಾಷನಲ್ ಮ್ಯೂಸಿಯಮ್ ಮತ್ತು ಜೋಧಪುರದ ಮೆಹರಣಗಢ ಕೋಟೆಯು ಇದಕ್ಕೆ ಅಪವಾದವಾದರೂ, ಇವುಗಳ ಮಾದರಿಯನ್ನು ಮತ್ತಾರೂ ಅನುಸರಿಸಿದಂತಿಲ್ಲ. ಭಾರತದ ಯಾವುದೇ ನಗರದಲ್ಲಿ ನೀವು ಯಾರನ್ನಾದರೂ, ಆ ನಗರದ ಸಂಗ್ರಹಾಗಾರಕ್ಕೆ ಅವರ ಕೊನೆಯ ಭೇಟಿ ಯಾವಾಗ ಆಗಿತ್ತೆಂದು ಕೇಳಿ ನೋಡಿ. ಬಹುತೇಕರು ಅವರ ಶಾಲೆಯ ದಿನಗಳನ್ನೋ ಅಥವಾ ಮನೆಗೆ ಅತಿಥಿಗಳು ಬಂದಾಗ ಹೋಗಿದ್ದನ್ನೋ ನೆನಪಿಸಿ ಕೊಳ್ಳುತ್ತಾರೆ. ಆದರೆ ಒಳ್ಳೆಯ ಪ್ರವಾಸೋದ್ಯಮ ನಿರ್ವಹಣೆ ಇದ್ದರೆ, ಇದನ್ನು ಸುಳ್ಳಾಗಿಸಬಹುದು ಎಂಬುದನ್ನು ದಿಲ್ಲಿಯ ಅಕ್ಷರಧಾಮ ತೋರಿಸಿಕೊಟ್ಟಿದೆ.

ನಮ್ಮ ಬಜೆಟ್‌ನ ಬಹುಪಾಲನ್ನು ಅಂತಾರಾಷ್ಟ್ರೀಯ ಪ್ರವಾಸ ಮಾರುಕಟ್ಟೆಗಳ ಪ್ರಚಾರ ಮತ್ತು ಪ್ರೋತ್ಸಾಹಕ್ಕಾಗಿ ಮೀಸಲಿಡುತ್ತೇವೆ. ಆದರೆ ಈ ಖರ್ಚಿಗೆ ತಕ್ಕ ಲಾಭ ಸಿಗುತ್ತಿದೆಯೇ ಎಂದು ತಿಳಿಯಲು ನಮ್ಮಲ್ಲಿ ಸರಿಯಾದ ಅಳತೆಗೋಲೇ ಇಲ್ಲ, ಪ್ರವಾಸ ಮಾರುಕಟ್ಟೆ ಇದ್ದರೂ, ಅದಕ್ಕೆ ಜನರನ್ನು ಸೆಳೆಯಲು ಬೇಕಾದ ಕಾರ್ಯಕ್ರಮಗಳೇ ಇಲ್ಲ. ನಮ್ಮಲ್ಲಿ ಎಷ್ಟು ಪ್ರವಾಸ ನಿರ್ವಹಣಾ ಸಂಸ್ಥೆಗಳು ತಮ್ಮ ಪ್ರವಾಸಿಗರಿಗೆ ಪ್ರಯಾಣ ವಿವರಗಳ ಮುದ್ರಿತ ಪ್ರತಿಯನ್ನು ಒದಗಿಸುತ್ತವೆ? ತಾಣಗಳ ಮಾಹಿತಿ, ಪ್ರಯಾಣ ದರ ಇವ್ಯಾವ ಮಾಹಿತಿಯನ್ನಾದರೂ ನೀಡುತ್ತವೆಯೆ? ನಾವು ನಮ್ಮ ಟಿ.ವಿ ಜಾಹಿರಾತು ಮತ್ತು ಪ್ರಚಾರವು ಯಾರನ್ನು ತಲುಪಬೇಕಿದೆ? ಅಥವಾ ಇದು ನಮ್ಮ ಬಜೆಟ್ ಹಣವನ್ನು ಖರ್ಚು ಮಾಡುವ ಸರಳ ವಿಧಾನವೆಂದು, ಇದನ್ನು ಮಾಡಲಾಗುತ್ತಿದೆಯೆ? ಇದರಿಂದ ನಮಗೆಷ್ಟು ಲಾಭ ದೊರೆತಿದೆ? ನಮ್ಮ ಜಾಲತಾಣಗಳು ಮತ್ತು ಆನ್‌ಲೈನ್‌ಬುಕ್ಕಿಂಗ್ ವ್ಯವಸ್ಥೆಯು ಎಷ್ಟು ಸಕ್ಷಮವಾಗಿದೆ? ಸೋಷಿಯಲ್ ಮೀಡಿಯಾದಲ್ಲಿ ನಾವು ಕ್ರಿಯಾಶೀಲರಾಗಿದ್ದೇವೆಯೆ? ಇದೀಗ ಹೆಚ್ಚುತ್ತಿರುವ ಪ್ರವಾಸಿ ಬ್ಲಾಗರ್‌ಗಳನ್ನು ನಾವೇಕೆ ಬಳಸಿಕೊಳ್ಳುತ್ತಿಲ್ಲ? ಥಾಯ್‌ಲ್ಯಾಂಡ್ ತನ್ನ ಬ್ಲಾಗರ್‌ಗಳ ಸಮ್ಮೇಳನವನ್ನು ಆಯೋಜಿಸಿರುವುದು, ನಮ್ಮ ಸ್ಪರ್ಧಿಗಳು ಮುಂಚೂಣಿಯಲ್ಲಿರುವುದನ್ನು ಇದು ಹೇಳುತ್ತಿಲ್ಲವೇ? ನಾವು ಸ್ಥಳೀಯ ಮೂಲಮಾರುಕಟ್ಟೆಯ ಬಗ್ಗೆ ಮತ್ತು ಅದರ ಭಾಗಗಳ ಬಗ್ಗೆ ಸಾಕಷ್ಟು ತಿಳಿದು ಕೊಂಡಿದ್ದೇವೆಯೆ?

ಪ್ರವಾಸಿಗರ ಸಂಖ್ಯೆಯಲ್ಲಿ, ಸಾರಿಗೆ ವ್ಯವಸ್ಥೆಯಲ್ಲಿ, ಸ್ಥಳೀಯ ಉದ್ಯೋಗವಕಾಶ ಮತ್ತು ಇತರೆ ಮುಖ್ಯ ಅಂಶಗಳಲ್ಲಿ ಕೇರಳ ಮತ್ತು ಗೋವಾಗಳ ನಡುವಿನ ವ್ಯತ್ಯಾಸವೇ ನಮಗೆ ನಾವು ಸುಮ್ಮನೆ ಕಡಲ್ಪವಾಸಿಗರ ಒಳಹರಿವನ್ನುಅವಲಂಬಿಸದೇ, ವೈಯಕ್ತಿಕ ಪ್ರವಾಸಿಗಳನ್ನು ಉತ್ತೇಜಿಸಬೇಕು ಎಂಬುದನ್ನು ತಿಳಿಸುತ್ತದೆ. ಗೋವಾದಲ್ಲಿ ಎಲ್ಲೆಂದರಲ್ಲಿ ತಲೆಯೆತ್ತಿರುವ ದುಬಾರಿ ಹೋಟೆಲುಗಳ ಬಗ್ಗೆ ಸ್ಥಳೀಯರ ಆಕ್ರೋಶವಿತ್ತು. ಆದರೆ ಹೆಚ್ಚು ಪ್ರವಾಸಿಗರ ಒಳಹರಿವಿರುವ ಕಾಲದಲ್ಲಿ ಸ್ಥಳೀಯರಿಗೆ ಚಿಕ್ಕ ಮನೆ, ಗುಡಿಸಲುಗಳನ್ನು ಬಾಡಿಗೆ ಕೊಡಲು ಅನುಮತಿ ಕೊಟ್ಟು, ಅವರನ್ನು ಸಮಾಧಾನಗೊಳಿಸಲಾಗಿದೆ. ಇದರ ಪರಿಣಾಮವಾಗಿ ಇಂದು ಗೋವಾ ದುಬಾರಿಯಲ್ಲದ ತಂಗುದಾಣಗಳನ್ನು ಹೊಂದಿದ್ದರೂ, ಇನ್ನೊಂದೆಡೆ ಮಾದಕವಸ್ತು ಮಾರಾಟ, ಅನಾಚಾರವೇ ಮುಂತಾದ ಅಪರಾಧಗಳು ಹೆಚ್ಚಿವೆ. ಕೆಲವೇ ಋತುಮಾನದಲ್ಲಿ ಮತ್ತು ಕೆಲವೇ ಸ್ಥಳಗಳಲ್ಲಿ ಮಾತ್ರ ಪ್ರಸರಣಗೊಳ್ಳುವ ಪ್ರವಾಸಿ ಒಳಹರಿವಿನ ಸಮಸ್ಯೆಗಳನ್ನು ಮೀರುವುದು ಹೇಗೆ ಎಂಬ ಪ್ರಶ್ನೆಗಳಿಗೆ ಕೇರಳದ ಪ್ರವಾಸೋದ್ಯಮದ ವಿಕಾಸವೇ ಒಂದು ಉದಾಹರಣೆ. ಕೇರಳದ ಪ್ರವಾಸಿ ಮಾರುಕಟ್ಟೆ ಕೇಂದ್ರಗಳಂತೂ ಪ್ರಚಾರವನ್ನು ಪರಿಣಾಮಕಾರಿಯಾಗಿ ಮಾಡಿ ಕಡಲಾಚೆಯ ವ್ಯಾಪಾರಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ಇವರು ಮಾಧ್ಯಮಗಳ ಸಹಯೋಗದೊಂದಿಗೆ ಕಡಿಮೆ ಮುಂಗಾರಿನ ಕಾಲದಲ್ಲೂ ಪ್ರವಾಸಿಗಳನ್ನು ಆಕರ್ಷಿಸುವ ಸಲುವಾಗಿ ಮಾಡಿದ "ಚೇಸಿಂಗ್ ದಿ ಮಾನ್ಸೂನ್" (ಮುಂಗಾರನ್ನು ಬೆನ್ನತ್ತಿ) ಯೋಜನೆಯಂತೂ ಪ್ರಶಂಸಾರ್ಹವೇ ಸರಿ. ಇಂದು ಚೀನಾದ ಮೂಲ ಮಾರುಕಟ್ಟೆಯ ಸ್ಥಾನ ಎಲ್ಲದರಕ್ಕಿಂತ ಮೇಲೆ. ಇದಕ್ಕಾಗಿ ಅವರು ಮಾಡುವ ಕಾರ್ಯತಂತ್ರ ವಿಧಾನವನ್ನು ನಾವು ಗಮನಿಸಬೇಕು. ಶ್ರೀಲಂಕಾ ದೇಶವಂತೂ ನಮ್ಮ ಪ್ರಧಾನಿಯವರ ಭೇಟಿಯ ವೇಳೆಯೇ ರಾಮಾಯಣದ ಪ್ರಚಾರದ ತನ್ನ ಯೋಜನೆಯನ್ನು ಘೋಷಿಸಿಬಿಟ್ಟಿದೆ. ಅದರೆ ನಮ್ಮ ವಿಧಾನಗಳೆಲ್ಲವೂ ಉತ್ಪನ್ನ ಕೇಂದ್ರಿತವೇ ಹೊರತು, ಆ ದೇಶಗಳಂತೆ ಮಾರುಕಟ್ಟೆ ಕೇಂದ್ರಿತವಲ್ಲ.

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿನ ಆಂತರಿಕ ಸುರಕ್ಷತೆ ಮತ್ತು ಭದ್ರತೆಯ ಕುರಿತಾಗಿ ಅತ್ಯಂತ ಅವಿಶ್ವಾಸ ಮತ್ತು ಭಯ ಮನೆ ಮಾಡಿದೆ. ಇದರ ಪರಿಣಾಮವಾಗಿ ರಾಜಧಾನಿಯ ಸುತ್ತಲಿನ ಪ್ರದೇಶಗಳಿಗೆ ವಿರಮಿಸಲು ಆಗಮಿಸುತ್ತಿದ್ದ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಇಳಿಮುಖವಾಗಿದೆ. ಇದರ ಜೊತೆ ಸ್ವಚ್ಛತೆ ಮತ್ತು 12ನೇ ಪಂಚವಾರ್ಷಿಕ ಯೋಜನೆಯ ಇನ್ನಿತರ ಅಂಶಗಳ ಕುರಿತೂ ಹೆಚ್ಚಿನ ಗಮನ ಬೇಕಾಗಿದೆ. ಆಮೀರ್ ಖಾನ್ ರ ಸಹಯೋಗದೊಂದಿಗೆ "ಪ್ರವಾಸಿಗರೊಂದಿಗೆ ಸಭ್ಯತೆಯಿಂದ ವರ್ತಿಸುವ" ಕುರಿತು ಮಾಡಲಾದ ಜಾಹಿರಾತುಗಳು, ಪುರಸಭೆ ಮತ್ತು ಫೌದ್ ಲೋಖಂಡವಾಲಾದ ಶ್ರಮದಿಂದ ಸಾಧ್ಯವಾದ ಸಾರ್ವಜನಿಕ ಶೌಚಾಲಯ ಸ್ವಚ್ಛತಾ ಅಭಿಯಾನಗಳು ಕೆಲವು ಪರಿಣಾಮಕಾರಿ ಕಾರ್ಯಕ್ರಮಗಳು. ಇಂತಹ ಕಾರ್ಯಗಳು ಜನರ ವರ್ತನೆಯ ಮೇಲೆ ಅಪಾರ ಪರಿಣಾಮವನ್ನು ಬೀರಬಲ್ಲದು ಮತ್ತು ಇದರ ಜೊತೆ ಜೊತೆಗೆ ಸಾಮಾಜಿಕ ಜಾಲತಾಣಗಳನ್ನು ಸರಿಯಾಗಿ ಬಳಸಿ ಇದನ್ನು ಇನ್ನೂ ಪರಿಣಾಮಕಾರಿಯಾಗಿಸಬಹುದು.

ಕೃಷಿ ಸಂಬಂಧಿ ಪ್ರವಾಸಿಗರನ್ನು ಉತ್ತೇಜಿಸುವಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ನಡೆಯಬೇಕಿದೆ. ಕೇರಳದಲ್ಲಿ ಕುಟುಂಬಶ್ರೀ ಯೋಜನೆ, ರೋಜರ್ ಲಾಂಗ್‌ಬರ್‌ನ ಫ್ರೆಂಚ್‌ತೋಟಗಳು ಮತ್ತು ಸುರಿಂದರ್ ಭು ರವರ ತೋಟಗಳು ಈ ರೀತಿಯ ಪ್ರವಾಸಿ ಮಾರುಕಟ್ಟೆಯ ಉತ್ತಮ ಹಾಗೂ

ಯಶಸ್ವಿ ಉದಾಹರಣೆಗಳು. ಈ ರೀತಿಯ ಪ್ರಯತ್ನಗಳು ಬಹಳೆಡೆ ನಡೆಯಬೇಕಿದೆ.

ಪ್ರವಾಸೋದ್ಯಮದ ಪ್ರಯೋಜನ ಏನೆಂದರೆ, ಇದರಿಂದಾಗಿ ಹಳ್ಳಿಗಳಲ್ಲಿಯೂ ಬಹಳ ಕಡಿಮೆ ವೆಚ್ಚದ ವ್ಯವಸ್ಥೆಗಳೊಂದಿಗೆ ಆರ್ಥಿಕ ಚಟುವಟಿಕೆಗಳನ್ನು ನಡೆಸಬಹುದು. ಅಲ್ಲಿಯ ಜನರ ವಿವಿಧ ಕುಶಲತೆಗಳನ್ನು ಬಳಸಿಕೊಂಡು ಸ್ಥಳೀಯ ಉದ್ಯೋಗಾವಕಾಶಗಳನ್ನು ಸೃಷ್ಟಿಸಬಹುದು. ಇದನ್ನು 12ನೇ ಯೋಜನೆಯಡಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಇದಕ್ಕೋಸ್ಕರ "ಹೊನಾರ್ ಸೆ ರೋಜಗಾರ್" ಕಾರ್ಯಕ್ರಮದಡಿ ಆರ್ಥಿಕ ಸಹಾಯವನ್ನೂ ನೀಡಲಾಗಿದೆ.

ಭಾರತ ಪ್ರವಾಸೋದ್ಯಮ ಸಚಿವಾಲಯವು ಇದನ್ನು ಯು.ಎನ್.ಡಿ.ಪಿ ಯ ಸಹಕಾರದೊಂದಿಗೆ 39 ಗ್ರಾಮೀಣ ಪ್ರದೇಶಗಳಲ್ಲಿ ನಡೆಸಿತು, ಆದರೆ ಅದರಲ್ಲಿ 15 ಪ್ರತಿಶತ ಮಾತ್ರವೇ ಆರ್ಥಿಕ ಕೊಡುಗೆ ವ್ಯಯವಾದ ನಂತರವೂ ಮುಂದುವರೆಯಿತು. ಪ್ರವಾಸೋದ್ಯಮವು ತುಂಬ ಸ್ಪರ್ಧಾತ್ಮಕ ವ್ಯವಹಾರ. ಇಲ್ಲಿ ಮೌಲ್ಯಯುತ ವ್ಯಾಪಾರದ ಜ್ಞಾನವು ಸರಿಯಾದ ಪ್ರವಾಸಿಗರನ್ನು ಸೆಳೆಯಲು ಅತ್ಯಗತ್ಯ. ಐಷಾರಾಮಿ ಪಂಚತಾರಾ ಹೋಟೆಲುಗಳಿಗೆ ನಾವು 40 ಪ್ರತಿಶತದಷ್ಟು ತೆರಿಗೆಯನ್ನೇನೋ ಹಾಕುತ್ತೇವೆ, ಆದರೆ ಪ್ರತಿಯಾಗಿ ಸರಿಯಾದ ರಸ್ತೆ, ನೀರು, ಕಸ ನಿರ್ವಹಣೆಯ ಸೌಲಭ್ಯವನ್ನು ಕೊಡಲಾರೆವು. ಹೆದ್ದಾರಿಗಳಲ್ಲಿ ಪ್ರವಾಸಿ ವಾಹನಗಳಿಗೆ ಅಧಿಕ ಸುಂಕ ವಿಧಿಸಲಾಗುತ್ತದಾದರೂ, ರಸ್ತೆಯಲ್ಲಿ ಶುದ್ಧ ಶೌಚಾಲಯವೇ ಮುಂತಾದ ಸೌಕರ್ಯಗಳು ಸರಿಯಾಗಿಲ್ಲ. **ಭಾರತಕ್ಕೆ ಹೋದಾಗ ಕಡಿಮೆ ನೀರು ಕುಡಿಯಿರಿ, ಬಾಯಾರಿದರೂ ಸಹಿಸಿಕೊಳ್ಳಿ, ಆದರೆ ಶೌಚಾಲಯಕ್ಕಂತೂ ಹೋಗದಿರಿಯೆಂದು ಪ್ರವಾಸಿ ಜಪಾನಿ ಮಹಿಳೆಯರು ಹೇಳಿಕೊಳ್ಳುತ್ತಾರಂತೆ**. ಇದು ನಮ್ಮ ಅಸಹ್ಯವೆನಿಸುವ ಸ್ಥಿತಿಯ ದ್ಯೋತಕ.

ಇಂದಿನ ಹೊಸ ತಲೆಮಾರಿನ ಪ್ರವಾಸಿಗನನ್ನು ತಲುಪಲು ಹೊಸ ವಿಧಾನಗಳನ್ನೇ ಬಳಸಬೇಕು. ಇವತ್ತಿನ ಪ್ರವಾಸಿಗ ಭಾರತದಲ್ಲೇ ಅಂತಾರಾಷ್ಟ್ರೀಯ ಗುಣಮಟ್ಟದ ಸೇವೆಯನ್ನು ಬಯಸುತ್ತಾನೆ. ಹಾಗಾಗಿ ಒಳ್ಳೆಯ, ಸುಂದರ ಕಟ್ಟಡಗಳಷ್ಟೇ ಮುಖ್ಯವಾಗಿ ಇದಕ್ಕೆ ಬೇಕಾದ ಕುಶಲತೆಯ, ಸಾಮರ್ಥ್ಯದ ತರಬೇತಿಯನ್ನು ಕೆಲಸಗಾರರಿಗೆ




ನೀಡಬೇಕಾಗಿದೆ. ಗುಣಮಟ್ಟದ ವ್ಯವಸ್ಥೆಯನ್ನು ಪ್ರವಾಸಿಗನ ಆಕಾಂಕ್ಷೆಗಳನ್ನು ತಲುಪುವಂತೆ ಬದಲಿಸಬೇಕೆ ವಿನಾ, ಸಾಂಪ್ರದಾಯಿಕ "ವಿಶ್ವದರ್ಜೆ"ಯ ಕಲ್ಪನೆಗೆ ತಕ್ಕಂತೆ ಮಾಡಿಬಿಡುವುದರಲ್ಲಿ ಅರ್ಥವಿಲ್ಲ. ಬೆಳೆಯುತ್ತಿರುವ ಪ್ರವಾಸೋದ್ಯಮದಲ್ಲಿ ಸ್ಥಳೀಯ ಮತ್ತು ವಿದೇಶಿ ಬಂಡವಾಳ ಹೂಡಿಕೆದಾರರಿಗೆ ವಿಪುಲ ಅವಕಾಶಗಳಿವೆ. ಮುಖ್ಯ ಐಟಿ ನಗರಗಳಲ್ಲಿ ಬುಸಿನೆಸ್ ಹೊಟೆಲುಗಳಲ್ಲಿ ತೊಡಗಿಸಲು ಹೂಡಿಕೆದಾರರು ಉತ್ಸುಕರಾಗಿದ್ದಾರೆ. ಅದಕ್ಕೆ ತಕ್ಕಂತೆ ನಗರಗಳ ವಿಸ್ತಾರವೂ ಹೆಚ್ಚುತ್ತಿದೆ. ಯೋಜಿತ ನಗರಗಳು ವಿಶಿಷ್ಟ ಸಂಸ್ಕೃತಿ, ಪಾಕಪದ್ದತಿ ಹಾಗೂ ಕಲೆಗಳನ್ನು ಒಳಗೊಳ್ಳಲು ಪ್ರಯತ್ನಿಸುತ್ತದೆ. ಇಂತಹ ಪ್ರದೇಶಗಳ ಮೂಲಭೂತ ಸೌಕರ್ಯಗಳನ್ನು 25 ಪ್ರತಿಶತವಾದರೂ ಉತ್ತಮಗೊಳಿಸಿದಲ್ಲಿ, ಅಲ್ಲಿನ ಯೋಜನೆಗಳಿಗೆ ತಗಲುವ ವೆಚ್ಚ ಮತ್ತು ಸಮಯ ಎರಡನ್ನೂ ಕಡಿಮೆಗೊಳಿಸಬಹುದು.

ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸಬೇಕಾದರೆ ಅದಕ್ಕೊಂದು ಸಮರ್ಥ ಕಾರ್ಯಸೂಚಿಬೇಕು. ದುರಾದೃಷ್ಟವಶಾತ್ ಭಾರತದಲ್ಲಿ ಇದನ್ನು ಮಾಡಲಾಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯಾಡಳಿತದ ಜವಾಬ್ದಾರಿಗಳು ಸರಿಯಾಗಿ ನಿರ್ವಚಿಸಲ್ಪಟ್ಟಿದ್ದರೂ, ಜಿಲ್ಲಾ ಮಟ್ಟದ ಪ್ರವಾಸೋದ್ಯಮ ಕೌನ್ಸಿಲ್‌ಗಳನ್ನು ಪಾರದರ್ಶಕತೆಯೊಂದಿಗೆ ನಡೆಸಲಾಗುತ್ತಿಲ್ಲ. ವೃತ್ತಿಪರರ ಒಡಂಬಡಿಕೆಯೊಂದಿಗೆ ಒಂದು ಅಧಿಕೃತ ಸಂರಚನೆ ಇಲ್ಲದಿರುವುದು ಭಾರತದ ಪ್ರವಾಸೋದ್ಯಮದಲ್ಲಿ ಮಾತ್ರವೇ. ನಮ್ಮ ಅಧಿಕಾರಿಗಳು ತಮಗೆ ಬೇಕಾದ ಸ್ಥಳಗಳನ್ನು ತೆರಿಗೆದಾರರ ಹಣದಲ್ಲಿ ಸುತ್ತಲು, ಪ್ರವಾಸೋದ್ಯಮವನ್ನು ಬಳಸಿಕೊಂಡಂತಿದೆ. ಒಳ್ಳೆಯ ಪ್ರವಾಸೋದ್ಯಮ ಸೇವೆಯು ಹಲವು ಸಚಿವಾಲಯಗಳ ಸಂಘಟಿತ ಪ್ರಯತ್ನದಿಂದ ಮಾತ್ರ ಸಾಧ್ಯ. ಗ್ರಾಹಕರ ಅನುಭವವು ವೀಸಾ, ವಿಮಾನ ಸಾರಿಗೆ, ಆರೋಗ್ಯ ನಿಯಮಗಳು, ಮತ್ತು ನಿಷೇಧಗಳನ್ನು ಅವಲಂಬಿಸಿರುತ್ತದೆ ಮತ್ತು ಅವು ಗೃಹ, ವಿಮಾನಯಾನ, ಆರೋಗ್ಯ, ವಿತ್ತ ಹಾಗೂ ಪರಿಸರ ಮತ್ತು ಅರಣ್ಯ ಸಚಿವಾಲಯಗಳ ಕೆಳಗೆ ಬರುವ ಸೇವೆಗಳಾಗಿವೆ.

ಇತ್ತೀಚಿಗಿನ ದಿನಗಳಲ್ಲಿ ಸರಿಯಾದ ಪೂರ್ವತಯಾರಿಯಿಲ್ಲದೇ ಹೊಸ ಅಭಿಯಾನಗಳನ್ನು ಆರಂಭಿಸುವ ಅಭ್ಯಾಸ ಶುರುವಾಗಿದೆ. ಮೂಲ ಮಾರುಕಟ್ಟೆ, ಅಲ್ಲಿರುವ ಸ್ಪರ್ಧಾತ್ಮಕತೆ, ಅಲ್ಲಿ ನಡೆಸುವ ಯೋಜನೆಗೆ ತಗಲುವ ವೆಚ್ಚ ಇದಾವುದನ್ನೂ ಪರಿಗಣಿಸದೇ ಹೊಸ ಅಭಿಯಾನವನ್ನು ರೂಪಿಸುವುದರಲ್ಲಿ ಅರ್ಥವಿಲ್ಲ. ವ್ಯಾಪಾರೋದ್ಯಮಕ್ಕೆ ಸರಿಯಾದ ಕಾರ್ಯತಂತ್ರ ಬೇಕು. ಮೊದಲು ತಾಣದ ಅಥವಾ ವಿಷಯದ ಕುರಿತು ಆಸಕ್ತಿ ಕೆರಳಿಸಬೇಕು. ಗ್ರಾಹಕರನ್ನು ಸೆಳೆಯಬೇಕು. ನಂತರ ಅವರು ಮತ್ತೆ ಮತ್ತೆ ಬರುವಂತೆ ಮಾಡಲು ಗುಣಮಟ್ಟದ ಹಾಗೂ ತೃಪ್ತಿಕರ ಸೇವೆಯನ್ನು ಕೊಡಬೇಕು. ಇತ್ತೀಚಿಗಿನ "ದಿ ಇನ್‌ಕ್ರೆಡಿಬಲ್ ಇಂಡಿಯಾ" ಅಭಿಯಾನವು ಜನರಲ್ಲಿ ಆಸಕ್ತಿ ಕೆರಳಿಸುವಲ್ಲಿ ಯಶಸ್ವಿಯಾಗಿದೆ. ಇದನ್ನೂ ಇನ್ನಿತರೆ ಅಭಿಯಾನಗಳೂ ಸಾಧಿಸಬೇಕಿದೆ.

ಸಿನೆಮಾ ಮತ್ತು ಕ್ರಿಕೆಟ್‌ನಲ್ಲಿರುವಂತೆಯೇ ಪ್ರವಾಸೋದ್ಯದಲ್ಲೂ ಸ್ವಯಂ ಘೋಷಿತ ಪರಿಣತರಿದ್ದಾರೆ. ಗದ್ದಲದಲ್ಲಿ ನಿಜವಾದ ತಜ್ಞರ ಅಭಿಪ್ರಾಯಗಳೇ ಕ್ಷೀಣವಾಗಿಬಿಡುವ ಸಾಧ್ಯತೆ ಇದೆ. 12ನೇ ಪಂಚವಾರ್ಷಿಕ ಯೋಜನೆಯ ಕಾರ್ಯತಂತ್ರಗಳ ಕುರಿತು ಚರ್ಚಿಸಬಲ್ಲ, ವಿವಿಧ ಕ್ಷೇತ್ರದ ವೃತ್ತಿಪರರ ಅರ್ಥಪೂರ್ಣ ಸಂವಾದಗಳಿಗೆ ವೇದಿಕೆಯನ್ನು ಕಲ್ಪಿಸಬೇಕಿದೆ. ❑

ವೈವಿಧ್ಯ

# ಕೈ ಬೀಸಿ ಕರೆವ ಕರುನಾಡು

* ಡಾ|| ಕೆ.ಎಸ್. ನಾಗಪತಿ



ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಬೆಳೆಸಲು ವಿಪುಲ ಅವಕಾಶಗಳಿವೆ. ಪ್ರವಾಸೋದ್ಯಮದಲ್ಲಿ ತೊಡಗಿಕೊಂಡವರೆಲ್ಲರೂ ಇನ್ನೂ ಹೆಚ್ಚು ವೃತ್ತಿಪರತೆಯಿಂದ ಹಾಗೂ ಬದ್ಧತೆಯಿಂದ ಕೆಲಸ ಮಾಡಿದರೆ ಕರ್ನಾಟಕ ಪ್ರವಾಸೋದ್ಯಮವನ್ನು ಭಾರತದಲ್ಲಿ ಒಂದನೇ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತದೆ.

ಪ್ರವಾಸೋದ್ಯಮ ಅತೀ ವೇಗವಾಗಿ ಬೆಳೆಯುತ್ತಿರುವ ಕೈಗಾರಿಕೆಯಾಗಿದೆ. ಇದು ಉದ್ಯೋಗ ಸೃಷ್ಟಿಸುವಲ್ಲಿ ಹಾಗೂ ಆದಾಯ ತರುವಲ್ಲಿ ವಿಶ್ವದ ಎರಡನೇ ಅತಿ ದೊಡ್ಡ ಕೈಗಾರಿಕೆಯಾಗಿದೆ. ಪ್ರವಾಸೋದ್ಯಮದ ಸುಸ್ಥಿರ ಬೆಳವಣಿಗೆ ಬಗ್ಗೆ ನೋಡಿಕೊಳ್ಳಲು ಹಾಗೂ ಇದರ ಬೆಳವಣಿಗೆ ಬಗ್ಗೆ ಅಧಿಕೃತ ಮಾಹಿತಿ ಕೊಡಲು ವಿಶ್ವದಲ್ಲಿ ಎರಡು ಸಂಸ್ಥೆಗಳಿವೆ. – ವಿಶ್ವ ಸಂಸ್ಥೆಯ ವಿಶ್ವ ಪ್ರವಾಸೋದ್ಯಮ ಸಂಸ್ಥೆ ಹಾಗೂ ವಿಶ್ವ ಪ್ರಯಾಣ ಹಾಗೂ ಪ್ರವಾಸೋದ್ಯಮ ಪರಿಷತ್ ಮೊದಲನೇ ಸಂಸ್ಥೆ ಸುಸ್ಥಿರ ಪ್ರವಾಸೋದ್ಯಮದ ಬೆಳವಣಿಗೆಗೆ ಸಾಕಷ್ಟು ಮಾರ್ಗದರ್ಶಿ ಸೂತ್ರವನ್ನು ಕೊಡುತ್ತದೆ. ಹಾಗೂ ಎರಡನೇ ಸಂಸ್ಥೆ – ವಿಶ್ವದೆಲ್ಲೆಡೆ ಪ್ರವಾಸೋದ್ಯಮದ ಬೆಳವಣಿಗೆ ಬಗ್ಗೆ ಅಂಕಿ–ಅಂಶಗಳನ್ನು ಕೊಡುತ್ತದೆ. ಈ ಸಂಸ್ಥೆ ಲಂಡನ್ನಿನ ಆಕ್ಸಫರ್ಡ್ ವಿಶ್ವವಿದ್ಯಾಲಯದ ಆರ್ಥಿಕ ವಿಭಾಗದೊಂದಿಗೆ ಒಪ್ಪಂದ ಮಾಡಿಕೊಂಡು, ಅದರ ಸಹಯೋಗದಲ್ಲಿ ಪ್ರವಾಸೋದ್ಯಮದಿಂದ ಆಗುವ ಆರ್ಥಿಕ ಪರಿಣಾಮದ ಸಂಶೋಧನೆ ಕೈಗೊಂಡು ಮಾಹಿತಿಯನ್ನು ಕೊಡುತ್ತದೆ.

ಈ ಮಾಹಿತಿಯ ಪ್ರಕಾರ 2014ರಲ್ಲಿ ವಿಶ್ವದಲ್ಲಿ ಒಟ್ಟು ಪ್ರವಾಸೋದ್ಯಮದ ವ್ಯವಹಾರ 7.6 ಟ್ರಿಲಿಯನ್ ಅಮೆರಿಕನ್ ಡಾಲರ್ ಆಗಿರುತ್ತದೆ. ಇದು ವಿಶ್ವದ ಆದಾಯಕ್ಕೆ 580.9 ಬಿಲಿಯನ್ ಕೊಡುಗೆ ನೀಡಿದೆ. ಪ್ರವಾಸೋದ್ಯಮದಿಂದ ವಿಶ್ವ ಆದಾಯಕ್ಕೆ 9.5% ಕೂಡಿಕೆಯಾಗಿರುತ್ತದೆ. ಇವುಗಳಲ್ಲಿ ಬಹು ಭಾಗ ಯುರೋಪ್ ಹಾಗೂ ಉತ್ತರ ಅಮೆರಿಕಾದ ಪಾಲಾಗಿದೆ. 2014ರಲ್ಲಿ 70 ಮಿಲಿಯನ್ ಜನಸಂಖ್ಯೆ ಇರುವ ಫ್ರಾನ್ಸ್‌ಗೆ 83 ಮಿಲಿಯನ್ ಅಂತಾರಾಷ್ಟ್ರೀಯ ಪ್ರವಾಸಿಗರು ಭೇಟಿ ಕೊಟ್ಟು, ಅದು ವಿಶ್ವದ ಪ್ರಥಮ ಸ್ಥಾನದ ದೇಶವಾಗಿದೆ. 67 ಮಿಲಿಯನ್ ಅಂತರ ರಾಷ್ಟ್ರೀಯ ಪ್ರವಾಸಿಗರು ಭೇಟಿ ಕೊಟ್ಟಿರುವ ಅಮೆರಿಕಾ ಎರಡನೇ ಸ್ಥಾನದಲ್ಲಿದೆ. ಹಾಗೂ ಚೈನಾ ಮೂರನೇ ಸ್ಥಾನದಲ್ಲಿದೆ.

ಪಟ್ಟಿ – 1 ಹಾಗೂ 2 ಪ್ರವಾಸೋದ್ಯಮದ ಬೆಳವಣಿಗೆ ಹಾಗೂ ಪ್ರಾಮುಖ್ಯತೆಯನ್ನು ಹೇಳುತ್ತದೆ. ವಿಶ್ವದ ಸರಾಸರಿಗಿಂತ ಭಾರತದಲ್ಲಿ ಪ್ರವಾಸೋದ್ಯಮದ ಕೊಡುಗೆ ಗಣನೀಯವಾಗಿ ಕಡಿಮೆ ಇದೆ. ಆದ್ದರಿಂದ ಸುಸ್ತಿರ ಪ್ರವಾಸೋದ್ಯಮದ ಬೆಳವಣಿಗೆಗೆ ಭಾರತದಲ್ಲಿ ಸಾಕಷ್ಟು ಅವಕಾಶಗಳಿವೆ. 5 ಸಾವಿರ ವರ್ಷದ ಇತಿಹಾಸವಿರುವ ಭಾರತದಲ್ಲಿ ಪ್ರವಾಸಿಗರು ಇಷ್ಟ ಪಡುವ ಎಲ್ಲವೂ ಇದೆ. ಹಿಮಾಲಯ ಪರ್ವತ ಶ್ರೇಣಿಗಳು, ಕಣಿವೆಗಳು, ನದಿಗಳು, ಜಲಾಶಯಗಳು, ಪ್ರಾಚೀನ ಸ್ಮಾರಕಗಳು, ಚಾರಿತ್ರಿಕ ಪ್ರದೇಶಗಳು, ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ಬೌದ್ಧವಿಹಾರಗಳು, ಜೈನ ಬಸದಿಗಳು ಹಾಗೂ ಶಿಲ್ಪ ಕಲಾಕೃತಿಗಳು ವಿಶ್ವದಲ್ಲಿಯೇ ಅತೀ ಎತ್ತರದ ಏಕ ಶಿಲಾ ಪ್ರತಿಮೆಯಾಗಿರುವ ಬಾಹುಬಲಿ, ವನ್ಯಜೀವಿಗಳು, ಪಕ್ಷಿಧಾಮಗಳು ವೈವಿಧ್ಯಮಯ ಸಂಸ್ಕೃತಿ ಮುಂತಾದ ಎಲ್ಲವೂ ಇದೆ.

ಯೂರೋಪ್ ಹಾಗೂ ಅಮೆರಿಕಕ್ಕೆ ಹೋಲಿಸಿದಲ್ಲಿ ಇಲ್ಲಿ ಖರ್ಚು ಕೂಡ ಕಡಿಮೆಯಾಗಿದೆ. 2014ರಲ್ಲಿ ಭಾರತಕ್ಕೆ ಬಂದಿರುವ ಅಂತಾರಾಷ್ಟ್ರೀಯ ಪ್ರವಾಸಿಗರ ಸಂಖ್ಯೆ 6.71 ಮಿಲಿಯನ್ ಮಾತ್ರ. ಆದರೆ

* ನಿರ್ದೇಶಕರು, ಮಹಾಜನ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆ, ಮೈಸೂರು.

ವಿಶ್ವದ ಅಂತಾರಾಷ್ಟ್ರೀಯ ಪ್ರವಾಸಿಗರ ಸಂಖ್ಯೆ 1.14 ಬಿಲಿಯನ್. ಅಂದರೆ ಭಾರತಕ್ಕೆ ಬಂದವರು ಶೇಕಡ 0.5 ಕ್ಕಿಂತ ಕಡಿಮೆ. ಒಬ್ಬ ಪ್ರವಾಸಿ ಲಂಡನ್ನಿನಲ್ಲಿ, ನ್ಯೂಯಾರ್ಕ್‌ನಲ್ಲಿ ಅಥವಾ ಟೋಕಿಯೊದಲ್ಲಿ ಮಾಡುವ ಸಾಮಾನ್ಯ ಖರ್ಚಿನ ಕೇವಲ 25% ಮಾಡಿದರೆ ಭಾರತದಲ್ಲಿ ಪ್ರವಾಸ ಮಾಡಬಹುದು. ನಮ್ಮ ದೇಶದಲ್ಲಿ ಅಮೇರಿಕ ಅಥವಾ ಯೂರೋಪ್‌ನಿಂದ ಪ್ರವಾಸಿಗರು ಮಾಡುವ ಖರ್ಚು ಬಹಳ ಕಡಿಮೆ ಇದೆ. ಪ್ರವಾಸಿಗರು ಇಷ್ಟ ಪಡುವ ಎಲ್ಲವೂ ಇದ್ದು ಹಾಗೂ ಖರ್ಚು ಕಡಿಮೆ ಇದ್ದರೂ, ಏಕೆ ನಮ್ಮ ದೇಶಕ್ಕೆ ಪ್ರವಾಸಿಗರು ಬರುತ್ತಿಲ್ಲ ಎನ್ನುವ ಪ್ರಶ್ನೆ ಏಳುತ್ತದೆ. ಇದಕ್ಕೆ ಕಾರಣ, ಸರ್ಕಾರ, ಪ್ರವಾಸೋದ್ಯಮದಲ್ಲಿ ತೊಡಗಿಕೊಂಡವರು ಹಾಗೂ ನಾವೆಲ್ಲಾ ಸಾರ್ವಜನಿಕರು. ಇತ್ತೀಚಿನವರೆಗೂ ನಮ್ಮ ಸರ್ಕಾರಕ್ಕೆ ಹಾಗೂ ಸಾರ್ವಜನಿಕರಿಗೆ, ಪ್ರವಾಸೋದ್ಯಮ ಮಹತ್ವದ ಅರಿವಾಗಿರಲಿಲ್ಲ. 2002 ರಲ್ಲಿ ಪ್ರಥಮವಾಗಿ ಒಂದು ಪ್ರವಾಸೋದ್ಯಮ ನೀತಿಯನ್ನು ಕೇಂದ್ರ ಸರ್ಕಾರ ಪ್ರಕಟಿಸಿತು. ಅದರಲ್ಲಿ ಪ್ರವಾಸೋದ್ಯಮದ ಬೆಳವಣಿಗೆಗೆ ಪೂರಕವಾದ ಹಲವು ಅಂಶಗಳನ್ನು ಹೇಳಲಾಗಿದೆ. ಚೈನಾ ತನ್ನ ಒಟ್ಟು ದೇಶೀಯ ಉತ್ಪನ್ನ ಶೇ. 3.8 ಖರ್ಚು ಮಾಡುತ್ತಿದೆ. ಹಲವು ರಾಷ್ಟ್ರಗಳು ಶೇ. 5% ರಿಂದ 12% ವರೆಗೂ ಖರ್ಚು ಮಾಡುತ್ತಿದೆ. ಆದರೆ ಭಾರತ ಸರ್ಕಾರ 12ನೇ ಪಂಚವಾರ್ಷಿಕ ಯೋಜನೆಯಲ್ಲಿ 22800 ಕೋಟಿ ತೆಗೆದಿರಿಸಿದೆ. ಇದು 5 ವರ್ಷದಲ್ಲಿ ಪ್ರವಾಸೋದ್ಯಮಕ್ಕೆ ಖರ್ಚು ಮಾಡಬೇಕಾದ ಹಣ ಇದು ನಮ್ಮ ಒಟ್ಟು ದೇಶೀಯ ಉತ್ಪನ್ನ ಶೇ. ಒಂದಕ್ಕಿಂತ ಕಡಿಮೆ ಇದೆ.

**ಪಟ್ಟಿ – 1 : 2014ರಲ್ಲಿ ವಿಶ್ವ ಪ್ರವಾಸೋದ್ಯಮದ ಅಂಕಿ ಅಂಶಗಳು**

| ಕ್ರ ಸಂ. | | ಅಮೆರಿಕನ್ ಬಿಲಿಯನ್ ಡಾಲರ್‌ಗಳಲ್ಲಿ | ಶೇಕಡಾವಾರು ಒಟ್ಟು ಕೊಡುಗೆ |
|---|---|---|---|
| 1 | ದೇಶೀಯ ಉತ್ಪನ್ನಕ್ಕೆ ಕೊಡುಗೆ (ಜಿ.ಡಿ.ಪಿ) | 364.8 ಬಿಲಿಯನ್ಸ್ | 3.9% |
| 2 | ಒಟ್ಟು ಕೊಡುಗೆ | 580.9 ಬಿಲಿಯನ್ಸ್ | 9.8% |
| 3 | ಒಟ್ಟು ಉದ್ಯೋಗ | 276 ಮಿಲಿಯನ್ ಕೆಲಸ | 9.4% |
| 4 | ಅಂತಾರಾಷ್ಟ್ರೀಯ ಪ್ರವಾಸಿಗರ ಒಟ್ಟು ವೆಚ್ಚ | 383.8 ಬಿಲಿಯನ್ಸ್ | 5.7% |
| 5 | ಹೂಡಿಕೆ | 814.4 ಬಿಲಿಯನ್ಸ್ | 4.3% |

**ಪಟ್ಟಿ – 2 : 2014ರಲ್ಲಿ ಭಾರತ ಪ್ರವಾಸೋದ್ಯಮದ ಅಂಕಿ ಅಂಶಗಳು**

| ಕ್ರ. ಸಂ. | | ಭಾರತೀಯ ಬಿಲಿಯನ್ ರೂಪಾಯಿಗಳಲ್ಲಿ | ಶೇಕಡಾವಾರು ಒಟ್ಟು ಕೊಡುಗೆ |
|---|---|---|---|
| 1 | ದೇಶೀಯ ಉತ್ಪನ್ನಕ್ಕೆ ಕೊಡುಗೆ (ಜಿ.ಡಿ.ಪಿ) | 217.8 | 2% |
| 2 | ಒಟ್ಟು ಕೊಡುಗೆ | 631.6 | 6.2% |
| 3 | ಪ್ರವಾಸೋದ್ಯಮದಲ್ಲಿ ಉದ್ಯೋಗ | 22.32 | 4.9% |
| 4 | ಒಟ್ಟು ಪ್ರವಾಸೋದ್ಯಮದಲ್ಲಿ ಉದ್ಯೋಗ | 35.43 | 7.7% |
| 5 | ಅಂತಾರಾಷ್ಟ್ರೀಯ ಪ್ರವಾಸಿಗರ ಒಟ್ಟು ವೆಚ್ಚ | 1110.9 | 4% |
| 6 | ಹೂಡಿಕೆ | 938.7 | 6.2% |

ಮೂಲ : ವಿಶ್ವ ಪ್ರವಾಸೋದ್ಯಮ ಹಾಗೂ ಪರಿಷತ್ತಿನ 2014ರ ಆರ್ಥಿಕ ಪರಿಣಾಮದ ವರದಿ.

**ಮೂಲಭೂತ ಸೌಕರ್ಯ :** ಪ್ರವಾಸಿಗರಿಗೆ ಎಲ್ಲ ರೀತಿಯ ಮೂಲಭೂತ ಸೌಕರ್ಯಗಳನ್ನು ಯೂರೋಪ್ ಹಾಗೂ ಅಮೇರಿಕದಲ್ಲಿ ಕಲ್ಪಿಸಲಾಗಿದೆ. ನಮ್ಮಲ್ಲಿ ಪ್ರವಾಸಿಗರ ವಾಸ್ತವ್ಯ, ಸಂಪರ್ಕ, ಸಾರಿಗೆ, ರಸ್ತೆ, ಪ್ರವಾಸಿ ತಾಣದಲ್ಲಿ ಕುಡಿಯುವ ನೀರು, ಶೌಚಾಲಯ, ಸ್ವಚ್ಚತೆ, ವಾಹನ ನಿಲುಗಡೆ ವ್ಯವಸ್ಥೆ, ವೃತ್ತಿಪರ ಮಾರ್ಗದರ್ಶಿಗಳ ಕೊರತೆ – ಹೀಗೆ ಹಲವು ಹತ್ತು ಸಮಸ್ಯೆಗಳಿಂದ ಕೂಡಿದೆ. ವಿದೇಶಿ ಪ್ರವಾಸಿಗರು ಎಂದಾಕ್ಷಣ – ಅವರು ಬಹಳ ಹಣವಂತರು ಎಂದು ನಮ್ಮೆಲ್ಲರ ತಪ್ಪುಕಲ್ಪನೆ ಇದೆ. ಹಾಗಾಗಿ ಅವರನ್ನು ದೋಚುವುದರಲ್ಲಿ ಸರ್ಕಾರವೂ ಸೇರಿದಂತೆ, ನಾವೆಲ್ಲರೂ ಸಮಭಾಗಿಗಳು. ಅವರಿಗೆ ಹೆಚ್ಚಿನ ಪ್ರವೇಶ ಶುಲ್ಕವನ್ನು ವಿಧಿಸಲಾಗುತ್ತದೆ. ಆಟೋದವರು, ಟ್ಯಾಕ್ಸಿಯವರು, ಹೋಟೆಲ್‌ನವರು, ಅಂಗಡಿಯವರು ಈ ರೀತಿ ಎಲ್ಲರೂ ವಿದೇಶಿ ಪ್ರವಾಸಿಗರ ಶೋಷಣೆಯಲ್ಲಿ, ಸಮಭಾಗಿಗಳು, "ಅತಿಥಿ ದೇವೋಭವ" ಎಂಬುದು ನಮ್ಮ ಘೋಷವಾಕ್ಯವಾಗಿದೆ. ಆದರೆ ಪ್ರವಾಸಿಗರನ್ನು ನಾವು ಅತಿಥಿಯಂತೆ ನೋಡಿಕೊಳ್ಳುತ್ತೇವೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗಲಾರದು.

**ಪ್ರಚಾರ :** ನಮ್ಮಲ್ಲಿರುವ ವೈವಿಧ್ಯಮಯ ಪ್ರವಾಸಿ ತಾಣಗಳ ಪರಿಚಯವನ್ನು ಪ್ರಚಾರ ಮಾಡುವುದರಲ್ಲಿ ನಾವು ಸಂಪೂರ್ಣ ವಿಫಲರಾಗಿದ್ದೇವೆ. ಇದು ಮಾರುಕಟ್ಟೆಯುಗ. ಹಲವು ರಾಷ್ಟ್ರಗಳು ಆಕರ್ಷಣೀಯವಲ್ಲದ ಪ್ರವಾಸಿ ತಾಣಗಳನ್ನು ಶೃಂಗಾರಗೊಳಿಸಿ ಮಾರಾಟ ಮಾಡುತ್ತಿದೆ. ನಾವು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ನಮ್ಮ ಪ್ರವಾಸಿ ತಾಣವನ್ನು ಹೊರದೇಶಗಳಿಗೆ ಪರಿಚಯಿಸಬೇಕಾಗುತ್ತದೆ. ನಮ್ಮಲ್ಲಿರುವ ವೈವಿಧ್ಯಮಯ ಸಂಸ್ಕೃತಿ ಹಾಗೂ ಅದ್ಭುತ ಪ್ರವಾಸಿ ತಾಣಗಳನ್ನು ಇನ್ನು ಹೆಚ್ಚು ಆಕರ್ಷಣೆಗೊಳಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಬೇಕು.

**ಸುಸ್ಥಿರ ಪ್ರವಾಸೋದ್ಯಮ :** ಪ್ರವಾಸೋದ್ಯಮದಿಂದ ಬರುವ ಆರ್ಥಿಕ ಅನುಕೂಲ ಒಂದನ್ನೇ ನೋಡದೇ ಅದರಿಂದಾದ ಇತರ ಪರಿಣಾಮಗಳನ್ನು ಗಮನಿಸಬೇಕು. ಸಾಮಾಜಿಕ, ಸಾಂಸ್ಕೃತಿಕ ಪರಿಸರ ಸುಸ್ಥಿರತೆಯ ಬಗ್ಗೆ ಸಾಕಷ್ಟು ಗಮನ ಹರಿಸಿ, ಪ್ರವಾಸೋದ್ಯಮವನ್ನು ಬೆಳಸಬೇಕು. ಪ್ರತಿ ಪ್ರದೇಶದ ಸಾಮರ್ಥ್ಯಕ್ಕನುಗುಣವಾಗಿ ಪ್ರವಾಸಿಗರ ಸಂಖ್ಯೆಯನ್ನು ನಿಯಂತ್ರಿಸಬೇಕು. ಪ್ರವಾಸೋದ್ಯಮದಿಂದಾಗುವ ನಕಾರಾತ್ಮಕ ಪರಿಣಾಮಗಳ ಮೇಲೆ ಹೆಚ್ಚು ನಿಗಾ ಇಟ್ಟು ಅವುಗಳನ್ನು ಸಂಪೂರ್ಣ ನಿಯಂತ್ರಣದಲ್ಲಿಡಬೇಕು. ಹಾಗೆಯೆ ಸಕಾರಾತ್ಮಕ ಪರಿಣಾಮಗಳಾಗುವ ಹಾಗೆ ನೋಡಿಕೊಳ್ಳಬೇಕು. ಇದರ ಜೊತೆಗೆ ಪ್ರವಾಸಿ ತಾಣದ ಪರಿಸರದ ರಕ್ಷಣೆ ಅತಿ ಮುಖ್ಯವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ ಪರಿಸರ ಹಾಗೂ ಪರಂಪರೆಯನ್ನು ಹಾಳು ಮಾಡದೇ

ಪ್ರವಾಸೋದ್ಯಮವನ್ನು ಬೆಳೆಸಬೇಕು. ಸುಸ್ಥಿರ ಪ್ರವಾಸೋದ್ಯಮದ ಬೆಳವಣಿಗೆಗೆ ಅದು ಅವಶ್ಯವಾಗಿದೆ.

**ಕರ್ನಾಟಕ ಪ್ರವಾಸೋದ್ಯಮ**

ಕರ್ನಾಟಕ ತನ್ನ ವೈವಿಧ್ಯಮಯ ಸಂಸ್ಕೃತಿಯಿಂದ ಪ್ರಸಿದ್ದಿ ಪಡೆದಿದ್ದು, ಅತಿ ಪ್ರಾಚೀನ ನೃತ್ಯ ನಾಟಕದಲ್ಲೊಂದಾದ ಯಕ್ಷಗಾನದಿಂದ, ಹಂಪಿಯ ಮೌನ ಬಂಡೆಗಳ ಕಲಾಕೃತಿಯವರೆಗೆ, ವಿಜಯಪುರದ ಅದ್ಭುತ ಇಸ್ಲಾಮಿಕ್ ವಾಸ್ತುಶಿಲ್ಪದಿಂದ, ಬೇಲೂರು ಹಾಗೂ ಹಳೆಯ ಬೀಡಿನ ಅದ್ಭುತ ಶಿಲ್ಪಕಲೆಯಿಂದ ಕೂಡಿದ ದೇವಸ್ಥಾನಗಳವರೆಗೆ, ವಿಶ್ವದ ಅತಿ ಎತ್ತರದ ಏಕಶಿಲೆಯ ಅತಿ ಗಾಂಭೀರ್ಯದಿಂದಿರುವ ಹಾಗೂ ವಿಶ್ವಕ್ಕೆ ಶಾಂತಿ ಸಂದೇಶ ಸಾರುವ ಸುಂದರ ಮೂರ್ತಿ ಶ್ರವಣಬೆಳಗೊಳದ ಬಾಹುಬಲಿಯಿಂದ ಹಿಡಿದು ಧುಮ್ಮಿಕ್ಕುವ ವಿಶ್ವವಿಖ್ಯಾತ ಜೋಗ ಜಲಪಾತ ಭೋರ್ಗರೆಯುವ ಅರಬ್ಬೀ ಸಮುದ್ರದವರೆಗೆ ಕರ್ನಾಟಕದಲ್ಲಿದ್ದು – ಇದು ಒಂದು ರೀತಿಯಲ್ಲಿ ಪುಟ್ಟ ವಿಶ್ವವಾಗಿದೆ. ಭಾರತದ ವೈವಿಧ್ಯತೆಯಲ್ಲಿ ಏಕತೆ ಎಂಬ ತತ್ವವನ್ನು ಪ್ರಚಲಿತ ಪಡಿಸುತ್ತದೆ. ಕರ್ನಾಟಕದ ಪ್ರಾಚೀನತೆ, ಪರಂಪರೆ, ಯೋಗ, ಆಯುರ್ವೇದ, ಪ್ರಾಕೃತಿಕ ಆಕರ್ಷಣೆಗಳು, ಸಾಂಸ್ಕೃತಿಕ ಪರಂಪರೆ, ವನ್ಯಧಾಮಗಳು, ಪಕ್ಷಿಧಾಮಗಳು, ವಿಶ್ವದ ಹತ್ತರಲ್ಲಿ ಒಂದಾದ ಅದ್ಭುತ ಜೀವ ವೈವಿಧ್ಯದ ತಾಣವಾದ ಪಶ್ಚಿಮಘಟ್ಟಗಳು – ಇವೆಲ್ಲ ಕರ್ನಾಟಕದ ಪ್ರವಾಸೋದ್ಯಮದ ಅತಿ ಆಕರ್ಷಣೀಯ ಸ್ಥಳವಾಗಿದೆ. ಹಿಮ ಒಂದನ್ನು ಬಿಟ್ಟು ಪ್ರವಾಸಿಗರು ಇಷ್ಟಪಡುವ ಎಲ್ಲವೂ ಇಲ್ಲಿದೆ. ಇವುಗಳನ್ನು ನಾವು ಇನ್ನೂ ಹೆಚ್ಚು ಸಮರ್ಪಕವಾಗಿ ಮಾರಾಟ ಮಾಡಬೇಕಾಗಿದೆ. ಭಾರತದಲ್ಲಿ ಕೇರಳ ಪ್ರವಾಸೋದ್ಯಮದಲ್ಲಿ ಮೊದಲನೇ ಸ್ಥಾನದಲ್ಲಿದ್ದು ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಕೇರಳದ ಪ್ರವಾಸೋದ್ಯಮ ಆಕರ್ಷಣೆ ವಿಶೇಷವಾಗಿ ಆಯುರ್ವೇದ ಹಾಗೂ ಹಿನ್ನೀರಿಗೆ ಸೀಮಿತವಾಗಿದೆ. ಕರ್ನಾಟಕದಲ್ಲಿ ಪಾರಂಪರಿಕ ಪ್ರವಾಸೋದ್ಯಮ, ಆರೋಗ್ಯ ಪ್ರವಾಸೋದ್ಯಮ, ಸಾಹಸ ಪ್ರವಾಸೋದ್ಯಮ, ಪ್ರಾಕೃತಿಕ ಪ್ರವಾಸೋದ್ಯಮ, ಶೈಕ್ಷಣಿಕ ಪ್ರವಾಸೋದ್ಯಮ, ಸಮುದ್ರತೀರದ ಪ್ರವಾಸೋದ್ಯಮ ಹೀಗೆ ವಿವಿಧ ರೀತಿಯ ಪ್ರವಾಸೋದ್ಯಮಕ್ಕೆ ಸಾಕಷ್ಟು ಅವಕಾಶಗಳಿವೆ. ಕೇರಳ ಪ್ರವಾಸೋದ್ಯಮ ಸುಮಾರು ಆ ರಾಜ್ಯದ ಒಟ್ಟು ದೇಶೀಯ ಉತ್ಪನ್ನ 28% ಕೊಡುಗೆ ನೀಡುತ್ತಿದೆ. ನಮ್ಮ ರಾಜ್ಯದಲ್ಲಿ ಅದರ ಕೊಡುಗೆ 6% ರಿಂದ 7% ಇದೆ. ಕರ್ನಾಟಕ ರಾಜ್ಯದ ಮುಂಗಡ ಪತ್ರದಲ್ಲಿ ಶೇಕಡ 0.5% ಕಡಿಮೆ ಪ್ರವಾಸೋದ್ಯಮಕ್ಕೆ ಮೀಸಲಾಗಿಡಲಾಗುತ್ತಿದೆ. ಅದನ್ನು ಕೂಡ ಪ್ರವಾಸೋದ್ಯಮ ಇಲಾಖೆ ಸಂಪೂರ್ಣ ಖರ್ಚು ಮಾಡದೇ ಹಣವನ್ನು ಹಿಂತಿರುಗಿಸುವ ಉದಾಹರಣೆ ಇದೆ.

**ಪ್ರಸ್ತುತ ಪರಿಸ್ಥಿತಿ :** ವ್ಯಾಪಾರಿ ಪ್ರವಾಸೋದ್ಯಮ ಬೆಂಗಳೂರಿನಲ್ಲಿದೆ. ಉಳಿದ ಪ್ರದೇಶವನ್ನು ಸಾಧಾರಣವಾಗಿ ಮೂರು ವಿಭಾಗಗಳಲ್ಲಿ ವಿಂಗಡಿಸಬಹುದು. ಮೈಸೂರು ಪ್ರದೇಶ, ಕರಾವಳಿ ಪ್ರದೇಶ ಹಾಗೂ ಉತ್ತರಕರ್ನಾಟಕ.

**ಮೈಸೂರು ಪ್ರದೇಶ :** ಮೈಸೂರು, ಚಾಮರಾಜನಗರ, ಮಡಿಕೇರಿ, ಮಂಡ್ಯ ಹಾಗೂ ಹಾಸನಗಳನ್ನು ಈ ವಿಭಾಗಕ್ಕೆ ಸೇರಿಸಬಹುದು. ಕಡಲು ಹಾಗೂ ಹಿಮವನ್ನು ಬಿಟ್ಟರೆ ಪ್ರವಾಸಿಗರು ಇಷ್ಟಪಡುವ ಎಲ್ಲವೂ ಇದೆ. ಕಳೆದ ವರ್ಷ ಈ ಲೇಖಕ ಈ ಪ್ರದೇಶದ ಒಂದು ಸಮೀಕ್ಷೆ ಮಾಡಿದ್ದಾರೆ. ಈ ಪ್ರದೇಶಕ್ಕೆ ವರ್ಷಕ್ಕೆ ಸರಾಸರಿ 32ರಿಂದ 35 ಲಕ್ಷ ಪ್ರವಾಸಿಗರು ಭೇಟಿಕೊಟ್ಟಿರುತ್ತಾರೆ. ಇದರಲ್ಲಿ ಬಹುತೇಕರು ದೇಶೀಯರು, ಹೊರದೇಶದ ಪ್ರವಾಸಿಗರ ಸಂಖ್ಯೆ ಒಂದು ಲಕ್ಷವನ್ನೂ ಸಹ ಮೀರಿಲ್ಲ. ಸುಮಾರು 60,000 ಕುಟುಂಬ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಈ ಕೈಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಸುಮಾರು 2,50,000 ಜನರು ವಿವಿಧ ರೀತಿಯ ಪ್ರವಾಸೋದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಪ್ರದೇಶದಲ್ಲಿ ಸರಾಸರಿ ವರ್ಷಕ್ಕೆ ಒಂದು ಸಾವಿರ ಕೋಟಿ ವ್ಯವಹಾರ ಪ್ರವಾಸೋದ್ಯಮದಲ್ಲಿ ಆಗುತ್ತಿದೆ. ಇದು ಅತಿ ಸಾಮಾನ್ಯನಿಂದ ಹಿಡಿದು ಅತ್ಯಂತ ಮೇಧಾವಿಯ ವರೆಗೆ ಉದ್ಯೋಗ ನೀಡುತ್ತದೆ. ಪ್ರವಾಸೋದ್ಯಮ ಅತಿ ಕಡಿಮೆ ಮಾಲಿನ್ಯ ಮಾಡುವ ಕೈಗಾರಿಕೆಯಾಗಿದೆ.

**ಕರ್ನಾಟಕ ದರ್ಶನ :** ನಮಗೆ ಪಾರಂಪರಿಕವಾಗಿ ಒಂದು ಪ್ರವಾಸಿ ತಾಣದ ಜೊತೆಗೆ ಹೊಸ ಪ್ರವಾಸಿ ತಾಣದ ಸೃಷ್ಟಿಗೂ ನಾವು ಪ್ರಯತ್ನ ಮಾಡಬೇಕು. ಈ ಲೇಖಕ ಹಾಲೆಂಡಿನಲ್ಲಿ ಮಧುರಾಡ್ಯಾಂ



(ಆಂಸ್ಟ್ರಡ್ಯಾಂ ಹತ್ತಿರ) ಭೇಟಿ ಕೊಟ್ಟಿದ್ದಾಗ ಹಾಲೆಂಡಿನಲ್ಲಿರುವ ಎಲ್ಲಾ ತಾಣಗಳನ್ನು ಅಲ್ಲಿ ಸಣ್ಣ ಪ್ರಮಾಣದಲ್ಲಿ ಸೃಷ್ಟಿಸಲಾಗಿದೆ. ಅದೇ ಮಾದರಿಯಲ್ಲಿ ಮೈಸೂರು, ಮಡಿಕೇರಿ, ಚಾಮರಾಜನಗರ ನಡುವೆ ಒಂದು 200 ಎಕರೆ ಸ್ಥಳ ಗುರುತಿಸಿ ಅಲ್ಲಿ "ಕರ್ನಾಟಕ ದರ್ಶನ" ಎಂಬ ಹೊಸ ತಾಣವನ್ನು ಸೃಷ್ಟಿ ಮಾಡಬೇಕು. ಕರ್ನಾಟಕದ ಎಲ್ಲಾ ಜಿಲ್ಲೆಗೂ ಒಂದು ಅಥವಾ ಎರಡು ಎಕರೆ ಸ್ಥಳಕೊಟ್ಟು ಜಿಲ್ಲಾಡಳಿತ ತಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಪ್ರವಾಸಿ ತಾಣಗಳ ಕಿರುಕೃತಿ ಸೃಷ್ಟಿಸಬೇಕು. ಅದರ ಜೊತೆಗೆ ಆಯಾ ಜಿಲ್ಲೆಯ ಕರಕುಶಲದಲ್ಲಿ ತೊಡಗಿರುವವರಿಗೆ ಸ್ಥಳಾವಕಾಶ ಮಾಡಿಕೊಟ್ಟು ಅವರು ಅಲ್ಲಿಯೇ ತಮ್ಮ ಕರಕುಶಲ ವಸ್ತುಗಳನ್ನು ತಯಾರಿಸಿ ಮಾರಾಟಮಾಡುವ ವ್ಯವಸ್ಥೆ ಮಾಡಬೇಕು. ಆಗ ಕುಶಲ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವುದರೊಂದಿಗೆ ಆ ಕಲೆಗಳನ್ನು ಉಳಿಸಬಹುದು.

ಎರಡು ಅಥವಾ ಮೂರು ಸಭಾಂಗಣ ಕಟ್ಟಿಸಿ ಅಲ್ಲಿ ವಿವಿಧ ರೀತಿಯ ಜಾನಪದ, ಸಂಗೀತ, ನೃತ್ಯ ಮುಂತಾದವುಗಳಿಗೆ ಅವಕಾಶ ಮಾಡಿಕೊಡಬೇಕು. ಕೋಲಾಟ, ಡೊಳ್ಳುಕುಣಿತ, ಗೊರವರಕುಣಿತ, ಕಂಸಾಳೆ, ವೀರಗಾಸೆ, ತೊಗಲುಗೊಂಬೆಯಾಟ, ಸುಗ್ಗೀಕುಣಿತ, ಯಕ್ಷಗಾನ– ಹೀಗೆ ಹಲವು ಹತ್ತು ಜಾನಪದ ಕಲೆಗಳಿಗೆ ಸರಿಯಾದ ಪ್ರೋತ್ಸಾಹ ಇಲ್ಲದೆ ನಶಿಸಿ ಹೋಗುತ್ತಿದೆ. ಆ ಎಲ್ಲಾ ರೀತಿಯ ಕರಕುಶಲ ಕೆಲಸಗಾರರಿಗೆ ಹಾಗೂ ಜಾನಪದ ಕಲಾವಿದರಿಗೆ ಪ್ರೋತ್ಸಾಹ ಕೊಡುವುದರ ಜೊತೆಗೆ ಆ ಕಲೆಗಳನ್ನು ಉಳಿಸಬಹುದು. ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಹಲವು ಆಟಿಕೆಗಳನ್ನು ಅಳವಡಿಸಬೇಕು, ಇದು ಪ್ರವಾಸಿಗರಿಗೆ ರೋಮಾಂಚನವನ್ನು ಕೊಡುತ್ತದೆ. ಇದಕ್ಕೆ ಸರ್ಕಾರ ಸಾವಿರಾರು ಕೋಟಿ ಖರ್ಚುಮಾಡಬೇಕಾಗಿಲ್ಲ. ಮೂಲ ಸೌಕರ್ಯ


ಒದಗಿಸಿಕೊಟ್ಟರೆ ಖಾಸಗಿ ಹೂಡಿಕೆದಾರರು ಈ ಎಲ್ಲ ಅನುಕೂಲ ಒದಗಿಸಿಕೊಡುತ್ತಾರೆ. ಸರಿಯಾದ ಗುಣಾತ್ಮಕ ಸೇವೆ ಒದಗಿಸಿದರೆ, ಪ್ರವಾಸಿಗರು ಹಣ ಕೊಡಲು ಹಿಂದೆ–ಮುಂದೆ ನೋಡುವುದಿಲ್ಲ. ಮೈಸೂರು, ಕೊಡಗಿಗೆ ಬಂದ ಪ್ರವಾಸಿಗರು, ಕನಿಷ್ಠ ಒಂದು ದಿನ ಇಲ್ಲಿ ಸಂತೋಷಪಡುವ ಅವಕಾಶವನ್ನು ಕಲ್ಪಿಸಬೇಕು. ಕರ್ನಾಟಕ ಸರ್ಕಾರದ 2014–15 ನೇ ಸಾಲಿನ ಮುಂಗಡ ಪತ್ರದಲ್ಲಿ ಮೈಸೂರು ಪ್ರದೇಶದ ಪ್ರವಾಸೋದ್ಯಮ ಅಭಿವೃದ್ಧಿಗೆ "ಕಾವೇರಿ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ" ಘೋಷಣೆ ಮಾಡಿ ಒಂದು ವರ್ಷ ಸಂಪೂರ್ಣವಾಗಿ ಕಳೆದಿದೆ, ಆದರೆ ಈ ಪ್ರಾಧಿಕಾರ ಇನ್ನು ಅಸ್ತಿತ್ವಕ್ಕೆ ಬಂದಿಲ್ಲ. ಈ ಕೆಂಪುಪಟ್ಟಿಯಿಂದ ನಾವು ಹೊರಗೆ ಬಂದು ಕಾಲಮಿತಿಯ ಆಧಾರದ ಮೇಲೆ ಪ್ರವಾಸೋದ್ಯಮದ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕು. ಇದೇ ರೀತಿ ಕರಾವಳಿ ಪ್ರದೇಶ ಹಾಗೂ ಉತ್ತರಕರ್ನಾಟಕದಲ್ಲೂ ಕೂಡ ಸುಸ್ಥಿರ ಪ್ರವಾಸೋದ್ಯಮದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು.

ಈ ಪ್ರಾಧಿಕಾರ ಒಬ್ಬ ಹಿರಿಯ ಐ.ಎ.ಎಸ್. ಅಧಿಕಾರಿಯ ಮಾರ್ಗದರ್ಶನದಲ್ಲಿ ಸರ್ಕಾರಿ ವಿವಿಧ ಇಲಾಖೆಯ ಅಧಿಕಾರಿಗಳ ಜೊತೆಗೆ ಪ್ರವಾಸೋದ್ಯಮ ತಜ್ಞರನ್ನು ಹಾಗೂ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡವರ ವಿವಿಧ ಸಂಘಗಳ ಪ್ರತಿನಿಧಿಗಳನ್ನು ಒಳಗೊಂಡಿರಬೇಕು. ಇದಕ್ಕೆ ಮುಂಗಡ ಪತ್ರದಲ್ಲಿ ನೇರ ಅನುದಾನದ ವ್ಯವಸ್ಥೆಯಾಗಬೇಕು. ಇದು ಸಾಕಷ್ಟು ಚರ್ಚೆ ಹಾಗೂ ಚಿಂತನೆ ನಡೆಸಿ ಮುಂದಿನ 10ವರ್ಷಗಳಲ್ಲಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮ ಹಾಕಿಕೊಂಡು, ಅವುಗಳನ್ನು ಆದ್ಯತೆಯ ಮೇಲೆ ಅನುಷ್ಠಾನಗೊಳಿಸಬೇಕು.

**ಸಾಹಸ ಪ್ರವಾಸೋದ್ಯಮ :** ಹಲವು ರೀತಿಯ ಸಾಹಸ ಪ್ರವಾಸೋದ್ಯಮಕ್ಕೆ ಇಲ್ಲಿ ಅವಕಾಶವಿದೆ. ಇದರ ತರಬೇತಿಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮ, ಮಾರ್ಗದರ್ಶಿ ಸೂತ್ರದ ಅನುಷ್ಠಾನ, ಮುಂತಾದವುಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಇಲ್ಲ. ನೀರು, ಭೂಮಿ ಹಾಗೂ ಆಕಾಶ ಸಾಹಸ ಆಟಕ್ಕೆ ಒಂದು ಪ್ರಾಧಿಕಾರ ರಚನೆ ಮಾಡಿ ಅವುಗಳನ್ನು ಸೂಕ್ತರೀತಿಯಲ್ಲಿ ನಿಯಂತ್ರಿಸುವ ವ್ಯವಸ್ಥೆಮಾಡಬೇಕು. ಅವುಗಳಿಗೆ ಸೂಕ್ತ ತರಬೇತಿ, ತೆಗೆದುಕೊಳ್ಳಬೇಕಾದ ಸುರಕ್ಷತಾಕ್ರಮ ಹಾಗೂ ಅವುಗಳ ನಿಯಂತ್ರಣದ ಬಗ್ಗೆ ಈ ಪ್ರಾಧಿಕಾರ ನಿಗಾ ಇಡಬೇಕು. ಸಾಹಸ ಕ್ರೀಡೆಯಲ್ಲಿ ತೊಡಗಿರುವ ಪ್ರತಿ ಸಂಸ್ಥೆಯೂ ಈ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೊಂದಾವಣೆ ಮಾಡಿಕೊಂಡಿರಬೇಕು. ಈ ಪ್ರಾಧಿಕಾರ ಸೂಕ್ತ ಪ್ರಮಾಣಪತ್ರ ನೀಡಬೇಕು. ಈ ಪ್ರಮಾಣ ಪತ್ರವನ್ನು ಪ್ರತಿ 3 ವರ್ಷಕ್ಕೊಮ್ಮೆ ನವೀಕರಿಸಬೇಕು. ನವೀಕರಿಸುವ ಮೊದಲು ಮತ್ತೊಮ್ಮೆ ಎಲ್ಲಾ ಉಪಕರಣಗಳನ್ನು ಪರೀಕ್ಷೆಮಾಡಿ ಪ್ರಮಾಣಪತ್ರ ನೀಡಬೇಕು.

**ವೃತ್ತಿಪರ ಮಾರ್ಗದರ್ಶಿಗಳು :** ಪ್ರತಿ ಪ್ರವಾಸಿತಾಣದಲ್ಲಿ ವೃತ್ತಿಪರ ಮಾರ್ಗದರ್ಶಿಗಳ ಅವಶ್ಯಕತೆ ಇದೆ. ಈ ಮಾರ್ಗದರ್ಶಿಗಳು ಆಯಾ ಪ್ರದೇಶದ ರಾಯಭಾರಿಗಳು. ಅವರಿಗೆ ಪ್ರತಿ ಪ್ರವಾಸಿತಾಣದ ಚಾರಿತ್ರಿಕ, ಭೌಗೋಳಿಕ ಹಾಗೂ ಪ್ರಾಕೃತಿಕ ವಿಷಯದ ಸಂಪೂರ್ಣ ಮಾಹಿತಿ ಇರಬೇಕು. ಅದನ್ನು ಅವರು ಅತಿ ಸುಂದರ ಹಾಗೂ ವರ್ಣರಂಜಿತವಾಗಿ ಕತೆ ರೂಪದಲ್ಲಿ ಹೇಳುವ ಕಲೆ ಕಲಿತಿರಬೇಕು. ಚೈನಾದಲ್ಲಿ ಮಾರ್ಗದರ್ಶಿಗಳಿಗೋಸ್ಕರ ಮೂರು ವರ್ಷದ ಪದವಿ ಅಧ್ಯಯನದ ಕೋರ್ಸ್ ಇದೆ. ಫ್ರಾನ್ಸಿನಲ್ಲಿ ಸ್ನಾತಕೋತ್ತರ ಪದವೀಧರರು ಹಾಗೂ ಡಾಕ್ಟರೇಟ್ ಆದವರು ಮಾರ್ಗದರ್ಶಿಗಳಾಗಿದ್ದಾರೆ. ನಮ್ಮಲ್ಲಿ ಮಾರ್ಗದರ್ಶಿಗಳಿಗೆ ಶೈಕ್ಷಣಿಕ ಅರ್ಹತೆ ಅಥವಾ ಸೂಕ್ತ ತರಬೇತಿ ಯಾವುದೂ ಇಲ್ಲ. ಈ ಮಾರ್ಗದರ್ಶಿಗಳಿಗೆ ಭಾಷೆಯ ಮೇಲೆ ಪ್ರಭುತ್ವ ಅಥವಾ ವಿಷಯದ ಜ್ಞಾನ ಎರಡೂ ಇರುವುದಿಲ್ಲ. ಆಕರ್ಷಣೀಯವಾಗಿ ಮಾರ್ಗದರ್ಶನ ಮಾಡುವ ಕಲೆಯೂ ಗೊತ್ತಿರುವುದಿಲ್ಲ. ಕೆಲವೊಂದು ವಿಷಯವನ್ನು ಬಾಯಿಪಾಠ ಮಾಡಿಕೊಂಡು ಹೇಳುತ್ತಾರೆ. ಇದರಿಂದ ಪ್ರವಾಸೋದ್ಯಮದ ಬೆಳವಣಿಗೆ ಸಮರ್ಪಕವಾಗಿ ಆಗುವುದಿಲ್ಲ.

**ಗ್ರಾಮೀಣ ಪ್ರವಾಸೋದ್ಯಮ :** ಇದು ಅತಿ ಹೆಚ್ಚಿನ ನಗರೀಕರಣವನ್ನು ತಡೆಯುವಲ್ಲಿ ಯಶಸ್ವಿಯಾಗಬಹುದು. ನಮ್ಮ ಗ್ರಾಮೀಣ ಸಂಸ್ಕೃತಿ ವಿಭಿನ್ನವಾಗಿದೆ. ಅವರ ಉಡುಗೆ, ತೊಡುಗೆ, ಜಾನಪದ ಸಂಸ್ಕೃತಿ – ಪ್ರಾಕೃತಿಕ ತಾಣಗಳು, ಸಂಪ್ರಾದಾಯಕತೆ, ನೃತ್ಯ, ಸಂಗೀತ ಮುಂತಾದ ಹಲವು ಹತ್ತು ಕಾರ್ಯಕ್ರಮವನ್ನು ಹಾಕಿಕೊಂಡು ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬಹುದು. ಆದರೆ ಗ್ರಾಮೀಣ



ಸಂಸ್ಕೃತಿಯ ವ್ಯವಸ್ಥೆಗೆ ಧಕ್ಕೆ ಬರದಂತೆ, ಸುಸ್ಥಿರ ಪ್ರವಾಸೋದ್ಯಮವನ್ನು ಬೆಳಸಬೇಕು. ಇದಕ್ಕೆ ಕೇಂದ್ರ ಸರ್ಕಾರದಿಂದಲೂ ಆರ್ಥಿಕ ಸಹಾಯ ದೊರೆಯುತ್ತದೆ. ಗ್ರಾಮೀಣ ಪ್ರವಾಸೋದ್ಯಮ ಎಂದ ಕೂಡಲೇ ನಮ್ಮ ಉದ್ದಿಮೆದಾರರು ರೆಸಾರ್ಟ ಹಾಗೂ ಪಂಚತಾರಾ ಹೋಟೆಲ್ ಬಗ್ಗೆ ವಿಚಾರ ಮಾಡುತ್ತಾರೆ. ಇದು ಸಂಪೂರ್ಣ ತಪ್ಪು. ಪ್ರವಾಸಿಗರ ವಾಸ್ತವ್ಯಕ್ಕೆ ಅಚ್ಚುಕಟ್ಟಾದ ಹಾಗೂ ಸ್ವಚ್ಚವಾದ ಸಣ್ಣ–ಸಣ್ಣ ಕಾಟೇಜುಗಳನ್ನು ಅತಿ ಕಡಿಮೆ ಖರ್ಚಿನಲ್ಲಿ ಕಟ್ಟಬಹುದು. ಕಾಂಕ್ರೀಟ್ ಕಾಡು ಬೆಳೆಸದೇ, ಸ್ಥಳೀಯವಾಗಿ ಸಿಗುವ ಪದಾರ್ಥಗಳನ್ನು ಉಪಯೋಗಿಸಿ, ಕಲಾತ್ಮಕವಾಗಿ ವಾಸ್ತವ್ಯದ ವ್ಯವಸ್ಥೆ ಮಾಡಬಹುದು. ಅದೇ ರೀತಿ ಸ್ಥಳೀಯವಾಗಿ ಸಿಗುವ ಆಹಾರವನ್ನೇ ಸ್ವಚ್ಛ ಹಾಗೂ ರುಚಿಯಾಗಿ ತಯಾರಿಸಬಹುದು. ಇದರಿಂದ ಪರಿಸರ ರಕ್ಷಣೆ ಮಾಡಿಕೊಂಡು ಪ್ರವಾಸೋದ್ಯಮವನ್ನು ಬೆಳೆಸಬಹುದು.

ಹೀಗೆ ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಬೆಳೆಸಲು ವಿಪುಲ ಅವಕಾಶಗಳಿವೆ. ಇದನ್ನು ಬೆಳೆಸಲು ಬೇಕಾದ ರಾಜಕೀಯ ಇಚ್ಛಾ ಶಕ್ತಿಯ ಕೊರತೆ ಹಾಗೂ ಅಧಿಕಾರಿಗಳ ಮುಂದಾಲೋಚನೆ ಮತ್ತು ಬದ್ಧತೆಯ ಕೊರತೆ ಕಾಣುತ್ತದೆ. ಪ್ರವಾಸೋದ್ಯಮದಲ್ಲಿ ತೊಡಗಿಕೊಂಡವರೆಲ್ಲರೂ ಇನ್ನೂ ಹೆಚ್ಚು ವೃತ್ತಿಪರತೆಯಿಂದ ಹಾಗೂ ಬದ್ಧತೆಯಿಂದ ಕೆಲಸ ಮಾಡಿದರೆ ಕರ್ನಾಟಕ ಪ್ರವಾಸೋದ್ಯಮವನ್ನು ಭಾರತದಲ್ಲಿ ಒಂದನೇ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತದೆ. ❑

ಕಂಪು

# ಪ್ರಕೃತಿ ಮಡಿಲ ಪ್ರವಾಸೋದ್ಯಮ

* ಎ.ಎಂ. ಅಣ್ಣಯ್ಯ ಭಾ.ಅ.ಸೇ. (ನಿ)



**ಭಾರತದಲ್ಲಿ ಭೌಗೋಳಿಕ ವೈವಿಧ್ಯತೆ ಇದೆ. ಸಸ್ಯ–ಪ್ರಾಣಿ ಸಂಪತ್ತು ವಿಪುಲವಾಗಿದೆ. ಇದರಿಂದಾಗಿ ವಿವಿಧ ರೀತಿಯ ಪ್ರಕೃತಿ ಪ್ರವಾಸೋದ್ಯಮಗಳು ಹುಟ್ಟಿಕೊಂಡಿವೆ. ಹಿಮಾಲಯ ಪರ್ವತಗಳು, ಪಶ್ಚಿಮ ಘಟ್ಟಗಳು, ನದಿ ಸಾಗರ ಸರೋವರಗಳ, ಗಿರಿಧಾಮಗಳು, ವನ್ಯಧಾಮಗಳು ಪರಿಸರ ಪ್ರವಾಸದ ಅದ್ಭುತ ತಾಣಗಳಾಗಿವೆ.**

ಪ್ರವಾಸೋದ್ಯಮ ಎಂದರೆ ಮನರಂಜನೆ ಬಿಡುವು, ಧಾರ್ಮಿಕ ಕುಟುಂಬ ಅಥವಾ ವ್ಯಾಪಾರದ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಸೀಮಿತ ಅವಧಿಯವರೆಗೆ ಮಾಡುವ ಪ್ರಯಾಣವಾಗಿದೆ.

ವಿಶ್ವದ ಮೂರನೆ ಅತಿ ದೊಡ್ಡ ಉದ್ಯಮ ಮತ್ತು ಆದಾಯದ ಮೂಲ ಪ್ರವಾಸೋದ್ಯಮ. ಈ ಒಂದು ಉದ್ಯಮದಿಂದ ಸಾರಿಗೆ, ಸಂಪರ್ಕ, ವಸತಿ, ಹೋಟೆಲ್ ಹೀಗೆ ನೂರಾರು ಉದ್ಯಮಗಳು ಬೆಳೆಯುತ್ತವೆ. ಪ್ರವಾಸೋದ್ಯಮ ಅಭಿವೃದ್ಧಿಯಿಂದ ಜನರಲ್ಲಿ ಆರ್ಥಿಕ ಸ್ವಾವಲಂಬನೆ ಹೆಚ್ಚುತ್ತದೆ. ಸಾಮಾಜಿಕ ಐಕ್ಯ ಮೂಡುತ್ತದೆ. ಸಾಂಸ್ಕೃತಿಕ ಬೆಳವಣಿಗೆಯಾಗುತ್ತದೆ. ಅಲ್ಲದೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ.

ಪ್ರವಾಸೋದ್ಯಮ ಭಾರತದಲ್ಲಿ ಅತಿ ದೊಡ್ಡ ಸೇವಾ ವಲಯವಾಗಿದೆ. ಇದು ರಾಷ್ಟ್ರೀಯ ಜಿಡಿಪಿಗೆ 6.23% ರಷ್ಟು ಹಾಗೂ ಒಟ್ಟು ಉದ್ಯೋಗಕ್ಕೆ 8.7% ರಷ್ಟು ಕೊಡುಗೆ ನೀಡುತ್ತದೆ. 2014ರಲ್ಲಿ ಪ್ರವಾಸೋದ್ಯಮ ಕ್ಷೇತ್ರವು ಜಿಡಿಪಿಗೆ 7.64 ಲಕ್ಷ ಕೋಟಿ ರೂ. ಗಳನ್ನು ಹಾಗೂ 36.70 ದಶಲಕ್ಷ ಜನರಿಗೆ ಉದ್ಯೋಗ ಒದಗಿಸಿದೆ. ವಾರ್ಷಿಕ ಐದು ದಶಲಕ್ಷಕ್ಕಿಂತಲೂ ಹೆಚ್ಚು ವಿದೇಶಿ ಪ್ರವಾಸಿಗರು ಭಾರತಕ್ಕೆ ಆಗಮಿಸುತ್ತಿರುತ್ತಾರೆ, ಹಾಗೂ 562 ದಶಲಕ್ಷ ದೇಶಿಯ ಪ್ರವಾಸಿಗರು ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ.

### ವಿವಿಧ ಪ್ರವಾಸೋದ್ಯಮಗಳು

ಸಮಾಜದ ಎಲ್ಲ ವರ್ಗಗಳ ಎಲ್ಲ ವಯಸ್ಸಿನ ವಿವಿಧ ಆಸಕ್ತಿಉಳ್ಳ ಎಲ್ಲ ಜನರಿಗೂ ಸೂಕ್ತವಾದ ವೈವಿಧ್ಯಮಯ ಪ್ರವಾಸೋದ್ಯಮಗಳಿವೆ. ಧಾರ್ಮಿಕ, ಸಾಂಸ್ಕೃತಿಕ, ಐತಿಹಾಸಿಕ, ಶೈಕ್ಷಣಿಕ, ಪಾರಂಪರಿಕ ಪ್ರವಾಸೋದ್ಯಮಗಳು ಒಂದು ಕಡೆಯಾದರೆ, ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಹಿಮಾಲಯ ಪರ್ವತ, ಪಶ್ಚಿಮ ಘಟ್ಟಗಳು, ಕಡಲ ತೀರ, ನದಿ ಸಾಗರ ಸರೋವರ, ಅರಣ್ಯ, ವನ್ಯಜೀವಿ, ಪರಿಸರ, ಪ್ರವಾಸೋದ್ಯಮಗಳು ವಿಪುಲವಾಗಿವೆ. ಅಲ್ಲದೆ ಕ್ರೀಡಾ, ಸಾಹಸ, ಪ್ರವಾಸೋದ್ಯಮಗಳಿವೆ.

### ಪರಿಸರ ಮತ್ತು ಅರಣ್ಯ ಪ್ರವಾಸೋದ್ಯಮ

ಪರಿಸರ ಸಂರಕ್ಷಣೆ ಮಾಡುವ ಹಾಗೂ ಸ್ಥಳೀಯ ಜನರ ಯೋಗಕ್ಷೇಮ ಜೀವನವನ್ನು ಉತ್ತಮಗೊಳಿಸುವ ನೈಸರ್ಗಿಕ ಪ್ರದೇಶಗಳಿಗೆ ಹೋಗಿ ಬರುವ ಪ್ರವಾಸವೇ ಪರಿಸರ ಪ್ರವಾಸೋದ್ಯಮ. ನೆಲ, ಜಲ, ಗಾಳಿ, ಸಸ್ಯ ಹಾಗೂ ಪ್ರಾಣಿ – ಇವು ಪರಿಸರದ ಅಂಗಾಂಗಗಳು. ಅರಣ್ಯವು ವೃಕ್ಷಗಳೇ ಪ್ರಧಾನವಾಗಿ ಕಂಡುಬರುವ ನೈಸರ್ಗಿಕ ಸಮುದಾಯವಿರುವ ಪ್ರದೇಶ, ಅರಣ್ಯಗಳ ಬೆಟ್ಟಗುಡ್ಡ ಪರ್ವತಗಳೆ ಜಲಮೂಲಗಳು. ನದಿಗಳು ಹುಟ್ಟುವುದೆ ಅರಣ್ಯದಲ್ಲಿ. ಶುದ್ಧ ಗಾಳಿಗೆ ಸಸ್ಯ ಸಂಪತ್ತೆ ಆಗರ. ಅರಣ್ಯಗಳೇ ವನ್ಯಜೀವಿಗಳ ಆವಾಸಸ್ಥಾನ. ಹೀಗಾಗಿ ಅರಣ್ಯ ಪರಿಸರದಲ್ಲಿರುವ ಎಲ್ಲಾ, ಪ್ರವಾಸೋದ್ಯಮಗಳೇ ಅರಣ್ಯ ಪ್ರವಾಸೋದ್ಯಮಗಳೆ ಆಗುತ್ತವೆ. ಅರಣ್ಯ ಮತ್ತು ವನ್ಯಜೀವಿ ಪ್ರವಾಸೋದ್ಯಮಗಳು ಅವಿಭಾಜ್ಯ. ವನ್ಯಜೀವಿ ಪ್ರವಾಸೋದ್ಯಮದಲ್ಲಿ ಹುಲಿ, ಸಿಂಹ, ಆನೆ, ಪಕ್ಷಿಗಳ ಪ್ರವಾಸೋದ್ಯಮಗಳು ಇವೆ.

* ನಿವೃತ್ತ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.

## ಭಾರತದಲ್ಲಿ ವನ್ಯಜೀವಿ ಪ್ರವಾಸೋದ್ಯಮ

ಭಾರತದಲ್ಲಿ ಭೌಗೋಳಿಕ ವೈವಿಧ್ಯತೆ ಇದೆ. ಸಸ್ಯ-ಪ್ರಾಣಿ ಸಂಪತ್ತು ವಿಪುಲವಾಗಿದೆ. ಇದರಿಂದಾಗಿ ವಿವಿಧ ರೀತಿಯ ಪ್ರಕೃತಿ ಪ್ರವಾಸೋದ್ಯಮಗಳು ಹುಟ್ಟಿಕೊಂಡಿವೆ. ಹಿಮಾಲಯ ಪರ್ವತಗಳು, ಪಶ್ಚಿಮ ಘಟ್ಟಗಳು, ನದಿ ಸಾಗರ ಸರೋವರಗಳ, ಗಿರಿಧಾಮಗಳು, ವನ್ಯಧಾಮಗಳು ಪರಿಸರ ಪ್ರವಾಸದ ಅದ್ಭುತ ತಾಣಗಳಾಗಿವೆ. ಅರಣ್ಯ ಸರ್ವೇಕ್ಷಣ ಸಂಸ್ಥೆ, ಡೆಹ್ರಾಡೂನ್ ಪ್ರಕಟಿಸಿರುವ ಭಾರತ ಅರಣ್ಯ ಸ್ಥಿತಿಗತಿ ವರದಿ 2011ರ ಪ್ರಕಾರ ಭಾರತದ 328.73 ದಶಲಕ್ಷ ಹೆಕ್ಟೇರ್ ಭೌಗೋಳಿಕ ಪ್ರದೇಶದಲ್ಲಿ 69.20 ದಶಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಕರ್ನಾಟಕದಲ್ಲಿ 19.18 ದಶಲಕ್ಷ, ಭೌಗೋಳಿಕ ಪ್ರದೇಶದಲ್ಲಿ 3.62 ದಶಲಕ್ಷ ಅರಣ್ಯ ಪ್ರದೇಶವಿದೆ. ಕರ್ನಾಟಕ ಅರಣ್ಯ ಇಲಾಖೆಯ ವನ್ಯಜೀವಿ ಘಟಕವು ರಾಜ್ಯದ 9326 ಚ.ಕಿ. ವಿಸ್ತೀರ್ಣದ ಅರಣ್ಯ ಪ್ರದೇಶದಲ್ಲಿ 5 ರಾಷ್ಟ್ರೀಯ ಉದ್ಯಾನವನ ಹಾಗೂ 27 ಅಭಯಾರಣ್ಯಗಳ ಸಂರಕ್ಷಣೆ ಮತ್ತು ನಿರ್ವಹಣೆ ಮಾಡುತ್ತಿದೆ. ಭಾರತದ ಕಾಡುಗಳಲ್ಲಿ ಏಷ್ಯದ ಆನೆ, ಬಂಗಾಳ ಹುಲಿ, ಏಷ್ಯದ ಸಿಂಹ (ಗುಜರಾತ ಗಿರಿ ಅರಣ್ಯದಲ್ಲಿ ಮಾತ್ರ ಇವೆ), ಭಾರತೀಯ ಘೇಂಡಾಮೃಗ (ಅಸ್ಸಾಂನ ಕಾಜಿರಂಗ ಅರಣ್ಯದಲ್ಲಿ ಮಾತ್ರ ಇವೆ), ಹೀಗೆ ಹಲವು ದೊಡ್ಡ ಗಾತ್ರದ ಸಸ್ತನಿಗಳು ಇವೆ. ನಮ್ಮ ಕಾಡುಗಳಲ್ಲಿ ಈ ಸಸ್ತನಿಗಳಲ್ಲದೆ ಕಾಟಿ, ಕಡವೆ, ಕೆನ್ನಾಯಿಲ, ತೋಳ, ಕತ್ತೆ ಕಿರುಬ, ಜಿಂಕೆ, ಕೃಷ್ಣ ಮೃಗ, ಕರಡಿ, ಮೊಸಳೆ, ನೀರುನಾಯಿ, ಕಾಡುಹಂದಿ, ಕಾಳಿಂಗ ಸರ್ಪ, ಚಿಟ್ಟೆ, ಹೆಬ್ಬಾವು, ಮಾಷೀಕ ಮೀನು, ನವಿಲು, ರಣಹದ್ದು ..... ಹೀಗೆ ನೂರಾರು ಸಸ್ತನಿ, ಉರಗ, ಉಭಯವಾಸಿ, ಮೀನು, ಪಕ್ಷಿ, ಕೀಟಗಳ ಸಂಕುಲಗಳೇ ಇವೆ. ಇವುಗಳಿರುವ ನೈಸರ್ಗಿಕ ತಾಣಗಳಿಗೆ ಅರಣ್ಯ-ವನ್ಯಜೀವಿ ಪ್ರವಾಸದ ಮೂಲಕ ಭೇಟಿ ನೀಡುವುದೇ ಸಾಹಸ ಹಾಗೂ ಅದ್ಭುತ ಅನುಭವ. ಭಾರತದಲ್ಲಿ ವನ್ಯಜೀವಿ ಪ್ರವಾಸೋದ್ಯಮಕ್ಕೆ ಪ್ರಸಿದ್ಧಿಯಾಗಿರುವ ರಾಷ್ಟ್ರೀಯ ಉದ್ಯಾನ/ಅಭಯಾರಣ್ಯಗಳಲ್ಲಿ ಉತ್ತರ ಖಂಡದ ಕಾರ್ಬೆಟ್, ಮಧ್ಯಪ್ರದೇಶದ ಕನ್ಹಾ, ಅಸ್ಸಾಂನ ಕಾಜಿರಂಗ, ಕೇರಳದ ಪೆರಿಯಾರ್, ರಾಜಸ್ಥಾನದ ರಣಥಂಬೊರ್ ಪಶ್ಚಿಮ ಬಂಗಾಳದ ಸುಂದರ ಬನ, ಕರ್ನಾಟಕದ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶಗಳು ಸೇರಿವೆ.

**ಪ್ರವಾಸೋದ್ಯಮ :** ಪರಿಸರ ಪ್ರವಾಸೋದ್ಯಮಗಳಲ್ಲಿ ನೈಸರ್ಗಿಕ ಗಿರಿಧಾಮ ಪ್ರವಾಸೋದ್ಯಮವೂ ಒಂದು. ಬ್ರಿಟಿಷ್ ಆಳ್ವಿಕೆಯ ಇಡೀ ಭಾರತದ ಬೇಸಿಗೆ ರಾಜಧಾನಿ ಶಿಮ್ಲಾದಂತೆ, ಹಲವು ಗಿರಿಧಾಮಗಳು ಭಾರತೀಯ ಪ್ರಾಂತ್ಯಗಳ ಅಥವಾ ರಾಜಾಡಳಿತ ಪ್ರಾಂತ್ಯಗಳ ಬೇಸಿಗೆ ಕಾಲದ ರಾಜಧಾನಿಗಳಾಗಿದ್ದವು ಹಲವು ಗಿರಿಧಾಮಗಳು ಇಂದಿಗೂ ಬೇಸಿಗೆಯ ರೆಸಾರ್ಟ್‌ಗಳಾಗಿ ಜನಪ್ರಿಯವಾಗಿವೆ. ಭಾರತದ ಈ ಕೆಳ ಪ್ರಸಿದ್ಧ ಗಿರಿಧಾಮಗಳಿಗೆ ಜನ ಮುಗಿಬೀಳುತ್ತಿದ್ದಾರೆ

1) ಹಿಮಾಚಲ ಪ್ರದೇಶದ ಶಿಮ್ಲಾ, ಕುಲು-ಮನಾಲಿ
2) ಜಮ್ಮು-ಕಾಶ್ಮೀರದ ಶ್ರೀನಗರ, ಗುಲ್ಮಾರ್ಗ ಮತ್ತು ಲಡಾಖ್
3) ಪಶ್ಚಿಮಬಂಗಾಳದ ಡಾರ್ಜಿಲಿಂಗ್
4) ಉತ್ತರಾಖಂಡದ ಮಸ್ಸೂರಿ, ನೈನಿತಾಲ್
5) ಮೇಘಾಲಯದ ಶಿಲ್ಲಾಂಗ್
6) ಸಿಕ್ಕಿಂನ ಗ್ಯಾಂಗ್‌ಟೋಕ್
7) ಕೇರಳದ ಮುನ್ನಾರ್, ವೈತ್ರಿ, ಪೊನಮುಡಿ
8) ತಮಿಳುನಾಡಿನ ಊಟಿ, ಕೊಡೈಕೆನಾಲ್, ಯರಕಾಡ್

ಕರ್ನಾಟಕದಲ್ಲಿ ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ, ಕುದುರೆಮುಖ, ಮತ್ತು ಕೆಮ್ಮಣ್ಣ ಗುಂಡಿ, ಚಿಕ್ಕಬಳ್ಳಾಪುರದ ನಂದಿಬೆಟ್ಟ, ಕೊಡಗಿನ ಮಡಿಕೇರಿ, ಚಾಮರಾಜನಗರದ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಇತ್ಯಾದಿಗಳು ಪುಟ್ಟ ಗಿರಿಧಾಮಗಳಾಗಿವೆ.

ಈ ನೈಸರ್ಗಿಕ ಗಿರಿಧಾಮಗಳನ್ನು ಅರಣ್ಯ ವನ್ಯಜೀವಿ ಪ್ರದೇಶಗಳ ಭಾಗವಾಗಿ ಅಥವ ಅವುಗಳ ಅಂಚಿನಲ್ಲಿಯೇ ಇರುವುದರಿಂದ ಈ ಪ್ರವಾಸೋದ್ಯಮದಲ್ಲಿ ಭಾಗವಹಿಸುವ ಪ್ರವಾಸಿಗಳ ಮೂಲಕ ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆಯ ಅರಿವು ಮೂಡಿಸಬಹುದು.

## ಕಡಲ ತೀರಗಳ ಪ್ರವಾಸೋದ್ಯಮ

ಈ ಪ್ರವಾಸವನ್ನು 3 ಎಸ್(ಸೀ-ಸನ್-ಸ್ಯಾಂಡ್) ಸಮುದ್ರ-ಸೂರ್ಯ-ಮರಳು ಪ್ರವಾಸವೆನ್ನಲಾಗಿದೆ ಭಾರತದಲ್ಲಿ



ಸ್ವರ್ಣವರ್ಣದ ಮರಳಿನ ಕಡಲ ತೀರಗಳಿಂದ ಹಿಡಿದು ಲಕ್ಷದ್ವೀಪಗಳ ಹವಳದ ತೀರಗಳವರೆಗೆ ವೈವಿಧ್ಯಮಯ ಕಡಲ ತೀರಗಳಿವೆ. ನದಿಗಳು ಸಾಗರ ಸೇರುವ ನದೀಮುಖ ಪ್ರದೇಶಗಳಲ್ಲಿ ವಿಶಿಷ್ಟವಾದ ಮ್ಯಾಂಗ್ರೂವ್ (ಕಾಂಡ್ಲ ವನ) ಅರಣ್ಯಗಳಿವೆ. ಭಾರತದಲ್ಲಿ ಈ ಮುಂದಿನ ಕಡಲ ತೀರಗಳು ಪ್ರವಾಸಿಗಳನ್ನು ಆಕರ್ಷಿಸುತ್ತಿವೆ. (1) ಗೋವಾದ ಮ್ಯಾಂಡ್ರಾ ಅಗೊಂಡ, ಕ್ಯಾಲಂಗೊಟ, (2) ಕೇರಳದ ಕೋವಲಂ, ಕೊಲ್ಲಂ ಪೂವಾರ್, (3) ತಮಿಳುನಾಡಿನ ಮರೀನಾ, ಮಹಬಲೀಪುರ (4) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, (5) ಲಕ್ಷದ್ವೀಪಗಳು, (6) ಪಶ್ಚಿಮಬಂಗಾಳದ ಮಿಡ್ನಾಪುರ ಹಾಗೂ ದಿಘಾ, (7) ಒರಿಸ್ಸಾದ ಪುರಿ, (8) ಸೀಮಾಂದ್ರದ ವಿಶಾಖಪಟ್ಟಣ ಹಾಗೂ (9) ಮುಂಬಯಿಯ ಕಡಲ ತೀರಗಳು.


ಕರ್ನಾಟಕದ ಮಂಗಳೂರಿನ ಬೆಂಗ್ರೆ, ಪಣಂಬೂರು, ಉಡುಪಿಯ ಮಲ್ಪೆ, ಮರವಂತೆ, ಉತ್ತರಕನ್ನಡ ಜಿಲ್ಲೆಯ ಗೋಕರ್ಣ, ಓಂಬೀಚ್ ಹಾಗೂ ಕಾರವಾರದ ಕಡಲ ತೀರಗಳು ಪ್ರವಾಸಿಗರನ್ನ ಕೈಬೀಸಿ ಕರೆಯುತ್ತಿವೆ.

## ಹುಲಿ ಪ್ರವಾಸೋದ್ಯಮ

ವನ್ಯಜೀವಿಗಳ ವೀಕ್ಷಣಾ ಪ್ರವಾಸದಲ್ಲಿ ಹುಲಿ ವೀಕ್ಷಣೆಗೆ ಅಗ್ರಸ್ಥಾನ. ರಾಜ ಮಹಾರಾಜರ ಕಾಲದಲ್ಲಿ ಹುಲಿ ಶಿಕಾರಿ ಪ್ರವಾಸ ಅದ್ದೂರಿಯಾಗಿ ನಡೆಯುತ್ತಿತ್ತು. ಒಂದು ಶತಮಾನದ ಹಿಂದೆ ದೇಶದಲ್ಲಿ 40,000 ಹುಲಿಗಳಿದ್ದವು. ಹುಲಿಗಳ ಚರ್ಮ, ಪಂಜ ಮೂಳೆಗಳೆಲ್ಲವೂ ಅಮೂಲ್ಯ. ಚೀನೀ ವೈದ್ಯಕೀಯ ಪದ್ಧತಿಯಲ್ಲಿ ಹುಲಿ ಉತ್ಪನ್ನಗಳಿಗೆ ಅಪಾರ ಬೇಡಿಕೆ. ಹುಲಿಗಳ ಬೇಟೆ ನಿರಂತರವಾಗಿ ನಡೆದು ಅವುಗಳ ಸಂಖ್ಯೆ ಕ್ಷೀಣಿಸಿತು. ರಾಜರುಗಳಿಗೆ ಹುಲಿ

ಶಿಕಾರಿ ಪ್ರತಿಷ್ಠೆಯ ಸಂಕೇತವಾಗಿತ್ತು ಹಾಗೂ ಸಾಹಸಮಯ ಮನರಂಜನೆಯಾಗಿತ್ತು. ಹುಲಿಗಳ ಸುರಕ್ಷಣೆಗಾಗಿ 1972ರಲ್ಲಿ ಹುಲಿ ಯೋಜನೆ ಪ್ರಾರಂಭ ಮಾಡಲಾಯಿತು. ಆಗ ದೇಶದಲ್ಲಿ ಸುಮಾರು 3000 ಹುಲಿಗಳಿದ್ದವು. ಭಾರತದಲ್ಲಿ ಕಾರ್ಬೆಟ್ ಕನ್ಹಾ, ರಣ ಥಂಬೊರ್, ಸುಂದರ ಬನ್ಸ್, ಕಾಜಿರಂಗ ಪೆರಿಯಾರ್, ಕರ್ನಾಟಕದ ಬಂಡಿಪುರ – ನಾಗರ ಹೊಳೆ ಇವುಗಳ ಪ್ರಸಿದ್ಧ ಹುಲಿ ಸಂರಕ್ಷಿತ ಪ್ರದೇಶಗಳು. ಹುಲಿ ಯೋಜನೆಯಿಂದಾಗಿ 2014ರಲ್ಲಿ ಭಾರತದಲ್ಲಿ 2226 ಹುಲಿಗಳಿವೆ. ಕರ್ನಾಟಕದಲ್ಲಿ 2010ರ ಗಣತಿಯಂತೆ ಸುಮಾರು 300 ಹುಲಿಗಳು ನೈಸರ್ಗಿಕ ಪ್ರದೇಶಗಳಲ್ಲಿವೆ. ಕರ್ನಾಟಕದಲ್ಲಿ ಬಂಡಿಪುರ, ನಾಗರಹೊಳೆ, ಬಿಳಿಗಿರಿರಂಗನ ಬೆಟ್ಟ, ಭದ್ರಾ ಹಾಗೂ ಅಣಶಿ–ದಾಂಡೇಲಿ ಹುಲಿ ಸಂರಕ್ಷಿತ ಪ್ರದೇಶಗಳಿವೆ (ಟೈಗರ್ ರಿಸರ್ವ್). ಭಾರತದಲ್ಲಿ 48 ಟೈಗರ್ ರಿಸರ್ವ್‌ಗಳಿದ್ದು ಅವುಗಳ ಹೃದಯ ಭಾಗವಾದ (ಕೋರ್ ಏರಿಯಾ) 39620 ಚ.ಕಿ. ಅನ್ನು ಸಂರಕ್ಷಿಸಲಾಗುತ್ತಿದೆ. ಹುಲಿ ಸುರಕ್ಷಿತ ಪ್ರದೇಶದಲ್ಲಿ ಎಲ್ಲಾ ವನ್ಯ ಜೀವಿಗಳನ್ನು ಸುರಕ್ಷಿಸಲಾಗುತ್ತಿದೆ.

ಭಾರತದಲ್ಲಿ ವನ್ಯಜೀವಿಗಳನ್ನು ರಕ್ಷಣೆ ಮಾಡಲು ವನ್ಯಜೀವಿ ರಕ್ಷಣೆ ಕಾಯ್ದೆ 1972 ಇದೆ. ಈ ಕಾನೂನುಗಳ ನಿರ್ವಹಣೆ ಸರಿಯಾಗಿ ಆಗದಿರುವುದರಿಂದ ಹುಲಿ ಮತ್ತು ಇತರ ವನ್ಯಜೀವಿಗಳನ್ನು ಸಂರಕ್ಷಿಸಲು ಹುಲಿ ಸಂರಕ್ಷಣಾ ಪ್ರದೇಶಗಳ ಕೋರ್ ಏರಿಯಾಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೂಡಲೆ ಜಾರಿಗೆ ಬರುವಂತೆ ಘನ ಸುಪ್ರಿಂಕೋರ್ಟ್ ನಿಷೇಧ ಹೇರಿದೆ. ಹುಲಿ ಸಂರಕ್ಷಣೆಯಲ್ಲಿ ಇದು ಮಹತ್ತರ ತೀರ್ಪಾಗಿದೆ. ಹುಲಿ ಪ್ರವಾಸೋದ್ಯಮಕ್ಕೆ ದೇಶ ವಿದೇಶಗಳಿಂದ ಪ್ರವಾಸಿಗರು ಮುಗಿಬಿದ್ದು ಬರುತ್ತಿದ್ದಾರೆ. ಟೈಗರ್ ರಿಸರ್ವ್‌ಗಳ ಸುತ್ತಮುತ್ತ ಐಷಾರಾಮಿ ರೆಸಾರ್ಟ್ಸ್‌ಗಳು, ಜೀಪ್ ಸಫಾರಿಗಳು ನಾಯಿ ಕೊಡೆಯಂತೆ ತಲೆಯೆತ್ತಿವೆ. ಇವುಗಳನ್ನು



ಹದ್ದುಬಸ್ತಿನಲ್ಲಿಟ್ಟು ಹುಲಿ ಪ್ರವಾಸೋದ್ಯಮ ನಿಯಂತ್ರಿತವಾಗಿ ನಡೆಯಬೇಕಿದೆ.

**ಆನೆ ಸಫಾರಿ**

ರಾಷ್ಟ್ರದಲ್ಲಿ ಕಾಡಾನೆಗಳನ್ನು ಸಂರಕ್ಷಿಸಲು ಆನೆ ಯೋಜನೆ ಜಾರಿಯಲ್ಲಿದೆ. ದೇಶದಲ್ಲಿ 29 ಆನೆ ಯೋಜನೆಗಳ ಪ್ರದೇಶಗಳಿದ್ದು ಇವುಗಳ ಒಟ್ಟು ವ್ಯಾಪ್ತಿ 58,000 ಚ.ಕಿಮೀ ಆಗಿದ್ದು ಇಲ್ಲಿ 2005ರ ಗಣತಿಯಂತೆ 21300 ಕಾಡಾನೆಗಳಿವೆ. ರಾಜ್ಯದಲ್ಲಿ 2012 ಗಣತಿಯಂತೆ ಸುಮಾರು 6071 ಕಾಡಾನೆಗಳಿವೆ.

ಆನೆಗಳ ಪ್ರವಾಸೋದ್ಯಮ ರಾಜ ಮಹಾರಾಜರುಗಳ ಕಾಲದಿಂದಲೆ ನಡೆದುಬರುತ್ತಿದೆ. ಹಿಂದೆ ಕಬಿನಿ ನದಿಯ ಮಾಸ್ತಿ ಗುಡಿ ಎಂಬಲ್ಲಿ "ಖೆಡ್ಡಾ" ರೀತಿಯಲ್ಲಿ ಕಾಡಾನೆಗಳನ್ನು ಹಿಡಿದು ಪಳಗಿಸಲಾಗುತ್ತಿತ್ತು. ಕೊನೆಯ ಖೆಡ್ಡಾ 1971ರಲ್ಲಿ ನಡೆದಿದೆ.

ಅಭಯಾರಣ್ಯಗಳಲ್ಲಿ ವನ್ಯ ಪ್ರಾಣಿಗಳನ್ನು ವೀಕ್ಷಿಸಲು ಸಾಕಿದ ಆನೆಗಳ ಮೇಲೆ ಹೋಗುವುದು ಆನೆ ಸಫಾರಿ. ಇದು ಕರ್ನಾಟಕದ ಬಂಡೀಪುರ, ಬನ್ನೇರುಘಟ್ಟ, ನಾಗರಹೊಳೆ, ಶಿವಮೊಗ್ಗದ ಶೌಲಹಳ್ಳಿ ಆಭಯಾರಣ್ಯಗಳಲ್ಲಿದೆ. ಈಗ ಕುಶಾಲನಗರದ ದುಬಾರೆ, ನಾಗರಹೊಳೆಯ ಬಳ್ಳೆ ಹಾಗೂ ಆನೆಚೌಕೂರು ಹಾಗೂ ಶಿವಮೊಗ್ಗದ ಸಕ್ಕರೆ ಬೈಲಿನಲ್ಲಿರುವ ಆನೆ ಶಿಬಿರಗಳು ಪ್ರವಾಸಿಗಳಿಗೆ ಸಫಾರಿಗೆ ಹಾಗೂ ಆನೆ ವೀಕ್ಷಣೆಗೆ ವಿಶೇಷ ಅವಕಾಶವಿದೆ.

**ಪಕ್ಷಿಧಾಮಗಳಿಗೆ ಪ್ರವಾಸೋದ್ಯಮ**

ಪಕ್ಷಿ ವೀಕ್ಷಣೆ ಒಂದು ಉತ್ತಮ ಹವ್ಯಾಸ. ರಾಜಸ್ಥಾನದ ಭರತಪುರ ಪಕ್ಷಿಧಾಮ ಈಗ ಕೇವಲ್ ದೇವ್ ರಾಷ್ಟ್ರೀಯ ಉದ್ಯಾನವೆಂದು ಕರೆಯಲ್ಪಡುತಿದ್ದು ಇದು ವಿಶ್ವ ಪಾರಂಪರಿಕ ತಾಣವಾಗಿದೆ. ಕರ್ನಾಟಕದಲ್ಲಿ ಮೈಸೂರು ಬಳಿಯಿರುವ ರಂಗನತಿಟ್ಟು, ಮದ್ದೂರು ಬಳಿಯ ಕೊಕ್ಕರೆ ಬೆಳ್ಳೂರು, ಶಿವಮೊಗ್ಗದ ಮಂಡಗದ್ದೆ ಹಾಗೂ ಗುಡವಿ, ಗೋಕಾಕ್ ಬಳಿಯ ಘಟಪ್ರಭಾ ಪಕ್ಷಿಧಾಮ ಹಾಗೂ ಆದಿಚುಂಚನಗಿರಿಯ ನವಿಲುಧಾಮಗಳನ್ನು ಹೆಸರಿಸಬಹುದು.

ಪ್ರವಾಸೋದ್ಯಮದ ಅಂಗವಾಗಿ ಜನವರಿ 2015ರಲ್ಲಿ ದಕ್ಷಿಣಭಾರತದಲ್ಲೇ ಮೊದಲ ಬಾರಿಗೆ ಪ್ರಖ್ಯಾತ ರಂಗನತಿಟ್ಟುವಿನಲ್ಲಿ



"ಪಕ್ಷಿ ಹಬ್ಬ" ಆಚರಿಸಲಾಗಿದೆ. ಹಕ್ಕಿಗಳ ಛಾಯಾಚಿತ್ರ ಪ್ರದರ್ಶನ, ಪಕ್ಷಿತಜ್ಞ ಸಲೀಂ ಆಲಿ ಬಗ್ಗೆ ಕಾರ್ಯಾಗಾರ ಇತ್ಯಾದಿ ನಡೆಸಿ ವನ್ಯಜೀವಿ ಪ್ರವಾಸೋದ್ಯಮದಲ್ಲಿ ಹೊಸಹೆಜ್ಜೆ ಇಡಲಾಗಿದೆ.

**ವಿಶ್ವ ಪರಂಪರೆಯ ತಾಣಗಳಲ್ಲಿ ವನ್ಯಜೀವಿ ಪ್ರವಾಸೋದ್ಯಮ**

ಅರಣ್ಯ–ವನ್ಯಜೀವಿ ಪ್ರದೇಶಗಳು ಸೇರಿದಂತೆ ಈ ಕೆಳಕಂಡ ನೈಸರ್ಗಿಕ ಪರಿಸರ ತಾಣಗಳನ್ನು ಯುನೆಸ್ಕೊ ವಿಶ್ವ ಪಾರಂಪರಿಕೆಯ ತಾಣಗಳಾಗಿ ಸೇರಿಸಿದೆ.

1) ಅಸ್ಸಾಂ ಕಾಜಿರಂಗಾ ಹಾಗೂ ಮಾನಸ ವನ್ಯಜೀವಿ ಅಭಯಾರಣ್ಯ, 2) ರಾಜಸ್ಥಾನದ ಕೇವಲ್‌ದೇವ್ (ಭರತಪುರ) ರಾಷ್ಟ್ರೀಯ ಉದ್ಯಾನವನ, 3) ಭಾರತದ ಪರ್ವತ ಭಾಗದ ರೈಲ್ವೆಗಳಾದ ಡಾರ್ಜಿಲಿಂಗ್–ಹಿಮಾಲಯ ರೈಲ್ವೆ, ಊಟಿಯ ನೀಲಗಿರಿ ಮೌಂಟನ್ ರೈಲ್ವೆ ಹಾಗೂ ಶಿಮ್ಲಾ–ಕಲ್ಕಾ ರೈಲ್ವೆಗಳು ಇಂದಿಗೂ ರೋಮಾಂಚನಕಾರಿ ಪ್ರವಾಸ ನೀಡುತ್ತಿದ್ದು ಇವುಗಳು ಅರಣ್ಯಗಳ ಮೂಲಕ ಹಾದುಹೋಗುತ್ತವೆ., 4) ಉತ್ತರಾಖಂಡದ ಚಮೋಲಿ ಜಿಲ್ಲೆಯ ನಂದಾದೇವಿ ಮತ್ತು ಪುಷ್ಪಕಣಿವೆ ರಾಷ್ಟ್ರೀಯ ಉದ್ಯಾನ, 5) ಪಶ್ಚಿಮಬಂಗಾಳದ ಸುಂದರಬನ ಹುಲಿ ಸಂರಕ್ಷಿತ ಪ್ರದೇಶ, 6) ಹಿಮಾಚಲ ಪ್ರದೇಶದ ಗ್ರೇಟ್ ಹಿಮಾಲಯ ನ್ಯಾಷನಲ್ ಪಾರ್ಕ್, 7) ಪಶ್ಚಿಮಘಟ್ಟಗಳ ಅಗಸ್ಥಮಲ್ಯೆ, ಆನೆಮಲ್ಯೆ, ಪೆರಿಯಾರ್, ನೀಲಗಿರೀಶ, ತಲಕಾವೇರಿ ಹಾಗೂ ಕುದುರೆಮುಖ ಉಪಪ್ರದೇಶಗಳು.

ಈ ವಿಶ್ವಪರಂಪರೆಯ ತಾಣಗಳು ಜೀವ ವೈವಿಧ್ಯದಿಂದ ಕೂಡಿದ್ದು, ರುದ್ರ ರಮಣೀಯ ದೃಶ್ಯಗಳಿಂದ, ನದಿ ಜಲಪಾತಗಳ ರಮ್ಯ ನೋಟಗಳಿಂದ ವನ್ಯಜೀವಿಗಳ ಆಗರಗಳಾಗಿ ಪ್ರವಾಸಿಗರನ್ನು ಸೆಳೆಯುತ್ತಿವೆ. ಈ

ತಾಣಗಳಲ್ಲಿ ನಿಯಮಾನುಸಾರ ನಿಯಂತ್ರಿತ ಪ್ರವಾಸೋದ್ಯಮ ನಡಸುವುದರಿಂದ ಈ ಪ್ರದೇಶಗಳ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿಯಾಗಿ ಸ್ಥಳೀಯ ಜನರ ಜೀವನ ಸುಧಾರಿಸಿ ಭಾರತದ ಪರಂಪರೆ ನಿರಂತರವಾಗಿ ಮುಂದುವರಿಯುತ್ತದೆ.

### ಅರಣ್ಯ – ವನ್ಯಜೀವಿ ಪ್ರವಾಸೋದ್ಯಮ ಚಟುವಟಿಕೆಗಳು

ಅರಣ್ಯ ವನ್ಯಜೀವಿ ಪರಿಸರದಲ್ಲಿ ನೆಲ, ಜಲ, ಸಸ್ಯ, ಪ್ರಾಣಿ–ಪಕ್ಷಿ ಎಲ್ಲವೂ ಇದೆ. ಯಾವುದೇ ವರ್ಗದ ಯಾವುದೇ ವಯಸ್ಸಿನ ಪ್ರವಾಸಿಗರು ಅವರವರ ಆಸಕ್ತಿಗೆ ತಕ್ಕಂತೆ ಈ ಕೆಳಗಿನ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾಗಿದೆ. ನಿಸರ್ಗ ಚಾರಣ, ವನ್ಯಜೀವಿ, ಸಫಾರಿ, ಪಕ್ಷಿ ವೀಕ್ಷಣೆ, ಆನೆ ಸವಾರಿ, ಜೈವಿಕ ಉದ್ಯಾನ ಭೇಟಿ, ಚಿಟ್ಟೆ ಪಾರ್ಕ್‌ಗೆ ಭೇಟಿ, ಮೂಲವಾಸಿ ವಸತಿಗೆ ಭೇಟಿ, ಮೃಗಾಲಗಳಿಗೆ ಭೇಟಿ, ಸಮುದ್ರ ತೀರ ಭೇಟಿ, ವನ್ಯಜೀವಿ ಛಾಯಾಚಿತ್ರಣ, ದೋಣಿ ವಿಹಾರ, ರಿವರ್ ರಾಫ್ಟಿಂಗ್, ಪರ್ವತಾರೋಹಣ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳಿವೆ.

### ಅರಣ್ಯ ವಸತಿ ಮತ್ತು ವಿಹಾರ ಧಾಮಗಳು (ಜೆ.ಎಲ್.ಆರ್)

1978ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು ನೇಪಾಳದ ಚಿತ್ತವಾನ್ ರಾಷ್ಟ್ರೀಯ ಉದ್ಯಾನದ ಟೈಗರ್ ಟಾಪ್ ಜಂಗಲ್ ಲಾಡ್ಜಸ್‌ಗೆ ಭೇಟಿ ನೀಡಿದಾಗ ಆದ ಪ್ರೇರಣೆಯಿಂದ ಕರ್ನಾಟಕದಲ್ಲಿಯೂ ಅದೇ ರೀತಿಯ ಪ್ರವಾಸೋದ್ಯಮ ಪ್ರಾರಂಭಿಸಲು ತೀರ್ಮಾನಿಸಿದರು. ಅದರಂತೆ ಹಿಂದೆ ಮೈಸೂರು ಮಹಾರಾಜರು ಕಪಿಲಾ ನದಿಯ ದಂಡೆಯ ಕಾರಾಪುರದಲ್ಲಿ ಕಲ್ಪಿಸಿದ್ದ ಬೇಟೆ ವಸತಿಗೃಹದಲ್ಲಿ ಅರಣ್ಯ ವಸತಿ ಮತ್ತು ವಿಹಾರ ಧಾಮವನ್ನು ಪ್ರಾರಂಭಿಸಲಾಯಿತು. ಈಗ ಇದನ್ನು ಪ್ರಪಂಚದ ಐದು ವನ್ಯಜೀವಿ ರೆಸಾರ್ಟ್‌ಗಳಲ್ಲಿ ಒಂದು ಎಂದು ಗುರುತಿಸಲಾಗಿದೆ. ಇಂದು ಜೆ.ಎಲ್.ಆರ್ ಕರ್ನಾಟಕದ ಅರಣ್ಯಗಳ ಅಂಚಿನಲ್ಲಿ ಒಟ್ಟು 17 ರೆಸಾರ್ಟ್‌ಗಳನ್ನು ಹೊಂದಿದೆ. ಅವುಗಳೆಂದರೆ :

1) ಕಾರಾಪುರದ ಕಬಿನಿ ರಿವರ್ ಲಾಡ್ಜ್,
2) ಕಾರವಾರದ ದೇವಭಾಗ್ ಬೀಚ್ ರೆಸಾರ್ಟ್.
3) ಬಂಡೀಪುರ ಸಫಾರಿ ಲಾಡ್ಜ್,
4) ಬನ್ನೇರುಘಟ್ಟ ನಿಸರ್ಗ ಶಿಬಿರ,
5) ಕಾವೇರಿ ಅಭಯಾರಣ್ಯದಲ್ಲಿ ಕಾವೇರಿ ನದಿದಡದಲ್ಲಿಯ ಭೀಮೇಶ್ವರಿ ಪ್ರಕೃತಿ ಮತ್ತು ಸಾಹಸ ಕ್ಯಾಂಪ್,
6) ಸಂಗಮ್ ಬಳಿ ಇರುವ ಗಾಳಿ ಬೋರೆ ನಿಸರ್ಗ ಶಿಬಿರ,
7) ಅಣಶಿ – ದಾಂಡೇಲಿ ಟೈಗರ್ ರಿಸರ್ವ್ ಬಳಿಯ ಕಾಳಿ ವೈಲ್ಡರ್‌ನೆಸ್ ಕ್ಯಾಂಪ್,
8) ಬಿ.ಆರ್.ಟಿ ಟೈಗರ್ ರಿಸರ್ವ್ ಸಮೀಪವಿರುವ ಕೆ.ಗುಡಿ ವೈಲ್ಡರ್‌ನೆಸ್ ಕ್ಯಾಂಪ್,
9) ಗೋಕರ್ಣ ಓಂಬೀಚ್ ರೆಸಾರ್ಟ್,
10) ಬಿ.ಆರ್.ಪಿ ಯಲ್ಲಿ ಭದ್ರಾ ಟೈಗರ್ ರಿಸರ್ವ್ ಬಳಿಯಿರುವ ರಿವರ್ ಟರ್ನ್ ಲಾಡ್ಜ್,
11) ಕುಶಾಲನಗರ ಬಳಿಯ ದುಬಾರೆ ಆನೆ ಶಿಬಿರ,
12) ಮಂಗಳೂರಿನ ಪಿಲಿಕುಳದಲ್ಲಿರುವ ಫಲ್ಗುಣಿ ರಿವರ್ ಲಾಡ್ಜ್.

ಇವುಗಳು ಅರಣ್ಯ, ವನ್ಯಜೀವಿ ಹಾಗೂ ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗಿರುವ ಉತ್ತಮ ದರ್ಜೆಯ ಪ್ರವಾಸಿತಾಣಗಳು. ದುಬಾರಿಯಾದರೂ ವಿಶ್ವದರ್ಜೆಯ ಊಟ, ವಸತಿ, ಆತಿಥ್ಯ, ವನ್ಯಜೀವಿ ಮಾರ್ಗದರ್ಶನ ಹಾಗೂ ನಿರ್ವಹಣೆಗಳಿವೆ. ಅರಣ್ಯ ಇಲಾಖೆ "ಪ್ರವಾಸೋದ್ಯಮ ವಲಯ" ಎಂದು ಗುರುತಿಸಿರುವ ಕಡೆ ಜೆ.ಎಲ್.ಆರ್ ತನ್ನ ಪ್ರವಾಸಿಗರಿಗೆ ಸಫಾರಿ ನಡೆಸುತ್ತದೆ.

### ಪರಿಸರ ಪ್ರವಾಸೋದ್ಯಮದಲ್ಲಿ ಕಟ್ಟುನಿಟ್ಟಿನ ನಿಯಮಾವಳಿಗಳು

ಜನಸಂಖ್ಯೆ ಹೆಚ್ಚಳ, ನಗರೀಕರಣ, ಕೈಗಾರಿಕೆ, ಜನಾಭಿವೃದ್ಧಿ ಕಾರ್ಯಕ್ರಮಗಳು ಆಧುನಿಕ ತಂತ್ರಜ್ಞಾನ ಹಾಗೂ ಆರ್ಥಿಕ ಪ್ರಗತಿಯಿಂದ ಅರಣ್ಯಗಳ ಮೇಲೆ ಇಂದು ಒತ್ತಡ ಜಾಸ್ತಿಯಾಗಿದೆ. ಅರಣ್ಯ ಮತ್ತು ವನ್ಯಜೀವಿಗಳನ್ನು ರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಿಕೊಂಡು ಹೋಗುವುದು ಅತ್ಯಾವಶ್ಯವಾಗಿದೆ. ಈ ನಿಟ್ಟಿನಲ್ಲಿ ಪರಿಸರ ಪ್ರವಾಸೋದ್ಯಮದ ಸೂಕ್ತ ನಿಯಮಾವಳಿ ರೂಪಿಸಿ, ಅನುಷ್ಠಾನಗೊಳಿಸುವಂತೆ ಸುಪ್ರೀಂಕೋರ್ಟ್ ಎಲ್ಲಾ ರಾಜ್ಯಗಳಿಗೆ



ನಿರ್ದೇಶನ ನೀಡಿದೆ. ಅದರಂತೆ ಜನವರಿ 2015ರಲ್ಲಿ ಬೆಂಗಳೂರಿನಲ್ಲಿ ಸಮ್ಮೇಳನ ನಡೆಸಿ ಪರಿಸರ ಪ್ರವಾಸೋದ್ಯಮ ನಿಯಮಾವಳಿ ಮತ್ತು ಮಾರ್ಗಸೂಚಿ ತಯಾರಿಸಲಾಗುತ್ತಿದೆ. ಕೇಂದ್ರ ಹಾಗೂ ರಾಜ್ಯಸರ್ಕಾರ, ಪರಿಸರ ತಜ್ಞರು, ರೆಸಾರ್ಟ್ ಮಾಲಿಕರು, ಪ್ರವಾಸೋದ್ಯಮ ಆಯೋಜಕರು, ಕಾಡು ಹಾಗೂ ಕಾಡಂಚಿನ ನಿವಾಸಿಗಳು, ಸ್ವಯಂ ಸೇವಾ ಸಂಸ್ಥೆಗಳು, ಮಹಿಳೆಯರು ಈ ಎಲ್ಲಾ ಫಲಾನುಭವಿಗಳು ಸೇರಿ ಅರಣ್ಯ ವನ್ಯಜೀವಿ ಸಂರಕ್ಷಣೆಗೆ ಧಕ್ಕೆ ಆಗದಂತೆ ಪರಿಸರ ಪ್ರವಾಸೋದ್ಯಮದಲ್ಲಿ ಭಾಗಿಯಾಗಬೇಕು.

### ಪ್ರವಾಸೋದ್ಯಮದಲ್ಲಿ ಸ್ಥಳೀಯರ ಸಹಭಾಗಿತ್ವ

ಪರಿಸರ ಸ್ನೇಹಿ ಪ್ರವಾಸೋದ್ಯಮದ ಸುಸ್ಥಿರ ದೃಷ್ಟಿಯಿಂದ ಸ್ಥಳೀಯರ ಪಾಲ್ಗೊಳ್ಳುವಿಕೆ ಮಹತ್ವದ್ದು. ಹೊಸ ಹೊಸ ಉದ್ಯೋಗಗಳು ಸೃಷ್ಟಿಯಾಗಿ ಸ್ಥಳೀಯರೇ ಆ ಲಾಭ ಪಡೆದುಕೊಳ್ಳುವಂತೆ ಮಾಡುವುದು ಗುರಿಯಾಗಬೇಕು. ತನ್ಮೂಲಕ ಜನತೆಯಲ್ಲಿರುವ ಪಾರಂಪರಿಕ ಜ್ಞಾನವನ್ನು ಸದ್ಬಳಕೆ ಮಾಡಿ ರಕ್ಷಿಸಿಡಲು ಸಾಧ್ಯವಾಗಬೇಕು. ಕಾಡಿನಲ್ಲಿರುವ ವನವಾಸಿ ಜನರ ಅನುಭವ ಜ್ಞಾನಭಂಡಾರ ಗಟ್ಟಿಯಾಗಿದೆ. ಈ ಜ್ಞಾನವನ್ನು "ಬೇಟೆ"ಗೆ ಅವರು ಬಳಸದಂತೆ ಕಾಡಿನ ಪ್ರಾಣಿಗಳನ್ನು "ಭೇಟಿ" ಮಾಡಿಸುವ ಸಾಧನವಾಗಿ ಬಳಸಿಕೊಳ್ಳಲು ಮಾರ್ಗದರ್ಶನ ಸಿಕ್ಕರೆ ಪರಂಪರಾಗತ ಜ್ಞಾನ ಭಂಡಾರವನ್ನು ಪರಿಸರ ಸಂರಕ್ಷಣೆಯಲ್ಲಿ ಬಳಸಿಕೊಂಡಂತಾಗುತ್ತದೆ. ಅಲ್ಲದೆ ವನವಾಸಿಗಳಿಗೂ ಉದ್ಯೋಗ, ಪ್ರವಾಸೋದ್ಯಮ ಲಾಭದಲ್ಲಿ ಪಾಲುದಾರರನ್ನಾಗಿಸಲು ಸಾಧ್ಯವಿದೆ. ಸ್ಥಳೀಯ ಕರಕುಶಲಿಗಳ ಉತ್ಪನ್ನಗಳಿಗೆ ನೇರವಾದ ಮಾರುಕಟ್ಟೆಯ ವ್ಯವಸ್ಥೆಯನ್ನು ಸಹ ಈ ಪ್ರವಾಸೋದ್ಯಮದ ಮೂಲಕ ಮಾಡಲು ಸಾಧ್ಯವಿದೆ. ನಾಗರಹೊಳೆ –

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಗಳ ಸುತ್ತಲಿರುವ 'ಜೇನು ಕುರುಬ', ಹಾಗೂ 'ಬೆಟ್ಟ ಕುರುಬ' ಮೂಲ ವಾಸಿಗಳು, ಬಿಳಿಗಿರಿ ರಂಗನ ಅಭಯಾರಣ್ಯದಲ್ಲಿ ಮತ್ತು ಅದರ ಅಂಚಿನಲ್ಲಿರುವ 'ಸೋಲಿಗ' ಮೂಲ ಜನರು ಉತ್ತರಕನ್ನಡ ಜಿಲ್ಲೆಯಲ್ಲಿರುವ 'ಸಿದ್ದಿ' ಬುಡಕಟ್ಟು ಜನರನ್ನು ಪರಿಸರ ಪ್ರವಾಸೋದ್ಯಮದಲ್ಲಿ ಪಾಲುದಾರರನ್ನಾಗಿ ಬಳಸಿಕೊಳ್ಳಬೇಕು.

ಉತ್ತರಕನ್ನಡ ಜಿಲ್ಲೆಯ ದಾಂಡೇಲಿ – ಅಣಶಿ ಹುಲಿ ಸಂರಕ್ಷಿತ ಪ್ರದೇಶದ (ಡಿಎಟಿಆರ್) ಅಣಶಿ ಹಾಗೂ ಕುಳಗಿಯಲ್ಲಿ ಕಾಟೇಜ್ ಟೆಂಟ್ ಮಾದರಿಯಲ್ಲಿ ವಸತಿ ಸೌಲಭ್ಯ ಪರಿಸರ ಪ್ರವಾಸಿಗರಿಗೆ ಕಟ್ಟಿಸಿದೆ. ಇವುಗಳು ಸಾಮಾನ್ಯ ಜನರಿಗೂ ಕೈಗೆಟಕುವ ದರದಲ್ಲಿವೆ. ಡಿಎಟಿಆರ್‌ನಲ್ಲಿಯ ಪಣಸೋಲಿಯಲ್ಲಿ ಸ್ಥಳೀಯ ಜನರ ಪರಿಸರ ಅಭಿವೃದ್ಧಿ ಸಮಿತಿಗಳು (ಇಡಿಸಿ) ವನ್ಯಜೀವಿ ಸಫಾರಿ ನಡೆಸುತ್ತವೆ. ಕರ್ನಾಟಕದ ಅರಣ್ಯ ಇಲಾಖೆಯ ಜಂಟಿ ಅರಣ್ಯ ಯೋಜನೆಯಲ್ಲಿ ಗ್ರಾಮ ಅರಣ್ಯ ಸಮಿತಿ ಹಾಗೂ ಇಲಾಖೆಯ ವನ್ಯಜೀವಿ ಘಟಕದಿಂದ ಪರಿಸರ ಅಭಿವೃದ್ಧಿ ಸಮಿತಿಗಳನ್ನು ರಚಿಸಿ ಅರಣ್ಯ ಮತ್ತು ವನ್ಯಜೀವಿ ಆವಾಸಗಳನ್ನು ಸ್ಥಳೀಯ ಜನರ ಸಹಭಾಗಿತ್ವದಲ್ಲಿ ರಕ್ಷಣೆ ಮಾಡಲಾಗುತ್ತಿದೆ. ಉದಾಹರಣೆಗೆ ಹೊನ್ನಾವರ ಅರಣ್ಯ ವಿಭಾಗದಲ್ಲಿ ಪ್ರಸಿದ್ಧ "ಯಾಣ" ಪರಿಸರ ಪ್ರವಾಸೋದ್ಯಮ ಕೇಂದ್ರವನ್ನು ಗ್ರಾಮ ಅರಣ್ಯ ಸಮಿತಿ ಯಶಸ್ವಿಯಾಗಿ ನಡೆಸುತ್ತಿದೆ. ಗೋಕರ್ಣದ ಓಂ ಬೀಚ್, ನುಸಿಕೋಟೆಯ ಮ್ಯಾಂಗ್ರೂವ (ಕಾಂಡ್ಲವನ) ಕಾಡುಗಳು, ಕಾಸರಗೋಡಿನ ಇಕೊ–ಬೀಚ್ ..... ಹೀಗೆ ಸ್ಥಳೀಯರಿಂದ ರಚಿತಗೊಂಡ ಗ್ರಾಮ ಅರಣ್ಯ ಸಮಿತಿಗಳು ಪರಿಸರ ಪ್ರವಾಸೋದ್ಯಮ ಕೇಂದ್ರಗಳನ್ನು ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ ನಡೆಸುತ್ತಿವೆ. ಇದರಿಂದ ಬರುವ ಲಾಭದಲ್ಲಿ ಶೇ.10ಅನ್ನು ಸರ್ಕಾರಕ್ಕೆ ಕಟ್ಟಿ, ಉಳಿದ ಶೇ. 90 ಅನ್ನು ಗ್ರಾಮ ಅರಣ್ಯ ಸಮಿತಿಗಳು ಉಪಯೋಗಿಸಿಕೊಳ್ಳುತ್ತಿವೆ.

ದೇಶದಲ್ಲಿ ವನ್ಯಜೀವಿಧಾಮಗಳ ಅಂಚಿನಲ್ಲಿ 'ಇಕೊ ರೆಸಾರ್ಟ್'ಗಳು ಬಹಳಷ್ಟು ತಲೆ ಎತ್ತಿವೆ. ಕರ್ನಾಟಕದ ಬಂಡಿಪುರ – ನಾಗರಹೊಳೆ, ದಾಂಡೇಲಿ – ಅಣಶಿ, ತಮಿಳುನಾಡಿನ ಮಧುಮಲೈ – ನೀಲಗಿರಿ, ಕೇರಳದ ತೇಕಡಿ (ಪೆರಿಯಾರ್), ರಾಜಸ್ಥಾನದ ರಣಥಂಬೋರ್ ಹೀಗೆ ಹಲವು ಹುಲಿ ಸಂರಕ್ಷಿತ ಪ್ರದೇಶಗಳ ಸುತ್ತಮುತ್ತ ಇಕೊ ರೆಸಾರ್ಟ್‌ಗಳು ದೇಶ–ವಿದೇಶಿಯ ಪ್ರವಾಸಿಗಳ ಬೇಕು ಬೇಡಗಳನ್ನು ತಣಿಸಲು ತೊಡಗಿವೆ. ಕರ್ನಾಟಕದ ಪಶ್ಚಿಮ ಘಟ್ಟಗಳ ಹಲವು ಕಣಿವೆ ಮನೆಗಳಲ್ಲಿ 'ಹೋಂಸ್ಟೇ'' ಪದ್ಧತಿ ಬಲವಾಗಿ ಬೇರೂರುತ್ತಿದೆ. ರಾಜ್ಯದ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪರಿಸರ ಪ್ರವಾಸಿಗರಿಗೆ ಹೋಂಸ್ಟೇ ಮೂಲಕ ವಸತಿ ನೀಡಿ ಸ್ಥಳೀಯ ಆತಿಥ್ಯದೊಡನೆ ಅಲ್ಲಿಯ ಸಾಂಸ್ಕೃತಿಕ ಪರಂಪರೆಯ ಪರಿಚಯ ಮಾಡಿಸಲಾಗುತ್ತಿದೆ.

### ವನ್ಯಜೀವಿ ಪ್ರವಾಸೋದ್ಯಮ–ಕೇರಳ ಮಾದರಿ

ದಕ್ಷಿಣ ಭಾರತದಲ್ಲಿ ದೇವ ಸೃಷ್ಟಿಯ ನಾಡೆಂದೇ ಪ್ರಸಿದ್ಧವಾಗಿರುವ ಕೇರಳ ರಾಜ್ಯ ಅರಣ್ಯ–ವನ್ಯಜೀವಿ ಪ್ರವಾಸೋದ್ಯಮದಲ್ಲಿ ಮುಂಚೂಣಿಯಲ್ಲಿದೆ. ಇಲ್ಲಿನ ಪೆರಿಯಾರ್ ಟೈಗರ್ ರಿಜರ್ವ್ (ಪಿಟಿಆರ್) ಅರಣ್ಯದಲ್ಲಿ ಹಿಂದೆ ಜೀವನೋಪಾಯಕ್ಕಾಗಿ ಅರಣ್ಯ ಸಂಪತ್ತಿಗೆ ಕನ್ನ ಹಾಕುತ್ತಿದ್ದವರು ಈಗ ಅರಣ್ಯ ಪರಿಪಾಲಕರು. 'ವಿನಾಶದಿಂದ ವಿಕಾಸದೆಡೆಗೆ' ಎನ್ನುವ ಧ್ಯೇಯದಲ್ಲಿ ಸಮುದಾಯ ಆಧಾರಿತ ವನ್ಯಜೀವಿ ಪ್ರವಾಸೋದ್ಯಮ ಇಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಪಿಟಿಆರ್‌ನಲ್ಲಿ ಐದು ಪರಿಸರ ಅಭಿವೃದ್ಧಿ ಸಮಿತಿಗಳು (ಇಡಿಸಿ) ಪ್ರವಾಸೋದ್ಯಮ ಸಮಿತಿಗಳಾಗಿವೆ. ಈ ಸಮಿತಿಗಳಲ್ಲಿ ಶೇ. 80 ರಷ್ಟು ಬುಡಕಟ್ಟು ಹಾಗೂ ಉಳಿದ ಶೇ.20ರಷ್ಟು ಸದಸ್ಯರು ಇತರೆ ಸ್ಥಳೀಯರಾಗಿದ್ದಾರೆ. ಪ್ರವಾಸೋದ್ಯಮದಿಂದ ಬರುವ ಆದಾಯದಲ್ಲಿ ಶೇ.100 ರಷ್ಟನ್ನು ಸರ್ಕಾರಕ್ಕೆ ನೀಡಿ ಉಳಿದದ್ದನ್ನು ಸದಸ್ಯರ ವೇತನ, ಅವರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗುತ್ತದೆ.

### ಅರಣ್ಯ ಮತ್ತು ವನ್ಯಜೀವಿ ಪ್ರವಾಸೋದ್ಯಮಗಳು ಕಾನೂನುಬದ್ದ

ಅರಣ್ಯ–ವನ್ಯಜೀವಿ ಪ್ರವಾಸಗಳು ಇತರೆ ಅಂದರೆ ಸಾಮೂಹಿಕ, ಸಾಂಸ್ಕೃತಿಕ, ಐತಿಹಾಸಿಕ, ಧಾರ್ಮಿಕ, ಕ್ರೀಡಾ ಪ್ರವಾಸೋದ್ಯಮಗಳಂತೆ ಕೇವಲ ಮನರಂಜನೆ ವಿರಾಮ ವಿಹಾರಕ್ಕೆಂದೇ ಸೀಮಿತವಾಗಿರುವುದಿಲ್ಲ. ಅರಣ್ಯ–ವನ್ಯಜೀವಿ ಪ್ರವಾಸೋದ್ಯಮ ನಿಯಂತ್ರಿತವಾಗಿ, ಕಾನೂನು ಬದ್ಧವಾಗಿ ಇರಬೇಕಾಗುತ್ತದೆ.

ರಾಷ್ಟ್ರದ ಸಂವಿಧಾನದ ಕಲಂ 51(ಎ) ಪ್ರಕಾರ ಅರಣ್ಯಗಳು, ಸರೋವರಗಳು,



ನದಿಗಳು ಮತ್ತು ವನ್ಯಜೀವಿಗಳ ಸಮೇತ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಮತ್ತು ಸುಧಾರಿಸುವುದು ಹಾಗೂ ಜೀವಿಗಳಿಗೆ ಅನುಕಂಪ ತೋರಿಸುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವಾಗಿದೆ. ಭಾರತೀಯ ಅರಣ್ಯ ಕಾಯ್ದೆ 1927 ಹಾಗೂ ವನ್ಯಜೀವಿ ರಕ್ಷಣೆ ಕಾಯ್ದೆ 1972 ಮತ್ತು ಕರ್ನಾಟಕ ಅರಣ್ಯಕಾಯ್ದೆ 1963 ಮತ್ತು ನಿಯಮ 1969ರಲ್ಲಿರುವ ಕಾನೂನುಗಳಂತೆ ಅರಣ್ಯ–ವನ್ಯಜೀವಿ ಪ್ರವಾಸೋದ್ಯಮ ನಡೆಯಬೇಕು. ತಪ್ಪಿದಲ್ಲಿ ಶಿಕ್ಷೆ ಇದೆ.

ಅಭಯಾರಣ್ಯ, ರಾಷ್ಟ್ರೀಯ ಉದ್ಯಾನ ಹಾಗೂ ಹುಲಿ ಸಂರಕ್ಷಿತ ಪ್ರದೇಶಗಳಿಗೆ ಪ್ರವೇಶಿಸಲು, ಅರಣ್ಯದಲ್ಲಿ ಚಾರಣ ಮಾಡಲು ಅಧಿಕಾರಯುತ ಅರಣ್ಯಾಧಿಕಾರಿಗಳ ಪೂರ್ವಾನುಮತಿ ಬೇಕು. ಅರಣ್ಯ–ವನ್ಯಜೀವಿ ಪ್ರದೇಶದಲ್ಲಿ ವನ್ಯಜೀವಿಗಳ ಶೋಧನೆ ಅಥವ ಅಧ್ಯಯನ, ಛಾಯಾಗ್ರಹಣ, ವೈಜ್ಞಾನಿಕ ಸಂಶೋಧನೆ ಹಾಗೂ ಪ್ರವಾಸೋದ್ಯಮಕ್ಕಾಗಿ ವನ್ಯಜೀವಿ ಪರಿಪಾಲಕರ ಲಿಖಿತ ಪೂರ್ವಾನುಮತಿ ಬೇಕು.

### ಅರಣ್ಯ ವನ್ಯಜೀವಿ ಪ್ರವಾಸೋದ್ಯಮಕ್ಕೆ ಕೆಲವು ಸಲಹೆ ಸೂಚನೆಗಳು

* ವನ್ಯಜೀವಿ ಪ್ರವಾಸಗಳಲ್ಲಿ ಹೆಚ್ಚು ಅಪಾಯಕಾರಿ ಸನ್ನಿವೇಶಗಳನ್ನು ಎದುರಿಸಬೇಕಾಗಬಹುದು. ಈ ಪ್ರವಾಸವು ವಿಶಿಷ್ಟವಾದ್ದರಿಂದ ಅರಣ್ಯ ಮತ್ತು ವನ್ಯಜೀವಿಗಳ ಬಗ್ಗೆ ವಿಶೇಷ ಮುನ್ನೆಚ್ಚರಿಕೆ ಹಾಗೂ ಕೌಶಲಗಳ ಅಗತ್ಯವಿದೆ.
* ಪ್ರಕೃತಿಗೆ ಹೊಂದುವ ಹಸಿರು, ಕಂದು ಅಥವ ಕಾಕಿ ಇತ್ಯಾದಿ ಅರಣ್ಯ ಸ್ನೇಹಿ ಬಣ್ಣಗಳ ಬಟ್ಟೆಗಳನ್ನು ಧರಿಸುವುದು.

(51ನೇ ಪುಟಕ್ಕೆ)

# ನಿಮಗಿದು ತಿಳಿದಿದೆಯೇ?

ವೀಸಾ, ನಿಗದಿತ ಅವಧಿಗಾಗಿ ಭೇಟಿ ನೀಡಲು ಬಯಸುವ ವಿದೇಶಿ ನಾಗರಿಕರಿಗಾಗಿ ಸಂಬಂಧ ಪಟ್ಟ ದೇಶ ಕಲ್ಪಿಸುವ ಕಾನೂನುಬದ್ಧ ಅನುಮತಿಯಾಗಿದೆ. ಪಾಸ್‌ಪೋರ್ಟ್ ರಹದಾರಿ ಪತ್ರದ ಮೇಲೆ ಈ ಅನುಮತಿಯನ್ನು ಸಾಮಾನ್ಯವಾಗಿ ಮೊಹರಾಗಿ ಹಾಕಲಾಗುತ್ತದೆ. ಒಂದು ದೇಶ ಪ್ರವೇಶಿಸಲು / ಭೇಟಿ ನೀಡಲು ವೀಸಾ ಜೊತೆಗೆ ವಲಸೆ ಅಧಿಕಾರಿಗಳ ಸಮ್ಮತಿಯೂ ಬೇಕಾಗುತ್ತದೆ. ಯಾವುದೇ ಬಗೆಯ ವೀಸಾಕ್ಕೂ ನಿರ್ದಿಷ್ಟ ಅಗತ್ಯ ಷರತ್ತುಗಳಿರುತ್ತವೆ. ಭಾರತ ಸರ್ಕಾರ ನೀಡುವ ವಿವಿಧ ರೀತಿಯ ವೀಸಾ ಈ ಮುಂದಿನಂತಿವೆ.

**ಪ್ರವಾಸಿ ವೀಸಾ :** ಭಾರತಕ್ಕೆ ಸಂದರ್ಶನ ಹಾಗೂ ಪ್ರವಾಸಿ ಉದ್ದೇಶಗಳಿಗೆ ಬರುವ ವಿದೇಶಿಗರಿಗೆ ಸ್ಥಳ ವೀಕ್ಷಣೆ ಮತ್ತು ಸಂಬಂಧಿಕರ ಭೇಟಿಗಾಗಿ ಆಯಾ ದೇಶ ಅವಲಂಬಿಸಿ ನಿಗದಿತ ಅವಧಿಗಾಗಿ ಈ ವೀಸಾ ನೀಡಲಾಗುತ್ತದೆ.

**ಉದ್ಯೋಗ ವೀಸಾ :** ನುರಿತ ವೃತ್ತಿಪರರಿಗೆ ಅಥವಾ ಉದ್ಯೋಗಸ್ಥ ವಿದೇಶಿಯರಿಗೆ ಒಂದು ವರ್ಷದ ಅವಧಿಗಾಗಿ ಉದ್ಯೋಗ ವೀಸಾ ನೀಡಲಾಗುತ್ತದೆ.

**ವಿದ್ಯಾರ್ಥಿ ವೀಸಾ :** ಮನ್ನಣೆ ಪಡೆದ ಸಂಸ್ಥೆಯಲ್ಲಿ ವಿದ್ಯಾಭ್ಯಾಸಕ್ಕಾಗಿ ಬರುವ ವಿದೇಶಿ ವಿದ್ಯಾರ್ಥಿಗಳಿಗೆ ಗರಿಷ್ಠ ಐದು ವರ್ಷಗಳ ಅವಧಿಗಾಗಿ ಈ ವೀಸಾ ನೀಡಲಾಗುತ್ತದೆ.

**ಕಾನ್ಫರೆನ್ಸ್ ವೀಸಾ :** ಅಂತಾರಾಷ್ಟ್ರೀಯ ಸಮಾವೇಶಗಳಿಗೆ ಬರುವ ವಿದೇಶಿ ನಿಯೋಗದ ಸದಸ್ಯರ ವೀಸಾಕ್ಕೆ ಸಂಬಂಧಪಟ್ಟ ಕೇಂದ್ರ – ರಾಜ್ಯ ಸರ್ಕಾರಗಳ ಇಲಾಖೆಯಿಂದ ಸಮ್ಮತಿ ಅಗತ್ಯ.

**ಮಾಧ್ಯಮ ವೀಸಾ :** ಮುದ್ರಣ ಹಾಗೂ ವಿದ್ಯುನ್ಮಾನಗಳ ಮಾಧ್ಯಮದವರಿಗೆ ವೃತ್ತಿಪರ ಉದ್ದೇಶಗಳಿಗಾಗಿ ಆರು ತಿಂಗಳವರೆಗೆ ವೀಸಾ ನೀಡಲಾಗುತ್ತದೆ.

**ಸಂಶೋಧನಾ ವೀಸಾ :** ಸಂಶೋಧನಾ ಸಂಸ್ಥೆಯ ಸ್ಥಾನ ಹಾಗೂ ಅರ್ಜಿದಾರರ ಅರ್ಹತೆ ಅನುಸರಿಸಿ, ಗರಿಷ್ಠ ಮೂರು ವರ್ಷಗಳವರೆಗೆ ಸಂಶೋಧನಾ ವೀಸಾ ನೀಡಲಾಗುತ್ತದೆ.

**ವೈದ್ಯಕೀಯ ವೀಸಾ :** ಭಾರತದಲ್ಲಿ ವಿವಿಧ ವೈದ್ಯಕೀಯ ಚಿಕಿತ್ಸೆಗಾಗಿ ನೀಡುವ ವೀಸಾದ ಗರಿಷ್ಠ ಅವಧಿ ಒಂದು ವರ್ಷ.

**ಮಾರ್ಗ ಮಧ್ಯ ವೀಸಾ :** ಒಂದು ದೇಶದಿಂದ ಮತ್ತೊಂದು ದೇಶಕ್ಕೆ ತೆರಳುವ ಸಂದರ್ಭದಲ್ಲಿ ಮಾರ್ಗ ಮಧ್ಯ ಬರುವ ವಿದೇಶಿಗರಿಗೆ ನಿರ್ಗಮನ ಟಿಕೆಟ್ ಗಮನದಲ್ಲಿಟ್ಟು ನೀಡಲಾಗುವ ಟ್ರಾನ್ಸಿಟ್ ವೀಸಾದ ಅವಧಿ 15 ದಿನಗಳಾಗಿರುತ್ತವೆ. ❑

(50ನೇ ಪುಟದಿಂದ)

## ಪ್ರಕೃತಿ ಮಡಿಲ ಪ್ರವಾಸೋದ್ಯಮ

* ಭೇಟಿ ನೀಡುವ ಸ್ಥಳಗಳ ನಿಯಮಗಳು ಹಾಗೂ ಮಾರ್ಗದರ್ಶನಗಳನ್ನು ತಪ್ಪದೆ ಪಾಲಿಸುವುದು.
* ನಿಗದಿತ ಸ್ಥಳಗಳಲ್ಲಿ ಮಾತ್ರ ವಾಹನ ನಿಲುಗಡೆ ಮಾಡುವುದು.
* ವನ್ಯಜೀವಿ ಅಭಯಾರಣ್ಯಗಳಲ್ಲಿ ಫ್ಲ್ಯಾಷ್ ಇಲ್ಲದ ಕ್ಯಾಮೆರ ಬಳಸುವುದು.
* ಪ್ರವಾಸ ಕಾಲದಲ್ಲಿ ಉಂಟುಮಾಡುವ ಕಸ ಮತ್ತು ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವುದು.
* ಅರಣ್ಯ–ವನ್ಯಜೀವಿ ಪ್ರವಾಸೋದ್ಯಮ ದಲ್ಲಿ ಮದ್ಯಪಾನ, ಧೂಮಪಾನ ಮಾದಕ ವಸ್ತುಗಳ ಸೇವನೆ ಕುಣಿತ ಇತ್ಯಾದಿಗಳು ನಿಷಿದ್ಧ.
* ಬೆಂಕಿ ಹಚ್ಚುವುದು, ಬೇಟೆಯಾಡುವುದು ಶಿಕ್ಷಾರ್ಹ.
* ಪ್ಲಾಸ್ಟಿಕ್ ಬಳಸಬಾರದು ಮತ್ತು ಎಸೆಯಬಾರದು.
* ಸಸ್ಯಗಳು ಸೇರಿದಂತೆ ಯಾವುದೆ ವನ್ಯಜೀವಗಳನ್ನು ಸಂಗ್ರಹಿಸಬಾರದು.
* ನಿಗದಿತ ಸ್ಥಳಗಳಲ್ಲಿ ಮಾತ್ರ ಮಲಮೂತ್ರ ವಿಸರ್ಜನೆ ಮಾಡುವುದು.
* ನೀರು ಮತ್ತು ಅದರ ಮೂಲಗಳನ್ನು ಮಲಿನ ಮಾಡಬಾರದು.
* ಅನುಮತಿ ಇಲ್ಲದೆ ನೀರಿಗಿಳಿಯುವುದು, ಈಜುವುದು, ಮರ ಹತ್ತುವುದು, ಬಂಡೆ ಏರುವುದು, ಪ್ರಾಣಿ ಪಕ್ಷಿಗಳನ್ನು ಮುಟ್ಟುವುದು, ಹಿಂಸಿಸುವುದು, ಕೀಟಲೆ ಮಾಡುವುದು ಅಪಾಯಕಾರಿ ಮತ್ತು ನಿಷಿದ್ಧ.
* ಅರಣ್ಯ–ವನ್ಯಜೀವಿ ಪ್ರದೇಶಗಳಲ್ಲಿ ಏರುಧ್ವನಿಯ ಮಾತುಕತೆ, ರೇಡಿಯೊ, ಧ್ವನಿವರ್ಧಕ, ಫೋನ್ ಇತ್ಯಾದಿಗಳನ್ನು ಉಪಯೋಗಿಸಬಾರದು.
* ಸ್ಥಳೀಯ ಜನರನ್ನು ಮೂಲವಾಸಿಗಳನ್ನು ಗೌರವದಿಂದ ಕಾಣಬೇಕು. ಅವರ ಆಚಾರ–ವಿಚಾರಗಳಿಗೆ ಧಕ್ಕೆ ತರಬಾರದು.
* ಎಲ್ಲಾ ಚಟುವಟಿಕೆಗಳಲ್ಲಿ ನಿಗದಿತ ಸಮಯವನ್ನು ತಪ್ಪದೆ ಪಾಲಿಸಬೇಕು.

ಈ ಮೇಲಿನ ನೀತಿ–ನಿಯಮ, ವಿಧಿ–ವಿಧಾನಗಳನ್ನು ಗೌರವಿಸಿ ಪಾಲಿಸಿ ಶಿಸ್ತಿನಿಂದ ನಡೆದುಕೊಳ್ಳುವವರಿಗೆ ಮಾತ್ರ ಅರಣ್ಯ–ವನ್ಯಜೀವಿ ಪ್ರವಾಸವಿರುತ್ತದೆ. ಭಾರತದಲ್ಲಿ ಅರಣ್ಯ–ವನ್ಯಜೀವಿ ಪ್ರವಾಸೋದ್ಯಮಕ್ಕೆ ಸೂಕ್ತ ಅಕ್ಟೋಬರ್‌ನಿಂದ–ಫೆಬ್ರವರಿ, ಜೂನ್–ಸೆಪ್ಟೆಂಬರ್ ಮಳೆಗಾಲ, ಮಾರ್ಚ್–ಮೇ ಬೇಸಿಗೆ ಕಾಲವಾದ್ದರಿಂದ ಸೂಕ್ತವಲ್ಲ. ಅರಣ್ಯ, ವನ್ಯಜೀವಿ–ಪರಿಸರ ಪ್ರವಾಸೋದ್ಯಮಗಳಲ್ಲಿ ಸೂಕ್ತ ಕಾಲಗಳಲ್ಲಿ ಪ್ರವಾಸ ಕೈಗೊಂಡು ಭವ್ಯಭಾರತದ ವೈವಿಧ್ಯಮಯ ಸಸ್ಯ–ಪ್ರಾಣಿ–ಪಕ್ಷಿ ಸಂಪತ್ತು, ಜೀವ ವೈವಿಧ್ಯತೆ, ಸಂಸ್ಕೃತಿ–ಸಂಪ್ರದಾಯ ಮತ್ತು ಶ್ರೀಮಂತ ಇತಿಹಾಸವನ್ನು ಅಧ್ಯಯನ ಮಾಡಿ, ಮನರಂಜಿಸಿ, ವಿಹರಿಸಿ, ವಿರಮಿಸಿ ಮನಸ್ಸು ಮತ್ತು ದೇಹವನ್ನು ಪುನಃಶ್ಚೇತನಗೊಳಿಸಿಕೊಂಡು ವಾಪಸ್ಸಾಗಿ ನಿಮ್ಮ ಕರ್ತವ್ಯ ನಿರ್ವಹಿಸಿರಿ. ❑

# ವಾರ್ತಾ ವಿಶೇಷ

ದೇಶದ ವಿದೇಶಿ ವಿನಿಮಯ ಸಂಗ್ರಹವು ಏಪ್ರಿಲ್ 3ಕ್ಕೆ ಕೊನೆಗೊಂಡ ವಾರದಲ್ಲಿ ರೂ. 10,153 ಕೋಟಿಗಳಷ್ಟು ಹೆಚ್ಚಾಗಿದ್ದು, ಒಟ್ಟು ರೂ. 21. 35 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಅಂಕಿ–ಅಂಶ ತಿಳಿಸಿದೆ. ಮಾರ್ಚ್ 27ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ವಿನಿಮಯವು ರೂ. 8,593 ಕೋಟಿಗಳಷ್ಟು ಏರಿಕೆ ಕಂಡು, ರೂ. 21.23 ಲಕ್ಷ ಕೋಟಿಗಳಷ್ಟಾಗಿತ್ತು. ದೇಶದ ವಿದೇಶಿ ಕರೆನ್ಸಿ ರೂ. 14,945 ಕೋಟಿಗಳಷ್ಟು ಹೆಚ್ಚಾಗಿ, ರೂ. 19.86 ಲಕ್ಷ ಕೋಟಿಗಳಿಗೆ ಏರಿಕೆಯಾಗಿತ್ತು.

* * *

ಫೆಬ್ರವರಿಯಲ್ಲಿನ ಕೈಗಾರಿಕಾ ಕ್ಷೇತ್ರದ ಉತ್ಪಾದನೆ ಶೇ. 5 ರಷ್ಟು ಪ್ರಗತಿ ದಾಖಲಿಸಿದೆ. ಇದು ಕಳೆದ 9 ತಿಂಗಳಲ್ಲಿಯೇ ಗರಿಷ್ಠ ಮಟ್ಟದ ಪ್ರಗತಿಯಾಗಿದೆ.

ಕೈಗಾರಿಕೆಗಳ ಉತ್ಪಾದನಾ ಸೂಚ್ಯಂಕದ (ಐಐಪಿ) ಮೂಲಕ ಅಳೆಯಲಾಗುವ ಕಾರ್ಖಾನೆಗಳ ತಯಾರಿಕೆ ಚಟುವಟಿಕೆಯು 2014ರ ಫೆಬ್ರವರಿಯಲ್ಲಿ ಶೇ. 2ರಷ್ಟು ಕುಸಿತ ದಾಖಲಿಸಿತ್ತು. 2014–15ನೇ ಹಣಕಾಸು ವರ್ಷದ ಏಪ್ರಿಲ್–ಫೆಬ್ರವರಿ ನಡುವಿನ ಅವಧಿಯಲ್ಲಿ ಐಐಪಿ ಶೇ. 2.8ರಷ್ಟು ಸಾಧನೆ ತೋರಿದೆ ಎಂದು ಕೇಂದ್ರ ಅಂಕಿ ಅಂಶ ಇಲಾಖೆ ವರದಿ ಪ್ರಕಟಿಸಿದೆ. ತಯಾರಿಕಾ ವಲಯದ ಒಟ್ಟು 22 ಕೈಗಾರಿಕೆಗಳಲ್ಲಿ 15 ಕೈಗಾರಿಕೆಗಳು ಉತ್ತಮ ಪ್ರಗತಿ ಸಾಧಿಸಿವೆ.

* * *

ದೇಶದ ಸಕ್ಕರೆ ತಯಾರಿಕೆ 2014–15ನೇ ಹಣಕಾಸು ವರ್ಷದ ಏಪ್ರಿಲ್ 15ರವರೆಗೆ ಶೇ. 15ರಷ್ಟು ಹೆಚ್ಚಾಗಿದ್ದು, ಒಟ್ಟು 263.50 ಲಕ್ಷ ಟನ್‌ಗಳಿಗೆ ತಲುಪಿದೆ.

* * *

ದೇಶದ ಸೇವೆಗಳ ಉದ್ಯಮ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯು ಏಪ್ರಿಲ್ – ಜನವರಿ ಅವಧಿಯಲ್ಲಿ ಶೇ. 47ರಷ್ಟು ಹೆಚ್ಚಳವಾಗಿದ್ದು, ರೂ. 16,500 ಕೋಟಿಗಳಿಗೆ ತಲುಪಿದೆ. ವ್ಯಾಪಾರ ವಹಿವಾಟು ನಡೆಸಲು ಮತ್ತು ವಿದೇಶಿ ಹೂಡಿಕೆ ಆಕರ್ಷಿಸಲು ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಕ್ರಮಗಳಿಂದಾಗಿ ಎಫ್‌ಡಿಐ ಒಳಹರಿವು ಹೆಚ್ಚಿದೆ. ಬ್ಯಾಂಕಿಂಗ್, ವಿಮೆ, ಹೊರಗುತ್ತಿಗೆ, ಸಂಶೋಧನೆ ಮತ್ತು ಅಭಿವೃದ್ಧಿ, ಕೊರಿಯರ್ ಮತ್ತು ತಂತ್ರಜ್ಞಾನ ಪರೀಕ್ಷೆ ಒಳಗೊಂಡಿರುವ ವಿವಿಧ ಸೇವೆಗಳ ಉದ್ಯಮ ವಲಯಕ್ಕೆ 2013–14ರ ಏಪ್ರಿಲ್–ಜನವರಿ ಅವಧಿಯಲ್ಲಿ ರೂ. 11,250 ಕೋಟಿಗಳಷ್ಟು ವಿದೇಶಿ ನೇರ ಬಂಡವಾಳ ಹರಿದು ಬಂದಿತ್ತು.

ಸೇವಾ ವಲಯದಲ್ಲಿ ಎಫ್‌ಡಿಐ ಪ್ರಗತಿ ಕಂಡಿರುವುದರಿಂದ 2014–15ರ ಮೊದಲ 10 ತಿಂಗಳಿನಲ್ಲಿ ಒಟ್ಟಾರೆ ಎಫ್‌ಡಿಐ ಶೇ. 36ರಷ್ಟು ಅಂದರೆ ರೂ. 15.95 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ ಎಂದು ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆ (ಡಿಐಪಿಪಿ) ಮಾಹಿತಿ ನೀಡಿದೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.________________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, East Block-IV, Level-7, R.K.Puram, New Delhi – 110066. Ph : 011-26100207, 26105590

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number